ಸಂಪುಟ: 13 Volume | ಸಂಚಿಕೆ: 353 Issue | ಪುಟಗಳು 08 Pages | ಬುಧವಾರ 18 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**

ಧೈರ್ಯ ಅಂದರೆ ಭಯ ಇಲ್ಲದಿರುವುದಲ್ಲ, ಭಯದ ಮೇಲೆ ಜಯ ಸಾಧಿಸುವುದು.

–ನೆಲ್ಸನ್ ಮಂಡೇಲಾ

ಶ್ರೀಗಂಧ ಕಳ್ಳರ ಬಂಧನಕ್ಕೆ ಎಸ್ಪಿಗೆ ಮನವಿ 6

ಸಿಡಿಲು ಬಡಿದು ಬಾಲಕ ಸಾವು 7

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ 8

## ಮಲ್ಲಮ್ಮ ನುಡಿ

### ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಪಾಕಿಸ್ತಾನ್ ದಾಳಿಗೆ 400 ಜನ ಸಾವು, ಖಂಡನೆ

- ಮಲ್ಲಮ್ಮ ನುಡಿ ವಾರ್ತೆ ನವದೆಹಲಿ



ಅಫ್ಘಾನಿಸ್ತಾನದ ಕಾಬೂಲ್‌ನಲ್ಲಿರುವ ಓಮಿಡ್ ಆಸ್ಪತ್ರೆಯ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯನ್ನು ಭಾರತ ಖಂಡಿಸಿದೆ. ಈ ದಾಳಿಯಲ್ಲಿ ಕನಿಷ್ಠ 400 ಜನ ಸಾವನ್ನಪ್ಪಿದ್ದು, ಹಲವಾರು ಜನ ಗಾಯಗೊಂಡಿದ್ದಾರೆ.

ಈ ದಾಳಿಯನ್ನು "ಅನಾಗರಿಕ" ಮತ್ತು "ಹೇಡಿತನದ ಕೃತ್ಯ" ಎಂದು ಕರೆದ ವಿದೇಶಾಂಗ ಸಚಿವಾಲಯ (MEA), ಪಾಕಿಸ್ತಾನವು "ಹತ್ಯಾಕಾಂಡವನ್ನು ಮಿಲಿಟರಿ ಕಾರ್ಯಾಚರಣೆಯಾಗಿ ಬಿಂಬಿಸಲು ಪ್ರಯತ್ನಿಸುತ್ತಿದೆ" ಎಂದು ಹೇಳಿದೆ."ಇದು ಹೇಡಿತನದ ಕೃತ್ಯವಾಗಿದ್ದು, ಅಸಹ್ಯಕರ ಹಿಂಸಾಚಾರವಾಗಿದೆ. ಇದನ್ನು ಮಿಲಿಟರಿ ಟಾರ್ಗೆಟ್ ಎಂದು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಇದು ಹೆಚ್ಚಿನ ಸಂಖ್ಯೆಯ ನಾಗರಿಕರ ಜೀವಗಳನ್ನು ಬಲಿ ತೆಗೆದುಕೊಂಡಿದೆ" ಎಂದು MEA ತೀಕ್ಷ್ಣವಾದ ಪ್ರತಿಕ್ರಿಯೆ ನೀಡಿದೆ. ಆಸ್ಪತ್ರೆಯ ಮೇಲಿನ ದಾಳಿಯು ಪಾಕಿಸ್ತಾನದ ಘೋರ ಆಕ್ರಮಣಕಾರಿ ಕೃತ್ಯ. ಅಫ್ಘಾನಿಸ್ತಾನದ ಸಾರ್ವಭೌಮತ್ವದ ಮೇಲಿನ ದಾಳಿ. ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆ ಎಂದು ವಿದೇಶಾಂಗ ಸಚಿವಾಲಯ ಆಕ್ರೋಶ ಹೊರಹಾಕಿದೆ., ರಕ್ಷಣಾ ಸಿಬ್ಬಂದಿಗಳು ಮತ್ತು ಅಗ್ನಿಶಾಮಕ ದಳಗಳು ರಕ್ಷಣಾ ಕಾರ್ಯಾಚರಣೆಯನ್ನು ನಡೆಸುತ್ತಿವೆ ಎಂದು ತಿಳಿಸಿದ್ದಾರೆ.

## ಮುಚ್ಚುವ ಭೀತಿಯಲ್ಲಿ ಪ್ಯಾರಾ ಮೆಡಿಕಲ್

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ವಿಜ್ಞಾನ ಹಿನ್ನೆಲೆಯ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಷ್ಟೇ ಅರ್ಹತೆ ಇರಲಿದೆ ಎಂಬ ಸಹಾಯಕ ಮತ್ತು ಆರೋಗ್ಯ ಸೇವಾ ವೃತ್ತಿಗಳ ರಾಷ್ಟ್ರೀಯ ಆಯೋಗ ತೀರ್ಮಾನದಿಂದ ಕರ್ನಾಟಕದ ಪ್ಯಾರಾಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿಯಲ್ಲಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಎಂಎಲ್ಸಿ ಐವಾನ್ ಡಿಸೋಜ ಅವರು ಕೇಳಿದ ಪ್ರಶ್ನೆಗೆ ಸಚಿವ ಉತ್ತರಿಸಿದ್ದಾರೆ. ಆಯೋಗದ ಹೊಸ ನಿಯಮದಿಂದ ಕರ್ನಾಟಕದ 640 ಪ್ಯಾರಾಮೆಡಿಕಲ್ ಕಾಲೇಜುಗಳಲ್ಲಿ (32 ಸರ್ಕಾರಿ ಮತ್ತು 608 ಖಾಸಗಿ) ವಿದ್ಯಾರ್ಥಿಗಳ ಕೊರತೆ ಉಂಟಾಗುವ ಸಾಧ್ಯತೆ ಇದೆ ಎಂದು ಐವಾನ್ ಡಿಸೋಜಾ ಆತಂಕ ವ್ಯಕ್ತಪಡಿಸಿದ್ದಾರೆ. ಪ್ಯಾರಾಮೆಡಿಕಲ್ ಕೋರ್ಸ್‌ಗಳನ್ನು ಆಯ್ಕೆಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಇದು ದೊಡ್ಡ ಅಡ್ಡಿಯಾಗಿದೆ ಎಂದಿದ್ದಾರೆ.

# ಬೈ ಎಲೆಕ್ಷನ್ ಬಿಗ್ ಫೈಟ್

## ಏಪ್ರಿಲ್ 9 ರಂದು ರಾಜ್ಯದ ಎರಡೂ ಕ್ಷೇತ್ರಗಳಿಗೆ ಉಪ ಚುನಾವಣೆ | ಟಿಕೆಟ್ ಆಕಾಂಕ್ಷಿಗಳ ಕಸರತ್ತು

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಏಪ್ರಿಲ್ 9 ರಂದು ರಾಜ್ಯದ ಎರಡು ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್‌ಗೆ ಇದು ಪ್ರತಿಷ್ಠೆಯಾಗಿ ಪರಿಣಮಿಸಿದೆ. ಕುದಿಯುತ್ತಿರುವ ರಾಜಕೀಯ ಪರಿಸ್ಥಿತಿಯಲ್ಲಿ ಎರಡು ಕ್ಷೇತ್ರಗಳಲ್ಲಿ ಗೆಲ್ಲಲೇ ಬೇಕಾದ ಅನಿವಾರ್ಯತೆ ಇದೆ. ಆದರೆ ಈ ಉಪ ಚುನಾವಣೆ ಕಾಂಗ್ರೆಸ್ ಪಾಲಿಗೆ ಕಠಿ ಪರೀಕ್ಷೆಯಾಗಿದೆ. ಸಾಂಪ್ರದಾಯಿಕವಾಗಿ ದಾವಣಗೆರೆ ದಕ್ಷಿಣ ಕೈಪಡೆಗೆ ಸುರಕ್ಷಿತ ಅನ್ನಿಸಿದರೂ, ಬಾಗಲಕೋಟೆಯ ಗೆಲ್ಲುವುದು ಕಠಿಣ ಹಾದಿಯಾಗಿದೆ. ಇದಕ್ಕೆ ಈ ಹಿಂದಿನ 3 ಅವಧಿಯ ಚುನಾವಣಾ ಫಲಿತಾಂಶವೇ ಸಾಕ್ಷಿ..!

**ಡಿಕೆಶಿ ಮತ್ತೆ ದೆಹಲಿಗೆ:** ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗಾಗಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆ ಬಗ್ಗೆ ಹೈಕಮಾಂಡ್ ಜೊತೆ ಚರ್ಚೆ ನಡೆಸಲು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳುದ್ದಾರೆ. ಅಸ್ಸಾಂ ವಿಧಾನಸಭೆ ಚುನಾ ವಣೆಯ ಉಸ್ತುವಾರಿಯಾ ಗಿರುವ ಡಿ.ಕೆ.ಶಿ, ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಎರಡು ಕ್ಷೇತ್ರಗಳ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವ ಸಪಥ ಮಾಡಿದ್ದಾರೆ. ವಿಶೇಷವೆಂದರೆ, 2023ರ ಚುನಾವಣೆಯಲ್ಲಿ ಈ ಎರಡು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳೇ ಗೆಲುವು ಸಾಧಿಸಿದ್ದರು.




### ದಾವಣಗೆರೆ ದಕ್ಷಿಣದಲ್ಲಿ ಟಿಕೆಟ್..?

ದಾವಣಗೆರೆ ದಕ್ಷಿಣದಲ್ಲೂ ಈ ಬಾರಿ ಅಲ್ಪಸಂಖ್ಯಾತರಿಗೆ ಮಣೆ ಹಾಕಬೇಕೆಂದು ಒತ್ತಾಯಗಳು ಕೇಳಿ ಬರುತ್ತಿವೆ. ಶ್ಯಾಮನೂರು ಶಿವಶಂಕರಪ್ಪ ಅವರ ನಿಧನದಿಂದಾಗಿ ತೆರವಾಗಿರುವ ಕ್ಷೇತ್ರಕ್ಕೆ, ಕುಟುಂಬದ ಸದಸ್ಯರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಾಯಗಳು ಕೇಳಿ ಬಂದಿವೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಅವರ ಹೆಸರು ಮುನ್ನೆಲೆಗೆ ಬಂದಿದೆ.

### ಸಿಎಂಗೇ ಬಿಜೆಪಿ ಚೆಕ್‌ಮೇಟ್..!

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೇ ಚೆಕ್ ಮೇಟ್ ನೀಡಲು ಬಿಜೆಪಿ ತಂತ್ರ ರೂಪಿಸುತ್ತಿದೆ. ಕುರುಬ ಸಮುದಾಯದ ಜಿ ಬಿ ವಿನಯ್ ಕುಮಾರ್ ಅವರನ್ನು ಕಣಕ್ಕಿಳಿಸುವ ಮೂಲಕ ಸಿಎಂಗೆ ಸವಾಲು ಒಡ್ಡಲು ಯೋಜಿಸಿದೆ.

### ಇಬ್ಬರ ಜಗಳ, ಅವರಿಗೆ ಲಾಭ

ದಾವಣಗೆರೆ ದಕ್ಷಿಣ ಸ್ಥಾನದ ಬಗ್ಗೆ ಬಿಜೆಪಿಯಲ್ಲಿ ನಡೆಯುತ್ತಿರುವ ಗುಂಪುಗಾರಿಕೆ ವಿನಯ್‌ಗೆ ವರದಾನ. ಮಾಜಿ ಸಚಿವ ಎಂ ಪಿ ರೇಣುಚಾರ್ಯ, ಮಾಜಿ ಎಂಪಿ ಜಿ ಎಂ\ಸಿದ್ದೇಶ್ವರ ಬಣಗಳು ಬಿ ಜಿ ಅಜಯ್ ಕುಮಾರ್, ಯಶವಂತರಾವ್ ಜಾಧವ್ ಅವರ ಹೆಸರುಗಳನ್ನು ಪ್ರಸ್ತಾಪಿಸುವ ಮೂಲಕ ಟಿಕೆಟ್ಟಾಗಿ ಹೋರಾಡುತ್ತಿವೆ. ಆದರೆ ಹೈಕಮಾಂಡ್ ವಿನಯ್‌ಗೆ ಕಣಕ್ಕಿಳಿಸಿದರೆ ಎರಡೂ ಬಣ ಒಪ್ಪಿಕೊಳ್ಳುವ ಸಾಧ್ಯತೆ ಇದೆ ಎಂದಿದೆ ಸುದ್ದಿಮೂಲ.

### ಬಾಗಲ ಕೋಟ ಅಭ್ಯರ್ಥಿ?

ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರ ಕಟ್ಟಾ ಅನುಯಾಯಿ ಎಚ್.ವೈ.ಮೇಟಿ ಈ ಹಿಂದೆ ಆಯ್ಕೆಯಾಗಿದ್ದರು. ಈ ಕಾರಣಕ್ಕೆ ಮೇಟಿ ಅವರ ಕುಟುಂಬದ ಸದಸ್ಯರಿಗೇ ಮತ್ತೆ ಟಿಕೆಟ್ ಕೊಡಬೇಕೆಂಬ ಒತ್ತಾಯವಿದೆ. ಮೇಟಿಯವರ ಮಕ್ಕಳಾದ ಬಾಯಕ್ಕ, ಉಮಾವತಿ, ಮಲ್ಲಿಕಾರ್ಜುನ್ ಮತ್ತು ಉಮೇಶ್ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಮಹಿಳಾ ಪ್ರಾಧಾನ್ಯ ಹಿನ್ನೆಲೆಯಲ್ಲಿ ಬಾಯಕ್ಕ ಅವರನ್ನು ಪರಿಗಣಿಸುವ ಸಾಧ್ಯತೆ ಇದೆ.



ನಾಯಕ ನಟ ಅಪ್ಪುಅವರ ಹುಟ್ಟುಹಬ್ಬ ಅಂದರೆ ಅಭಿಮಾನಿಗಳಿಗೆ ಹಬ್ಬ. ರಾಜ್ಯದ ಮೂಲೆ ಮೂಲೆಯಿಂದ ಅವರನ್ನ ನೋಡಲು ಬೆಂಗಳೂರಿಗೆ ಬಂದ ಅಭಿಮಾನಿಗಳು, ಗುಲಾಬಿ ಹಿಡಿದು, ಅಪ್ಪು ಭಾವಚಿತ್ರಕ್ಕೆ ಹೂ ಅರ್ಪಿಸಿದ್ದು, ಅವರ ಕುಟುಂಬದ ಸದಸ್ಯರೂ ನಮನ ಸಲ್ಲಿಸಿದ್ದಾರೆ.

## ಸಿಡಿಲಿಗೆ ಬಲಿ, ಹಲವೆಡೆ ಮಳೆ

**ಬೀದರ್:** ಜಿಲ್ಲೆಯ ಹುಮ್ನಾಬಾದ್ ತಾಲೂಕಿನಲ್ಲಿ ರೈತನೊಬ್ಬ ಸಿಡಿಲು ಬಡಿದು ಮೃತಪಟ್ಟಿದ್ದಾರೆ.



ಮುತ್ತಂಗಿ ಗ್ರಾಮದ ನಿವಾಸಿ ವೈಜನಾಥ್ ಶೇರೆಗಾರ್ (60) ಮೃತರು. ಜಮೀನಿನಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ ಸಿಡಿಲು ಬಡಿದಿದೆ.

ಈ ಘಟನೆಯಲ್ಲಿ ಅವರ ಮಗ ಶ್ರೀನಿವಾಸ್ ಸುಟ್ಟಗಾಯಗಳಾಗಿವೆ. ಮನ್ನಾಖೇಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಹುಮ್ನಾಬಾದ್ ಮತ್ತು ಚಿಟಗುಪ್ಪ ತಾಲೂಕುಗಳ ಅನೇಕ ಭಾಗಗಳಲ್ಲಿ ಗುಡುಗು ಸಹಿತ ಮಧ್ಯಮ ಮಳೆಯಾಗಿದೆ. ಕಲಬುರಗಿ ನಗರದಲ್ಲಿ ಲಘು ಮಳೆಯಾಗಿದ್ದರೆ, ಚಿಂಚೋಳಿಯಲ್ಲಿ ಆಲಿಕಲ್ಲು ಮಳೆಯಾಗಿದೆ.

## ಸಿಎಂ ಡಿನ್ನರ್ ಪಾರ್ಟಿ, ಮಂತ್ರಿಗಿರಿ ಚರ್ಚೆ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ 15–16 ಸಚಿವರಿಗಾಗಿ ಭೋಜನ ಕೂಟ ಆಯೋಜಿಸಿದ್ದರು.

ಆದರೆ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಹಾಜರಾಗಿರಲಿಲ್ಲ. ಆದರೆ ಸಿದ್ದರಾಮಯ್ಯ ಅವರು ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿರುವ ತಮ್ಮ ಕಚೇರಿಗೆ ಕರೆಸಿ ಮಾತನಾಡಿದರು. ಜೊತೆಗೆ ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ ಎಂದು ಸಂದೇಶ ರವಾನಿಸಿದ್ದಾರೆ. ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಆರ್ಡಿಪಿಆರ್ ಸಚಿವ ಪ್ರಿಯಾಂಕ್ ಖರ್ಗೆ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತು ಅರಣ್ಯ ಸಚಿವ ಈಶ್ವರ್ ಖಂಡ್ರೆ ಭೋಜನ ಕೂಟದಲ್ಲಿ ಭಾಗವಹಿಸಿದ್ದವರು ಎಂದು ಮೂಲಗಳು ತಿಳಿಸಿವೆ.

## ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಆಲ್‌ದಿ ಬೆಸ್ಟ್

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಎಸ್ಸೆಸ್ಸೆಲ್ಸಿ ಪರೀಕ್ಷೆ ರಾಜ್ಯಾದ್ಯಂದ ಇಂದಿನಿಂದ ಆರಂಭವಾಗಲಿದ್ದು, ಪತ್ರಿಕಾ ಬಳಗವು ಆಲ್‌ದಿ ಬೆಸ್ಟ್ ಎಂದು ಶುಭಹಾರೈಸಿದೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಅತಿ ಮಹತ್ವದ ಘಟ್ಟ ಎನಿಸಿದ ಪ್ರಸಕ್ತ 2026 –27ನೇ ಸಾಲಿನ ಎಸ್‌ಎಸ್‌ಎಲ್ಸಿ –1 ಪರೀಕ್ಷೆಯು ಇಂದಿನಿಂದ ಭಿಗಿ ಭದ್ರತಾ ನಡುವೆ ಆರಂಭವಾಗಲಿದೆ.

ಪ್ರಥಮ ಭಾಷಾ ಪತ್ರಿಕೆಯೊಂದಿಗೆ ಪರೀಕ್ಷೆ ಆರಂಭವಾವಾಗಿ ಏಪ್ರಿಲ್ 2ರಂದು ಸಮಾಜ ವಿಜ್ಞಾನ ಪತ್ರಿಕೆಯೊಂದಿಗೆ ಮುಕ್ತಾಯಗೊಳ್ಳಲಿದೆ. ಪರೀಕ್ಷೆಗಳು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.15 ಗಂಟೆಯವರೆಗೆ ನಡೆಯಲಿವೆ.

ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಒಟ್ಟು 9,02,889 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ 8,12,855 ಹೊಸಬರು, 62,845 ಪುನರಾವರ್ತಿತ ವಿದ್ಯಾರ್ಥಿಗಳು, 27,189 ಖಾಸಗಿ ವಿದ್ಯಾರ್ಥಿಗಳಿದ್ದು, 2,871 ಒಟ್ಟು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆ–ಯುತ್ತದೆ. ವಿದ್ಯಾರ್ಥಿಗಳಿಗೆ ಈಗಾಗಲೇ ಮಾದರಿ ಪ್ರಶ್ನೆಪತ್ರಿಕೆಗಳನ್ನು ವಿತರಿಸಲಾಗಿದೆ.

## ಪಾಟೀಲ ಪರಿವಾರದಿಂದ ಇಫ್ತಾರ್



- ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ರಂಜಾನ್ ಪವಿತ್ರ ಮಾಸದ ಅಂಗವಾಗಿ ಪಾಟೀಲ ಪರಿವಾರದಿಂದ ಮಂಗಳವಾರ ಇಫ್ತಾರ್ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಉಪವಾಸದಲ್ಲಿರುವ ಮುಸ್ಲಿಂ ಬಾಂಧವರು ಸೂರ್ಯಾಸ್ತದ ನಂತರ ಉಪವಾಸ ಮುರಿದು ಪ್ರಾರ್ಥನೆ ಸಲ್ಲಿಸಿ, ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಇಫ್ತಾರ್ ಕಾರ್ಯಕ್ರಮದಲ್ಲಿ ವಿವಿಧ ಸಮುದಾಯದ ಗಣ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿ, ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶವನ್ನು ಸಾರಿದರು. ರಂಜಾನ್ ಮಾಸವು ಶಾಂತಿ, ಸಹನೆ ಮತ್ತು ಮಾನವೀಯತೆ ಸಾರುವ ಪವಿತ್ರ ಕಾಲವಾಗಿದ್ದು, ಎಲ್ಲರೂ ಒಗ್ಗಟ್ಟಿನಿಂದ ಬದುಕುವಂತೆ ಪ್ರೇರೇಪಿಸುತ್ತದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ತಿಳಿಸಿದರು. ಾಟೀಲ ಪರಿವಾರದಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಉಪಹಾರ ವ್ಯವಸ್ಥೆ ಮಾಡಲಾಗಿದ್ದು, ಪರಸ್ಪರ ಪ್ರೀತಿ ಹಾಗೂ ಭಾವೈಕ್ಯತೆಯ ವಾತಾವರಣ ನಿರ್ಮಾಣವಾಯಿತು. ಈ ಸಂದರ್ಭದಲ್ಲಿ ಜಿಲ್ಲೆಯ ಹಾಗೂ ದೇಶದ ಜನತೆಗೆ ಸುಖ, ಶಾಂತಿ ಮತ್ತು ಸಮೃದ್ಧಿ ಲಭಿಸಲಿ ಎಂದು ಪ್ರಾರ್ಥಿಸಲಾಯಿತು

## ಸಂಬಳಕ್ಕೆ ಹಾಜರ್, ಕಚೇರಿ ಟೈಂಗೆ ಚಕ್ಕರ್

- ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ತಾಲೂಕಿನ ಚಾಂಗಲೇರಾ ಗ್ರಾಮ ಪಂಚಾಯತ್‌ನಲ್ಲಿ ಕಚೇರಿಯ ಸರಿಯಾದ ಸಮಯಕ್ಕೆ ಬಹುತೇಕ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಹಾಜರಿರುವುದೇ ಇಲ್ಲ..! ಅವರು ಇರದೇ ಇರುವುದರಿಂದ ತಮ್ಮ ಕೆಲಸ ಕಾರ್ಯಗಳು ಮಾಡಿಕೊಳ್ಳಲು ಬರುವ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ.

ಗ್ರಾ.ಪಂ.ಕಚೇರಿಯ ಸಮಯಕ್ಕೆ ಬೆಳಗ್ಗೆ ಹಿರಿಯರು, ಸಿಪಾಯಿ ಸಹಾಯಕ ಸೇರಿದಂತೆ ಯಾವೊಬ್ಬ ಸಿಬ್ಬಂದಿಯು ಹಾಜರಿರುವುದಿಲ್ಲ. ಅವರು ಬಂದಾಗೇ ಕೆಲ್ಸ. ನಾವು ಯಾರ್ ಹತ್ರ ಹೇಳಬೇಕು..?

–ಹೆಸರು ಹೇಳಲು ಇಚ್ಛಿಸದ ಗ್ರಾಮದ ಹಿರಿಯರು

### ಮೇಲಧಿಕಾರಿಗಳ ನೋಟಿಸ್‌ಗೂ ಡೋಂಟ್‌ಕೇರ್

ಇದೇ ವಿಷಯವನ್ನು ಈ ಹಿಂದೆ–ಯೂ ಹಲವಾರು ಬಾರಿ ಮೇಲಧಿಕಾರಿಗಳ ಗಮನಕ್ಕೆ ತರಲಾಯಿತು. ಅಧಿಕಾರಿಗಳು ಅಭಿವೃದ್ಧಿ ಅಧಿಕಾರಿಗೆ ಹಲವಾರು ಬಾರಿ ನೋಟಿಸ್ ನೀಡಿದರೂ ಕ್ಯಾರೇ ಎನ್ನುತ್ತಿಲ್ಲ. ಸಾರ್ವಜನಿಕರು ಕಟ್ಟುತ್ತಿರುವ ಲಕ್ಷಾಂತರ ರೂಪಾಯಿ ಸರ್ಕಾರದ ಸಂಬಳ ಪಡೆದರೂ ಸರಿಯಾದ ಸಮಯಕ್ಕೆ ಕಚೇರಿಗೆ ಬರುತ್ತಿಲ್ಲ. ಇಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಚಾಂಗಲೇರಾ ಗ್ರಾ.ಪಂ ಖಾಲಿ ಖಾಲಿ




**ಅಧಿವೇಶನದಲ್ಲಿ ಶಾಸಕರ ಪ್ರಶ್ನೆಗೆ ಸಚಿವರು, ಅಧಿಕಾರಿಗಳಿಂದ ಸಮರ್ಪಕ ಉತ್ತರ ಸಿಗದಿದ್ದಕ್ಕೆ ಅಧಿಕಾರಿಗಳ ವಿರುದ್ಧ ನೋಟಿಸ್ ಜಾರಿಗೆ ಸಿಎಂ ಸೂಚನೆ**

# ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಸಹಾಯವಾಣಿ



**ಮಲ್ಲಮ್ಮ ನುಡಿ ವಾರ್ತೆ ಚಿಟಗಪ್ಪ**

ತಾಲೂಕು ಮಟ್ಟದ 14 ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಲು ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಹಾಯವಾಣಿ ಕೇಂದ್ರ ಸ್ಥಾಪಿಸಲಾಗಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮೀ ಬಿರಾದಾರ ತಿಳಿಸಿದ್ದಾರೆ. ತಾ.ಪಂ ಸಹಾಯವಾಣಿ ಕೇಂದ್ರದ ಮೊಬೈಲ್ ನಂ- 9731572359 ಹಾಗೂ 14 ಗ್ರಾ. ಪಂ ಸಹಾಯವಾಣಿ ಕೇಂದ್ರಗಳ ನಂಬರ ಈ ಕೆಳಗಿನಂತಿವೆ. ಸಾರ್ವಜನಿಕರು ದೂರವಾಣಿ ಸಂಪರ್ಕ ಮಾಡುವ ಮೂಲಕ ತಮ್ಮ ದೂರು ದಾಖಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆಗಳಿದ್ದಲ್ಲಿ ಬೆಳಕೇರಾ- 9731885052, ಬೆಮಳಖೇಡ- 9880252123, ಚಾಂಗಲೇರಾ- 8861473412, ಇಟಗಾ-9591648783, ಕೂಡಂಬಲ್-9686745081, ಮಂಗಲಗಿ-9343572990, ಮನ್ನಾಏಖೇಳಿ- 9591934694, ಮಿನಕೇರಾ-9743239115, ಮುಸ್ತರಿ-9986512631, ಮುತ್ತಂಗಿ-9036296989, ನಿರ್ಣಾ-8050216164, ತಾಳಮಡಗಿ-9972146521, ಉಡಬನಳ್ಳಿ-9901648590, ಉಡಬಾಳ-8105475039 ಪಿಡಿಓಗಳ ದೂರವಾಣಿಗೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಕ್ಷೇಮ ಕೇಂದ್ರ ಕಟ್ಟಡಕ್ಕೆ ಗುದ್ದಲಿ ಪೂಜೆ

**ಮಲ್ಲಮ್ಮ ನುಡಿ ವಾರ್ತೆ ಬೀದರ್**

ಗ್ರಾಮಸ್ಥರಿಗೆ ಉತ್ತಮ ಆರೋಗ್ಯ ಸೇವೆಗಳು ದೊರಕುವ ಉದ್ದೇಶದಿಂದ ಈ ಆರೋಗ್ಯ ಕೇಂದ್ರ ನಿರ್ಮಾಣವಾಗುತ್ತಿದ್ದು, ಇದು ಗ್ರಾಮಾಭಿವೃದ್ಧಿಗೆ ಮಹತ್ವದ ಹೆಜ್ಜೆಯಾಗಿದೆ. ಈ ಆರೋಗ್ಯ ಕೇಂದ್ರದ ಮೂಲಕ ಗ್ರಾಮ ಹಾಗೂ ಸುತ್ತಮುತ್ತಲಿನ ಜನತೆಗೆ ಮೂಲಭೂತ ಆರೋಗ್ಯ ಸೇವೆಗಳು ಸುಲಭವಾಗಿ ಲಭ್ಯವಾಗಲಿವೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಬಾವಗಿ ಗ್ರಾಮದಲ್ಲಿ 65 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಕಟ್ಟಡದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.ಗ್ರಾಮಾಭಿವೃದ್ಧಿ ಹಾಗೂ ಸಾರ್ವಜನಿಕ ಸೇವೆಗಳ ಬಲವರ್ಧನೆಗೆ ನಾವು ಬದ್ಧವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಗ್ರಾಮೀಣ ಪ್ರದೇಶದ ಜನರಿಗೆ ಸಮಯಕ್ಕೆ ಸರಿಯಾದ ಚಿಕಿತ್ಸೆ ಸಿಗುವುದು ಬಹಳ ಮುಖ್ಯ. ಇದುವರೆಗೆ ಸಣ್ಣ-ಪುಟ್ಟ ಆರೋಗ್ಯ ಸಮಸ್ಯೆಗಳಿಗೂ ದೂರದ ನಗರಗಳಿಗೆ ಹೋಗಬೇಕಾಗುತ್ತಿತ್ತು. ಆದರೆ ಈ ಹೊಸ ಆಸ್ಪತ್ರೆ ನಿರ್ಮಾಣವಾದ ಬಳಿಕ, ಈ ಗ್ರಾಮದ ಜನರು ತಮ್ಮದೇ ಗ್ರಾಮದಲ್ಲೇ ಉತ್ತಮ ವೈದ್ಯಕೀಯ ಸೇವೆ ಪಡೆಯಲು ಸಾಧ್ಯವಾಗುತ್ತದೆ.

ಈ ಆಸ್ಪತ್ರೆ ಕೇವಲ ಕಟ್ಟಡವಲ್ಲ, ಇದು ಜನರ ಆರೋಗ್ಯದ ಭದ್ರತೆಗೆ ನೀಡುತ್ತಿರುವ ನಮ್ಮ ಬದ್ಧತೆಯ ಪ್ರತೀಕವಾಗಿದೆ.

ಈ ಕಾಮಗಾರಿಯನ್ನು ಶೀಘ್ರವಾಗಿ ಮತ್ತು ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಸೂಚನೆ ನೀಡಿದ್ದೇನೆ. ಜನರ ವಿಶ್ವಾಸಕ್ಕೆ ತಕ್ಕಂತೆ ಈ ಯೋಜನೆ ಸಮಯಕ್ಕೆ ಪೂರ್ಣಗೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಸಂಬಂಧಿಸಿದ ಅಧಿಕಾರಿಗಳು ನಿಯಮಿತವಾಗಿ ಕಾಮಗಾರಿಯ ಮೇಲ್ವಿಚಾರಣೆ ನಡೆಸುವಂತೆ ಸೂಚಿಸಲಾಗಿದೆ ಎಂದರು.

> “ಗ್ರಾಮಸ್ಥರಿಗೆ ಉತ್ತಮ ಆರೋಗ್ಯ ಸೇವೆಗಳು ದೊರಕುವ ಉದ್ದೇಶದಿಂದ ಈ ಆರೋಗ್ಯ ಕೇಂದ್ರ ನಿರ್ಮಾಣವಾಗುತ್ತಿದ್ದು ಕಾಮಗಾರಿಯನ್ನು ಶೀಘ್ರವಾಗಿ ಮತ್ತು ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಸೂಚನೆ ನೀಡಿದ್ದೇನೆ,
>
> **ಡಾ, ಶೈಲೇಂದ್ರ ಬೆಲ್ದಾಳೆ ಬೀದರ ದಕ್ಷಿಣ ಕ್ಷೇತ್ರದ ಶಾಸಕರು**

ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ರೇಣುಕಾ ಜಾಧವ, ಮುಖಂಡರಾದ ರಾಜಕುಮಾರ ಪಾಟೀಲ, ಜಗನ್ನಾಥ ಚಿದ್ರಿ, ಸಂತೋಷ್ ಜಗದಾಳೆ, ಸಂಗಮೇಶ ಹಜ್ಜರಗಿ, ವೀರೇಶ ಬಮಣಿ, ರಾಜಕುಮಾರ ಮಡಿವಾಳ, ಶಿವಕುಮಾರ ಸ್ವಾಮಿ, ಸಿದ್ದಾರೂಢ ಭಾಲ್ಕೆ, ಅರವಿಂದ ಬುಳ್ಳಾ, ಬುದಯ್ಯಾ ಆಚಾರಿ, ನಾಗಶೆಟ್ಟಿ ಸಜ್ಜನಶೆಟ್ಟಿ, ಶಿವಶರಣರಪ್ಪ ರೇಶೆಟ್ಟಿ, ಪ್ರಭು ಕರಕನಳ್ಳಿ, ಮಂಜುನಾಥ ಮರಾಠ, ಸಿದ್ದು ಹಜ್ಜರಗಿ, ಬಾಬುರಾವ ತಾಂಡಾ ಆರೋಗ್ಯ ಇಲಾಖೆ ಸಿಬ್ಬಂದಿ ಮತ್ತಿತರರು ಉಪಸ್ಥಿತರಿದ್ದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ನಿರುದ್ಯೋಗ ಸಮಸ್ಯೆ ಬಗೆಹರಿಯುವಂತೆ ಸರ್ಕಾರ ಕ್ರಮ ಕೈಗೊಳ್ಳಲಿ


ರಾಜ್ಯದಲ್ಲಿ ದಿನೇ ದಿನೇ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿರುವುದು ಚಿಂತಾಜನಕವಾಗಿದೆ. ಉನ್ನತ ಶಿಕ್ಷಣ ಪಡೆದ ಯುವಕರೂ ಸಹ ಕೆಲಸದ ಅವಕಾಶಗಳಿಗಾಗಿ ಅಲೆದಾಡುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಯುವಕರಲ್ಲಿ ನಿರಾಶೆ ಮತ್ತು ಅಸಮಾಧಾನ ಹೆಚ್ಚಾಗುತ್ತಿದೆ.

ಸರ್ಕಾರ ಈ ಗಂಭೀರ ಸಮಸ್ಯೆಯನ್ನು ಗಮನಿಸಿ ಉದ್ಯೋಗ ಸೃಷ್ಟಿಗೆ ವಿಶೇಷ ಯೋಜನೆಗಳನ್ನು ರೂಪಿಸಬೇಕು. ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಬೇಕು, ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೆರವು ನೀಡಬೇಕು. ಇದರಿಂದ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಅವಕಾಶಗಳು ಹೆಚ್ಚಾಗುತ್ತವೆ.

ಇದಲ್ಲದೆ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಳ್ಳಬೇಕು. ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಿ ಉದ್ಯೋಗಕ್ಕೆ ತಯಾರಾಗುವಂತೆ ಮಾಡಬೇಕು.

ಒಟ್ಟಿನಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದು ಸರ್ಕಾರದ ಪ್ರಮುಖ ಹೊಣೆಗಾರಿಕೆಯಾಗಿದ್ದು, ಯುವಕರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ತಕ್ಷಣವೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವಾಗಿದೆ.

# ಧರ್ಮಸ್ಥಳದ ಯೋಜನೆಗಳಿಂದ ಬದುಕಿಗೆ ಆಧಾರ: ಮುರುಳಿಧರ



**ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಂದ ಬದುಕಿಗೆ ಆಧಾರ ಹಾಗೂ ಸ್ವ ಉದ್ಯೋಗಕ್ಕೆ ಆಸರೆಯಾಗಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕರಾದ ಮುರುಳಿಧರ ಎಚ್. ಎಲ್ ಹೇಳಿದರು. ಪಟ್ಟಣದ ಬಾಲಾಜಿ ಮಂದಿರದಲ್ಲಿ ಹೊಲಿಗೆ ಯಂತ್ರದ ಕೌಶಲ್ಯ ಅಭಿವೃದ್ಧಿ ತರಬೇತಿ ಸಮಾರೋಪ ಸಮಾರಂಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬದುಕು ಕಟ್ಟಿಕೊಳ್ಳಲು ಸ್ವಸಹಾಯ ಉದ್ಯೋಗ ಅವಶ್ಯಕ. ಹಣಕಾಸಿನ ನೆರವಿನ ಜೊತೆಗೆ ಜೀವನ ಪರಿವರ್ತನೆ, ಸ್ವಾವಲಂಬಿ ಜೀವನಕ್ಕೆ ಪೂರಕ ಎಂದು ಅಭಿಪ್ರಾಯಪಟ್ಟರು. ಸೋಮನಾಥಪ್ಪ ಅಸ್ಟೂರೆ ಮಾತನಾಡಿ ಕೌಶಲ್ಯ ನೈಪುಣ್ಯತೆಗೆ ತರಬೇತಿಗಳು ಅವಶ್ಯಕ. ಆರ್ಥಿಕ ಸ್ವಾವಲಂಬನೆಗೆ ಸಹಾಯಕ ಎಂದರು. ನಿರಂತರವಾಗಿ 90 ದಿನಗಳ ಕಾಲ ನಡೆದ ಈ ಹೊಲಿಗೆ ಯಂತ್ರದ ತರಬೇತಿಯಲ್ಲಿ ಭಾಗವಹಿಸಿದ 41 ಮಹಿಳೆಯರಿಗೆ ಪ್ರ ಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಶಿವರಾಜ್ ಮಲ್ಲೇಶಿ, ಶ್ರೀನಿವಾಸ ಮೇತ್ರೆ , ಸಂತೋಷ್ ಬಿ ಜಿ ಪಾಟೀಲ್, ಶೃತಿ ಸಂತೋಷ್ ಪಾಟೀಲ್, ತಾಲೂಕಿನ ಯೋಜನಾಧಿಕಾರಿ ಸಂತೋಷ್ ನಾಯಕ್, ಒಕ್ಕೂಟದ ಅಧ್ಯಕ್ಷರಾದ ಛಾಯಾ ವಿಜಯ್ ಕುಮಾರ್ ರಾಜಭವನ್, ಸಹ ಶಿಕ್ಷಕಿ ಜಗದೇವಿ, ಸಂಘದ ಸೇವಾ ಪ್ರತಿನಿಧಿಗಳಾದ ರೇಣುಕಾ ಕನಶೆಟ್ಟಿ, ಸುರೇಖಾ ಕನಶೆಟ್ಟಿ ಉಪಸ್ಥಿತರಿದ್ದರು. ವಲಯ ಮೇಲ್ವಿಚಾರಕರಾದ ಶಿವಾನಂದ ಲಕಾಟಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

> “ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಕಲ್ಪಿಸುವುದು ಪ್ರಮುಖ ಉದ್ದೇಶ. ಸಮಯವನ್ನು ಸದುಪಯೋಗಪಡಿಸಿಕೊಂಡು 41 ಜನರಿಗೆ ಎರಡು ಬ್ಯಾಚುಗಳನ್ನಾಗಿ ಮಾಡಿ ಪ್ರಾಯೋಗಿಕವಾಗಿ ತರಬೇತಿ ನೀಡಲಾಗಿದೆ.
>
> **ಶ್ರುತಿ ಸಂತೋಷ್ ಬಿ ಜಿ ಪಾಟೀಲ್, ಶಿಕ್ಷಕರು, ಭಾಲ್ಕಿ.**

> “ನಮ್ಮ ಬಡಾವಣೆಯಲ್ಲಿ ಈ ಯೋಜನೆಯಿಂದ ಅನೇಕ ಮಹಿಳೆಯರಿಗೆ ಸಹಾಯಕವಾಗಿದೆ. ಈ ಯೋಜನೆ ನೀಡಿದಂತಹ ತಾಯಿ ಹೇಮಾವತಿ ಅಮ್ಮನವರಿಗೆ ಕೃತಜ್ಞತೆಗಳು. ಮಹಿಳಾ ಸಬಲೀಕರಣಕ್ಕೋಸ್ಕರ ಇಂತಹ ಯೋಜನೆಗಳು ಪೂರಕ.
>
> **ಛಾಯಾ ವಿಜಯ್ ಕುಮಾರ್ ರಾಜಭವನ್, ಒಕ್ಕೂಟದ ಅಧ್ಯಕ್ಷರು ಭಾಲ್ಕಿ.**

# ಪೊಲೀಸರ ದಾಳಿ, ಗ್ಯಾಸ್ ಸಿಲಿಂಡರ್, ವಾಹನ ವಶ, ಆರೋಪಿಗಳ ಬಂಧನ





**ಮಲ್ಲಮ್ಮ ನುಡಿ ವಾರ್ತೆ ಬೀದರ**

ಜಿಲ್ಲೆಯಲ್ಲಿ ಅಕ್ರಮವಾಗಿ ಗ್ಯಾಸ್ ಸಿಲಿಂಡರ್‌ಗಳನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಪೊಲೀಸರು ಪತ್ತೆಹಚ್ಚಿ ನಾಲ್ವರು ಆರೋಪಿಗಳನ್ನು ಬಂಧಿಸಿ, ಸುಮಾರು ರೂ.18 ಲಕ್ಷ ಅಧಿಕ ಮೌಲ್ಯದ ಮುದ್ದೆಮಾಲು ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಪೂಜಾರಿ ತಿಳಿಸಿದ್ದಾರೆ.

ನಗರದ ಜಿಲ್ಲಾ ಪೊಲೀಸ್ ಕವಾಯಿತ ಮೈದಾನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.

ಖಚಿತ ಮಾಹಿತಿಯ ಮೇರೆಗೆ ಜನವಾಡ ಗ್ರಾಮದ ನದಿಗೆ ಹೋಗುವ ದಾರಿಯಲ್ಲಿರುವ ಹೊಲದಲ್ಲಿ ಅಕ್ರಮವಾಗಿ ಗ್ಯಾಸ್ ಸಿಲಿಂಡರ್‌ಗಳನ್ನು ಸಂಗ್ರಹಿಸಿ ಕಾಳ ಸಂತೆನಲ್ಲಿ ಮಾರಾಟ ಮಾಡುತ್ತಿದ್ದಾಗ ಜನವಾಡ ಪೊಲೀಸರು ಹಾಗೂ ಆಹಾರ ನಿರೀಕ್ಷಕರಾದ ಶ್ರೀನಿವಾಸ್ ಅವರ ಸಮ್ಮುಖದಲ್ಲಿ ದಾಳಿ ಮಾಡಲಾಗಿದೆ.

ದಾಳಿಯಲ್ಲಿ 23 ತುಂಬಿದ ಗೃಹ ಬಳಕೆ/ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳು ಹಾಗೂ 82 ಖಾಲಿ ಸಿಲಿಂಡರ್‌ಗಳು ಸೇರಿದಂತೆ ಒಟ್ಟು 105 ಸಿಲಿಂಡರ್‌ಗಳನ್ನು ವಶಕ್ಕೆ ಪಡೆಯಲಾಯಿತು. ಜೊತೆಗೆ, ಸಿಲಿಂಡರ್ ಸಾಗಾಣಿಕೆಗೆ ಬಳಸುತ್ತಿದ್ದ ಎರಡು ವಾಹನಗಳನ್ನು ಕೂಡ ಜಪ್ತಿ ಮಾಡಲಾಗಿದೆ. ಜಪ್ತಿ ಮಾಡಿದ ಸಿಲಿಂಡರ್‌ಗಳು ಹಾಗೂ ವಾಹನಗಳ ಒಟ್ಟು ಮೌಲ್ಯ 18,55,255 ಎಂದು ಅಂದಾಜಿಸಲಾಗಿದೆ

ಔರಾದ್ ತಾಲೂಕಿನ ವಡಗಾಂವ ಗ್ರಾಮದ ಮಲ್ಹಾರ್ ಇಂಡಿಯನ್ ಗ್ಯಾಸ್ ಗ್ರಾಮೀಣ ವಿತರಣೆ ಮೂಲಕ ಸಿಲಿಂಡರ್‌ಗಳನ್ನು ಪಡೆದಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ . ಜನವಾಡ ಗ್ರಾಮದ ಮೈಸಮ್ಮ ಪೆಟ್ರೋಲ್ ಬಂಕ್ ಹತ್ತಿರದ ಒಂದು ಅಂಗಡಿಯಲ್ಲಿ ಸಿಲಿಂಡರ್‌ಗಳನ್ನು ಸಂಗ್ರಹಿಸಿ ಇಟ್ಟಿದ್ದಾರೆ,

ಇದೇ ಸಂದರ್ಭದಲ್ಲಿ ಸೆನ್ ಡಿವೈಎಸ್ಪಿ ಎನ್ ಡಿ ಸನ್ನಿಧಿ, ಸಿಪಿಐಗಳಾದ ಜಿ ಎಸ್ ಬಿರಾದಾರ, ಹನುಮವಡ್ಡೆಪ್ಪಾ, ಪಿಎಸ್ಐ ಅಂಬರೀಶ್ ವಾಗಮೋಡೆ, ಎಎಸ್ಐ ಗುಂಡಪ್ಪಾ ರೆಡ್ಡಿ, ಪ್ರಭಾರಿ ಎಎಸ್ಐ ವಿಶ್ವನಾಥ, ಸಂತೋಷ್, ಜನವಾಡ ಠಾಣೆಯ ಸಿಬ್ಬಂದಿಯವರಾದ ವಿಜಯಕುಮಾರ, ಶಿವಕುಮಾರ, ಶಾಂತಕುಮಾರ,

ಡಿಎಸ್ ಬಿ ಘಟಕದ ಅಧಿಕಾರಿಗಳು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು,

ಯಶಸ್ವಿ ಕಾರ್ಯಾಚರಣೆ ನಡೆಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಶ್ಲಾಘಿಸಿದ್ದಾರೆ.

> **ಜನ ಆರೋಪಿಗಳ ಬಂಧನ**
>
> “ಒಟ್ಟು ನಾಲ್ಕು ಗ್ಯಾಸ್ ಏಜೆನ್ಸಿ ವಿರುದ್ಧ ಪ್ರಕರಣ ದಾಖಲಾಗಿದೆ,
>
> 18 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತು ಜಪ್ತಿ 23 ತುಂಬಿದ ಸಿಲಿಂಡರ ಹಾಗೂ 82 ಖಾಲಿ ಒಟ್ಟು 105 ಸಿಲಿಂಡರ ಜಪ್ತಿ ಮಾಡಲಾಗಿದೆ.

# ಗೌತಮ್ ಬುದ್ಧರ ತತ್ವಗಳು ವಿಶ್ವಕ್ಕೆ ಮಾದರಿ: ರಹೀಂ ಖಾನ್



> “ಸುಮಾರು ಎರಡು ಸಾವಿರ ಐನೂರು ವರ್ಷಗಳ ಹಿಂದೆ ಬುದ್ದರು ನೀಡಿದ ಧರ್ಮದ ಸಂದೇಶಗಳು ಇಂದಿಗೂ ಸಮಕಾಲೀನವಾಗಿವೆ. ಬುದ್ದರು ಮಾನವ ಸಮಾಜದಲ್ಲಿ ಜಾತಿ, ವರ್ಣ, ಭೇದಭಾವಗಳನ್ನು ತೊಡೆದು ಹಾಕುವ ಸಂದೇಶವನ್ನು ನೀಡಿದ್ದಾರೆ. ಅವರ ಅಹಿಂಸೆ, ಕರುಣೆ ಮತ್ತು ಮಧ್ಯಮ ಮಾರ್ಗದ ತತ್ವಗಳು ಇಂದಿನ ರಾಜಕೀಯ ಹಾಗೂ ಸಾಮಾಜಿಕ ಜೀವನಕ್ಕೂ ಮಾರ್ಗದರ್ಶಕವಾಗಬೇಕು.
>
> **ರಹೀಂ ಖಾನ್ ಪೌರಾಡಳಿತ ಮತ್ತು ಹಜ್ ಸಚಿವರು**

**ಮಲ್ಲಮ್ಮ ನುಡಿ ವಾರ್ತೆ ಬೀದರ**

ಪ್ರತಿಯೊಬ್ಬರು ಗೌತಮ್ ಬುದ್ದರ ತತ್ವಗಳನ್ನು ಮೈಗೂಡಿಸಿಕೊಂಡು ಬದುಕಿದರೆ ಜೀವನ ಸಾರ್ಥಕ ಅವರ ತತ್ವಗಳು ವಿಶ್ವಕ್ಕೆ ಮಾದರಿಯಾಗಿವೆ ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ನುಡಿದರು.

ನಗರದ ರಾಂಪುರ ಕಾಲೋನಿಯಲ್ಲಿ ಇರುವ ಸಿದ್ದಾರ್ಥ್ ಬುದ್ದ ವಿಹಾರ ಮತ್ತು ವಿಶ್ವ ಜ್ಞಾನಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಭವನ ಅಭಿವೃದ್ದಿ ಸಮಿತಿ ವತಿಯಿಂದ ತಥಾಗತ್ ಗೌತಮ್ ಬುದ್ಧ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರ ಸಂಕಿರಣ ಹಾಗೂ ಧರ್ಮ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತದ ಮಹಾನ್ ಚಿಂತಕ, ಸಾಮಾಜಿಕ ಸುಧಾರಕ ಹಾಗೂ ಸಂವಿಧಾನದ ಶಿಲ್ಪಿಯಾಗಿದ್ದರು. ಸಮಾನತೆ, ಶಿಕ್ಷಣ ಮತ್ತು ಹಕ್ಕುಗಳಿಗಾಗಿ ಅವರು ಜೀವನಪೂರ್ತಿ ಹೋರಾಡಿ ಸಮಾಜಕ್ಕೆ ದೊಡ್ಡ ದಿಕ್ಕು ತೋರಿದರು ಎಂದರು. ರಾಂಪುರ ಕಾಲೋನಿಯಲ್ಲಿ ಇರುವ ಸಿದ್ದಾರ್ಥ್ ಬುದ್ಧ ವಿಹಾರ ಮತ್ತು ವಿಶ್ವ ಜ್ಞಾನಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಭವನ ಸಮಗ್ರ ಅಭಿವೃದ್ಧಿಗಾಗಿ 50 ಲಕ್ಷಕ್ಕೂ ಅಧಿಕ ಹಣ ಮೀಸಲಿಟ್ಟು ಅಭಿವೃದ್ಧಿ ಕೆಲಸಗಳಿಗೆ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.ನಂತರ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದಧಮಾನಂದ್ ಥೀರೋ ಅವರು ಧರ್ಮ ಪ್ರವಚನ ನೀಡಿದರು.

ಇದೆ ಸಂದರ್ಭದಲ್ಲಿ ನವನಾಥ್ ಗಾಯಕವಾಡ, ಸುಭಾಸ್ ವರ್ಮ, ಎಸ್ ರಾಜಕುಮಾರ್ ಚೀಮಕೋಡೆ, ನಾಗಪ್ಪ ಮಳ್ಳಿ, ಬಾಬುರಾವ್ ಹೊಸಮನಿ, ಮಲ್ಲಿಕಾರ್ಜುನ್ ಮೊಜಳಕೆರೆ, ವೀರಣ್ಣ ಚಂದನ್, ದೇವಿಂದ್ರಾ ಕೇಸರಿ, ಶಿವಕುಮಾರ್ ಧನ್ನೂರ್, ಶ್ಯಾಮ್ಮಣ್ಣ ಕುಂದಾನ್, ಸಾಧಫುಲ್ ಗೊರಖ್ನಾಥ್, ಅಶೋಕ್ ಕೇಸರಿ, ಪುನೀತಾ ಪಪ್ಪಾ, ಲಕ್ಷ್ಮೀ ಹೊಸಮನಿ, ಜಗದೇವಿ ಭಂಡರೆ, ಪುನೀತಾ ಗಾಯಕ್ವಾಡ, ಭೀಮಣ್ಣ ಭಾವಿಕಟ್ಟಿ,ತುಕಾರಾಮ್ ದಾವಣರ್, ನಂಜಯ್ ಎ, ನಾಗನಾಥ್ ನೀಡೋದಕರ್

,ಬಸವರಾಜ್ ಕಡ್ಡೆ, ಜಗನಾಥ್ ಮೂರ್ತಿ, ಮನೋಹರ್ ವಡಗನಕರ್, ಭೀಮಣ್ಣ ಸಂಗಮ್, ಬಾಬುರಾವ್ ಬಿಹಾರಿ, ಗಣಪತ್ರವ್ ದೀನೆ, ರಮೇಶ್ ಕಾಳೆಕಾರ್ ಅನೇಕ ಸಮಾಜದ ಮುಖಂಡರು ಭಾಗವಹಿಸಿದರು,

# ಬಿದರನ 10 ಹಾಸಿಗೆಗಳ ಆಸ್ಪತ್ರೆಗೆ ಗಿರೀಶ ಬದೋಲೆ ಭೇಟಿ, ಪರಿಶೀಲನೆ



**ಮಲ್ಲಮ್ಮ ನುಡಿ ವಾರ್ತೆ ಬೀದರ,**

ಬೀದರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ ಅವರು ಸೋಮವಾರ ನಗರದ 10 ಹಾಸಿಗೆಗಳ ಆಸ್ಪತ್ರೆಗೆ ಭೇಟಿ ನೀಡಿ, ಸಾರ್ವಜನಿಕರಿಗೆ ಲಭ್ಯವಿರುವ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಪರಿಶೀಲಿಸಿದರು.

ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ಅವರು, ರೋಗಿಗಳಿಗೆ ನೀಡಲಾಗುತ್ತಿರುವ ಚಿಕಿತ್ಸೆ, ಔಷಧಗಳ ಲಭ್ಯತೆ ಮತ್ತು ಆಸ್ಪತ್ರೆಯ ಸ್ವಚ್ಛತೆ-ಯ ಬಗ್ಗೆ ಮಾಹಿತಿ ಪಡೆದರು. ಬಡ ಮತ್ತು ಸಾಮಾನ್ಯ ಜನರಿಗೆ ಸರ್ಕಾರದ ಆರೋಗ್ಯ ಸೌಲಭ್ಯಗಳು ಸಮರ್ಪಕವಾಗಿ ತಲುಪಿಸಲು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಆಸ್ಪತ್ರೆಯಲ್ಲಿ ನೂತನವಾಗಿ ಪ್ರಾರಂಭಿಸಲಾದ ಡಯಾಲಿಸಿಸ್ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ಸ್ಥಳೀಯ ರೋಗಿಗಳಿಗೆ, ಈ ಘಟಕವು ವರದಾನವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಘಟಕದಲ್ಲಿರುವ ಯಂತ್ರೋಪಕರಣಗಳ ಕಾರ್ಯನಿರ್ವಹಣೆ ಮತ್ತು ರೋಗಿಗಳಿಗೆ ಕಲ್ಪಿಸಲಾಗಿರುವ ಸೌಕರ್ಯಗಳ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು. ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿ ವೈದ್ಯರ ಪಾತ್ರ ದೊಡ್ಡದು ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ಉತ್ತಮ ಸೇವೆ ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಧ್ಯಾನೇಶ್ವರ ನಿರಗುಡೆ, ಜಿಲ್ಲಾ ಅಸಾಂಕ್ರಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ.ಕಿರಣ್ ಪಾಟೀಲ್, ಪ್ರಭಾರಿ ಬೀದರ ತಾಲೂಕಾ ಆರೋಗ್ಯ ಅಧಿಕಾರಿ ಡಾ.ಶಾಂತಲಿಂಗ್ ಮಠಪತಿ, ಪ್ರಭಾರಿ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ವರ್ಷಾ, ಹಿರಿಯ ವೈದ್ಯರು ಸೇರಿದಂತೆ ಆಸ್ಪತ್ರೆಯ ನರ್ಸಿಂಗ್ ಮತ್ತು ಆಡಳಿತ ಸಿಬ್ಬಂದಿಗಳು ಉಪಸ್ಥಿತರಿದ್ದರು

# ಸಂಜೀವಕುಮಾರ ನೂತನ ಅಧ್ಯಕ್ಷರಾಗಿ ಆಯ್ಕೆ



**ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ತಾಲೂಕಿನ ಸಂಗಮ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಸಂಜೀವಕುಮಾರ ಗೋಪಾಳರಾವ ಬಿರಾದಾರ ಅವರು ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಗನ್ನಾಥ ಜಿರ್ಗೆ ತಿಳಿಸಿದ್ದಾರೆ.

ಸಂಘದ ಮಜರ್ ಮಲೀಕ(ಉಪಾಧ್ಯಕ್ಷ), ಆಡಳಿತ ಮಂಡಳಿ ನಿರ್ದೇಶಕರಾದ ಲಿಂಬಾಜಿ ನಿವರ್ತಿ, ಮನ್ಮಥ ಸಂಗಪ್ಪ, ಸಂಜೀವ ಗೋಪಾಲ, ಸಂಗಮೇಶ್ವರ ನೀಲಕಂಠಯ್ಯ, ಮಚೆಂದ್ರ ಗಣಪತಿ, ಲಕ್ಷ್ಮಣ ಝುರೆಪ್ಪ, ಅನೀತಾ ಉಮಾಕಾಂತ, ರಾಜಮ್ಮ ಆನಂದರಾವ, ಚಂದ್ರಕಲಾ ಶಾಲಿವಾನ, ನಿವರ್ತಿ ಮಾಧವರಾವ ಮತ್ತು ಧನಾಜಿ ಹಣಮಂತ ಅವರುಗಳು ಇದ್ದರು.

# ಹುಮನಾಬಾದ್‌ನಲ್ಲಿ ಆಲಿಕಲ್ಲು ಮಳೆ

**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್**

ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಚಾನಕ್ ಆಗಿ ಆಲಿಕಲ್ಲು ಮಳೆ ಸುರಿದ ಪರಿಣಾಮ ಜನರಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಮಳೆಯೊಂದಿಗೆ ಬಿದ್ದ ಆಲಿಕಲ್ಲುಗಳಿಂದ ರಸ್ತೆ ಹಾಗೂ ಮನೆಗಳ ಮೇಲ್ಛಾವಣಿಗಳು ಬಿಳಿಯಾಗಿ ಕಾಣಿಸಿಕೊಂಡವು.

ಈ ಅಕಾಲಿಕ ಆಲಿಕಲ್ಲು ಮಳೆಯಿಂದ ರೈತರ ಬೆಳೆಗಳಿಗೆ ಹಾನಿಯಾಗಿರುವ ಸಾಧ್ಯತೆ ಇದ್ದು, ರೈತರು ಚಿಂತೆಗೆ ಒಳಗಾಗಿದ್ದಾರೆ. ವಿಶೇಷವಾಗಿ ಹೊಲಗಳಲ್ಲಿ ಬೆಳೆದಿದ್ದ ಬೆಳೆಗಳಿಗೆ ಹಾಗೂ ತೋಟಗಾರಿಕೆ ಬೆಳೆಗಳಿಗೆ ಹಾನಿ ಉಂಟಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ.


ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬೆಳೆ ಹಾನಿಯನ್ನು ಪರಿಶೀಲಿಸಿ, ಹಾನಿಗೊಳಗಾದ ರೈತರಿಗೆ ತಕ್ಷಣ ಪರಿಹಾರ ನೀಡುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ರೈತರು ಆಗ್ರಹಿಸಿದ್ದಾರೆ.

# ಕ್ರೀಡಾ ಸಾಮಗ್ರಿಗಾಗಿ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಬೀದರ: 2025-26ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೀದರ ವತಿಯಿಂದ ನೋಂದಾಯಿತ ಯುವಕ/ಯುವತಿ ಸಂಘಗಳಿಗೆ ಕ್ರೀಡಾ/ಸಂಗೀತ ಸಾಮಗ್ರಿಗಳನ್ನು ವಿತರಿಸಲು ಅರ್ಜಿ ಸಲ್ಲಿಸುವ ಅವಧಿಯನ್ನು 2026ನೇ ಮಾರ್ಚ್.26 ರವರೆಗೆ ವಿಸ್ತರಿಸಲಾಗಿದೆ ಎಂದು ಬೀದರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋಂದಾಯಿತ ಆಸಕ್ತ ಯುವಕ/ಯುವತಿ ಸಂಘಗಳು ಅರ್ಜಿಗಳನ್ನು ಸಹಾಯಕ ನಿರ್ದೇಶಕರವರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಕ್ರೀಡಾಂಗಣ, ಬೀದರ ಕಛೇರಿಯಿಂದ ಪಡೆದು ಸಂಪೂರ್ಣ ವಿವರದೊಂದಿಗೆ 2026ನೇ ಮಾರ್ಚ್.26 ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ಲಾಟರಿ ಮುಖಾಂತರ ಅರ್ಜಿಗಳನ್ನು ಆಯ್ಕೆ ಮಾಡಲಾಗುವುದು.

# ಲೋಕ ಆದಾಲತ್ 66,440 ಪ್ರಕರಣಗಳು ಇತ್ಯರ್ಥ: ನ್ಯಾ ಬನಸೊಡೆ




• ಮಲ್ಲಮ್ಮ ನುಡಿ ವಾರ್ತೆ ಬೀದರ

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಮಾರ್ಚ್.14 ರಂದು ನಡೆದ ಬೃಹತ್ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಜಿಲ್ಲೆಯಾದ್ಯಾಂತ 66,440 ಪ್ರಕರಣಗಳನ್ನು ಇತ್ಯರ್ಥಗೊಳಿಸಿ 25,15,00,151 ರೂಪಾಯಿಗಳ ಪರಿಹಾರವನ್ನು ಕಕ್ಷಿದಾರರಿಗೆ ಒದಗಿಸಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಬನಸೋಡೆ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಈ ಬಾರಿಯ ಲೋಕ ಅದಾಲತನಲ್ಲಿ ಒಟ್ಟು 11,869 (ಪೆಂಡಿಂಗನಲ್ಲಿನ) ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು, 13,16,90,209 ರೂ. ಹಣವನ್ನು ಕಕ್ಷಿದಾರರಿಗೆ ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ. ಜಿಲ್ಲೆಯಾದ್ಯಾಂತ ಒಟ್ಟು 54,571 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು ಹಾಗೂ ಕಕ್ಷಿದಾರರಿಗೆ 11,98,09,942 ರೂ. ಹಣವನ್ನು ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಾಧ್ಯಾಂತ ಈ ಲೋಕ ಆದಾಲತನಲ್ಲಿ ವೈವಾಹಿಕ ವ್ಯಾಜ್ಯವನ್ನು ಇತ್ಯರ್ಥಪಡಿಸಿ ಸಂದಾನದ ಮೂಲಕ 05 ಜೋಡಿ ದಂಪತಿಯನ್ನು ರಾಜಿ ಸಂಧಾನದ ಮೂಲಕ ಒಂದು ಮಾಡಲಾಗಿದೆ ಹಾಗೂ ನ್ಯಾಯಲಯಗಳಲ್ಲಿ ಬಾಕಿ ಇರುವ ಒಟ್ಟು 23 ಹಳೆಯ ಪ್ರಕರಣ ಹಾಗೂ 12 ಹಿರಿಯ ನಾಗರಿಕರ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಬೀದರನ ಸಿ.ಜೆ.ಎಂ. ರಾಘವೇಂದ್ರ ಉಪಾಧ್ಯೆ ಸೇರಿದಂತೆ ಪ್ರಾಧಿಕಾರದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# 10ನೇ ತರಗತಿ ಮಕ್ಕಳಿಗೆ ಬೀಳ್ಕೊಡುಗೆ




• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಕಂಪ್ಲಿಯ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯಲ್ಲಿ 2025-26ನೇ ಸಾಲಿನ ಹತ್ತನೇ ತರಗತಿ ಮಕ್ಕಳ ಬಿಳ್ಕೊಡುಗೆ ಸಮಾರಂಭ ಹಾಗೂ ಸರಸ್ವತಿ ಪೂಜಾ ಕಾರ್ಯಕ್ರಮ ಮಂಗಳವಾರ ನಡೆಯಿತು. ಈ ಸಂದರ್ಭದಲ್ಲಿ ಶಾಲೆಯ ವ್ಯವಸ್ಥಾಪಕ ಕೆ ರಾಮು ಮಾತನಾಡಿ, ಮಕ್ಕಳಿಗೆ ಹತ್ತನೇ ತರಗತಿಯ ಪರೀಕ್ಷೆಯನ್ನು ಎದುರಿಸುವ ಬಗ್ಗೆ ಕೆಲವು ಸೂಚನೆಗಳನ್ನು ನೀಡಿದರು.

ಇದೇ ವೇಳೆ ಮಾತನಾಡಿದ ಮುಖ್ಯ ಗುರುಗಳು ಹೆಚ್ ಮರಿಯಪ್ಪ, ನಮ್ಮ ಶಾಲೆಯಲ್ಲಿ ಸತತವಾಗಿ 8 ವರ್ಷ ನೂರಕ್ಕೆ ನೂರು ಫಲಿತಾಂಶ ಪಡೆದಿದ್ದೇವೆ. ಅದೇ ರೀತಿಯಾಗಿ ಈ ವರ್ಷವೂ ಸಹ ಅದೇ ರೀತಿಯ ಫಲಿತಾಂಶವನ್ನು ಪಡೆಯುವ ವಿಶ್ವಾಸವಿದೆ. ಮಕ್ಕಳಿಗೆ ಮೌಲ್ಯದ ಶಿಕ್ಷಣ ಬಹಳ ಮುಖ್ಯವಾಗಿದೆ ವಿದ್ಯಾಭ್ಯಾಸಕ್ಕೆ ತಂದೆ-ತಾಯಿಯ ಹಾಗೂ ಶಿಕ್ಷಕರ ಸಹಕಾರ ಮುಖ್ಯವಾಗಿರುತ್ತದೆ ಎಂದು ತಿಳಿಸಿದರು.

ಈ ಸಮಯದಲ್ಲಿ 2024-25ನೇ ಸಾಲಿನ ಅತಿ ಹೆಚ್ಚು ಅಂಕ ಪಡೆದ ಶ್ರೀ ಗೌರಿ 606/625 ಶೇಕಡಾ 96.96% ಅಂಕವನ್ನು ಪಡೆದ ಹಾಗೂ ಪುಷ್ಪ ದ್ವಿತೀಯ ಕನ್ನಡ ವಿಷಯದಲ್ಲಿ 100/100 ಅಂಕಕ ವಿದ್ಯಾರ್ಥಿನಿಯರಿಗೆ ಸನ್ಮಾನಿಸಿ ಶಾಲಾ ವತಿಯಿಂದ ಕಿರು ಕಾಣಿಕೆ ನೀಡಲಾಯಿತು.

ಶ್ರೀ ಗೌರಿ ಮಾತನಾಡಿ, ನಿವೇದಿತ ಶಾಲೆಯು ನಮಗೆ ಮೌಲ್ಯ ಶಿಕ್ಷಣವನ್ನು ನೀಡಿದೆ ಇಲ್ಲೆಲ್ಲಾ ಶಿಕ್ಷಕರು. ಶಿಕ್ಷಕಿಯರು ಆಡಳಿತ ಮಂಡಳಿಯವರು ಒಂದು ಕುಟುಂಬದಂತೆ ನಮ್ಮನ್ನು ನೋಡಿ-ಕೊಂಡು ಒಳ್ಳೆಯ ವಿದ್ಯಾಭ್ಯಾಸವನ್ನು ಕೊಟ್ಟಿದ್ದಾರೆ ಆದ್ದರಿಂದ ನನಗೆ ಈ ಒಂದು ಫಲಿತಾಂಶ ಪಡೆಯಲು ಸಾಧ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಶ್ರೀ ಮಾತಾ ಮೊಂಟಸರಿ ಸಂಸ್ಥೆ (ರಿ) ನಿವೇದಿತ ಶಾಲೆ ಕಂಪ್ಲಿಯ ಅಧ್ಯಕ್ಷರಾದ ಹೆಚ್ ಮರಿಯಪ್ಪ, ಕಾರ್ಯದರ್ಶಿಗಳಾದ ಕೆ ರಾಮು, ಉಪಾಧ್ಯಕ್ಷರಾದ ಬಸವರಾಜ್ ಹಾಗೂ ಮುಖ್ಯ ಶಿಕ್ಷಕಿಯಾದ ಎಂ. ಪುಷ್ಪ ಮತ್ತು ಶಿಕ್ಷಕ/ ಶಿಕ್ಷಕಿಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ

ಬಳ್ಳಾರಿ:ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ಮಾ.27 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ನಗರದ ಕೆಎಸ್‌ಆರ್‌ಟಿಸಿ ಸಂಸ್ಥೆಯಲ್ಲಿ 'ನಿಧಿ ಆಪ್ಕೆ ನಿಕಟ್ : ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ' ಎಂಬ ಕಾರ್ಯಕ್ರಮ ಏರ್ಪಡಿಸಲಾಗಿದೆ.ಕಾರ್ಯಕ್ರಮದಲ್ಲಿ ಕಾರ್ಮಿಕರ, ಪಿಂಚಣೆದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು ಮತ್ತು ಅರಿವು ಮೂಡಿಸುವ ಹಾಗೂ ಪ್ರಭಾವ ಬೀರುವ ಕಾರ್ಯಕ್ರಮ ಇದಾಗಿದೆ. ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ ಮತ್ತು ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಸಹ ಒದಗಿಸಲಾಗುತ್ತದೆ.

# ಶಾಲಾ ಸಿಬ್ಬಂದಿ, ಮಕ್ಕಳು ಹೋರಾಟಕ್ಕೆ ಬೆಂಬಲ




• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ನಗರಸಭೆ ಆವರಣ ಇಲ್ಲಿ ನಡೆದ 138ನೇ ದಿನದ ಬಲ್ಡೋಟ ತೊಲಗಬೇಕು, 20 ಕಾರ್ಖಾನೆ ಬಾಧಿತ ಹಳ್ಳಿಯ 50 ಸಾವಿರ ಜನರ ಜೀವ, ಆರೋಗ್ಯ ಉಳಿಸಬೇಕು, ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು, ತುಂಗಭದ್ರಾ ವಿಷಗೊಳಿಸುವ ಕಾರ್ಖಾನೆಗಳನ್ನು ಸೀಜ್ ಮಾಡಬೇಕು ಎಂದು ನಡೆದ ಧರಣಿ ಉದ್ದೇಶಿಸಿ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ನಜೀರ್ ಸಾಬ್ ಮೂಲಿಮನಿ ಮಾತನಾಡಿ ಇದೇ 22.03.2026 ರವಿವಾರ ಸಂಜೆ 7 ಗಂಟೆಗೆ ಹಂಪಿ ಎಕ್ಸ್‌ಪ್ರೆಸ್ ಮೂಲಕ ಕೊಪ್ಪಳ ರೈಲ್ವೆ ನಿಲ್ದಾಣದಿಂದ ಬೆಂಗಳೂರು ಚಲೋ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮುಂದಾಗಬೇಕೆಂದು ಎಲ್ಲಾ ಹಂತದ ಘಟಕಗಳು ರೈತರನ್ನು ತರಲು ಕರೆ ನೀಡಿದರು.

ಮುಂದೊಂದು ಈಗಾಗಲೇ ತುಂಗಭದ್ರಾ ಅಣೆಕಟ್ಟು ಪ್ರದೇಶದಲ್ಲಿ ರೈತರು ಒಂದೆ ಬೆಳೆ ಬೆಳೆಯುವ ಸ್ಥಿತಿ ನಿರ್ಮಾಣವಾಗಿದೆ. ಕಾರ್ಖಾನೆ ಮಾಲೀಕರು ನಿರ್ಭೀತಿಯಿಂದ ಮಿತಿ ಇಲ್ಲದೆ ನೀರು ಬಳಸಿ ಇಲ್ಲದ ಮಳೆ ಕೊರತೆ, ಹೂಳು ತುಂಬಿದೆ, ಕ್ರಸ್ಟ್ ಗೇಟ್ ಮುರಿದಿದೆ ಎಂದು ಹೇಳುವುದು ಕೇವಲ ನೆಪವಾಗಿದೆ. ಇದಕ್ಕೆ ರೈತರು ಒಗ್ಗಿಕೊಳ್ಳಲಿ ಎಂದು ರೂಢಿ ಮಾಡಿಸುತ್ತಿದ್ದಾರೆ ಮುಂದೊಂದು ದಿನ ಇದರ ವಿರುದ್ಧ ರೈತರು ಬಂಡೇಳುವ ಕಾಲ ದೂರವಿಲ್ಲ ಎಂದರು.

ಧರಣಿ ನೇತೃತ್ವವಹಿಸಿದ್ದ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಅವರು ಹೇಳಿಕೆ ನೀಡಿ ಇದೆ 22.03.2026 ರವಿವಾರ ರಂದು ಬೆಂಗಳೂರು ಚಲೋ ಸತ್ಯಾಗ್ರಹ ಯಶಸ್ವಿಗೊಳಿಸಲು ಮುನ್ನಡೆಯಿರಿ ಎಂದು ಕರೆ ನೀಡಿದರು. ನವಚೇತನ ಶಾಲೆ ಮುಖ್ಯೋಪಾಧ್ಯಾಯರಾದ ಹನುಮಂತಪ್ಪ ಎಂ. ಕಡದಳ್ಳಿ ಮಾತನಾಡಿ ಬಲ್ಡೋಟ ಲಕ್ಷಗಟ್ಟಲೆ ಜನರ ಆರೋಗ್ಯ ಹಾಳು ಮಾಡಲು ಬರುತ್ತಿರುವುದು ದುರಂತ ಸಂಗತಿ. ಇಲ್ಲಿನ ಹಿರಿಯರು ತಪಸ್ಸಿನ ರೀತಿ ಹೋರಾಟ ಮಾಡುತ್ತಿದ್ದಾರೆ. ಇವರಿಗೆ ನಮ್ಮ ಮಕ್ಕಳು ಚಿರ ಋಣಿಯಾಗಿರಬೇಕು ಎಂದು ಇದು ನಿಮ್ಮ ಭವಿಷ್ಯದ ಬೆಳಕಿಗಾಗಿ ನಡೆದ ಹೋರಾಟದಲ್ಲಿ ಶುದ್ಧ ಗಾಳಿ, ಶುದ್ಧ ನೀರು, ಶುದ್ಧ ಪರಿಸರ ಪಡೆಯೋಣ ಎಂದರು.

ಧರಣಿಯಲ್ಲಿ ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ನಿವೃತ್ತ ಪ್ರಾಚಾರ್ಯ ಎಸ್.ಬಿ. ರಾಜೂರು, ಪ್ರಕಾಶಕ ಡಿ.ಎಂ. ಬಡಿಗೇರ, ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಹನುಮಂತಪ್ಪ ಹೊಳೆಯಾಚೆ, ರಾಜಶೇಖರ ಏಳುಬಾವಿ, ಶಂಭುಲಿಂಗಪ್ಪ ಹರಗೇರಿ, ಶರಣು ಶೆಟ್ಟರ್, ಸುಭಾನ್ ಸಾಬ್ ನೀರಲಗಿ, ಮಖ್ಬುಲ್ ರಾಯಚೂರು, ನಿರುಪಾದಿಗೌಡ, ಆನಂದ ಕಟ್ಟಿ, ಶಿವಕುಮಾರ ಸ್ವಾಮಿ, ಗಾಯತ್ರಿ ಹೊಸಮನಿ, ನಿವೃತ್ತ ಪ್ರಾಚಾರ್ಯ ಎಲ್.ಎಫ್.ಪಾಟೀಲ್, ಶಿವಾನಂದಯ್ಯ ಬೀಳಗಿಮಠ, ಸರೋಜಾ ಬಾಕಳೆ, ಸುವರ್ಣ ಎಂ. ತುಪ್ಪದ್, ಎಂ.ಡಿ. ಸಿರಾಜ್, ಮೂಕಪ್ಪ ಮೇಸ್ತ್ರಿ ಬಸಾಪುರ, ಯಮನೂರಪ್ಪ ಹಾಲಳ್ಳಿ ಬಸಾಪುರ, ರವಿ ಕಾಂತನವರ, ಬಿ.ಜಿ. ಕರಿಗಾರ, ವೈ. ಸತ್ಯನಾರಾಯಣ, ಪಂಪಣ್ಣ ಚಿಂತಪಲ್ಲಿ, ಮಲ್ಲಪ್ಪ ಎಸ್.ಎಚ್, ಹನುಮಂತಪ್ಪ ಗೊಂದಿ, ನಾಗರಾಜ ಕುಷ್ಟಗಿ, ಶಿವಪ್ಪ ಜಲ್ಲಿ, ಆಂಜನೇಯ ಡಿ, ಮಹಾದೇವಪ್ಪ ಮಾವಿನಮಡು, ವಿಜಯ ಮಹಾಂತೇಶ ಹಟ್ಟಿ ಇತರರು ಪಾಲ್ಗೊಂಡರು.

# ಸಚಿವರ ವಿರುದ್ಧ ಹೇಳಿಕೆ ಸತ್ಯಕ್ಕೆ ದೂರ: ಹಂಪಯ್ಯ



ಸಿರವಾರ: ಮಾನ್ವಿ ಹಾಗೂ ಸಿರವಾರ ತಾಲೂಕಿನ ಅಖಂಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ ಹಂಪಯ್ಯ ನಾಯಕ ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಸೇರಿಸಬಹುದಾದ ಕೊಪ್ಲಿ, ಕಬ್ಬಲಿಗ ,ಬೆಸ್ತ, ಅಂಬಿಗ, ಬಾರ್ಕಿ, ಸಮುದಾಯಗಳು ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರು ಹಾಗೂ ಡಾ. ತಳವಾರ್ ಸಾಬಣ್ಣ ಇವರುಗಳ ನಿಯಮ 72ರ ಅಡಿಯಲ್ಲಿ ಮುಖ್ಯಮಂತ್ರಿ ಗಮನಕ್ಕೆ ತರಲಾಯಿತು. ಇದನ್ನು ತಪ್ಪಾಗಿ ಅರ್ಥ ಮಾಡಿಕೊಂಡು ಸಚಿವರ ವಿರುದ್ಧ ನೀಡಿರುವ ಹೇಳಿಕೆ ಸತ್ಯಕ್ಕೆ ದೂರವಾದ ಮಾತು. ನಿಂಗಯ್ಯ ಸೈದಾಪುರ್ ಹಾಗೂ ಸಮಾಜದ ಇತರೆ ಮುಖಂಡರು ಈ ರೀತಿ ಸಚಿವರ ವಿರುದ್ಧ ಆರೋಪ ಮಾಡುವುದು ಅವಿವೇಕಿತನ, ಮೂರ್ಖತನದ ಪರಮಾವಧಿ ಜೊತೆಗೆ ನಾನು ಈ ವಿಧಾನಸಭಾ ಕ್ಷೇತ್ರದ ಶಾಸಕನಾಗಿದ್ದು ಕ್ಷೇತ್ರದಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಿದ್ದೇನೆ, ಮಾನ್ಯ ಸಚಿವರು ಈ ಕ್ಷೇತ್ರದ ಅಭಿವೃದ್ಧಿಗೆ ಬಹಳಷ್ಟು ಶ್ರಮವಹಿಸಿದ್ದು .ಹಾಗೂ ಅವರ ನಮ್ಮ ಬಾಂಧವ್ಯ ಅನ್ಯೋನ್ಯತೆಯಿಂದ ಕೂಡಿದೆ ಹಾಗಾಗಿ ಸಚಿವರು ನನ್ನ ರಾಜಕೀಯ ಗುರುಗಳು ಹಾಗಾಗಿ ಗುರು ಶಿಷ್ಯರ ಸಂಬಂಧದ ಜೊತೆ ನಾವು ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸುತಿದ್ದೇವೆ. ಹಂಪಯ್ಯ ನಾಯಕ್ ರಬ್ಬರ್ ಸ್ಟ್ಯಾಂಪ್ ಎಂದು ಉದ್ಧಟತನದ ಹೇಳಿಕೆ ನೀಡುತ್ತಿರುವುದು ಖಂಡಿಸುತ್ತೇವೆ. ಎಂದು ಸಿರವಾರ ಪ್ರವಾಸಿ ಮಂದಿರದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರು ಪತ್ರಿಕಾಗೋಷ್ಠಿ ಮೂಲಕ ತಿಳಿಸಿದರು.

ಸರಕಾರದ ಗಂಗಾಮತ ಅದರ ಉಪಜಾತಿಗಳಾದ ಕುಲಶಾಸ್ತ್ರೀಯ ಅಧ್ಯಯನವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ಕೈಗೊಂಡು ಅಂತಿಮ ವರದಿಯನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಮೈಸೂರು ರವರು ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರಕಾರ ಶಿಫಾರಸ್ಸಿನೊಂದಿಗೆ ಕೇಂದ್ರ ಬುಡಕಟ್ಟುಗಳ ವ್ಯವಹಾರ ಮಂತ್ರಾಲಯ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದ್ದು .ಕರ್ನಾಟಕ ರಾಜ್ಯದಲ್ಲಿ ಗಂಗಾಮತ ಅದರ ಉಪಜಾತಿಗಳು ಪರಿಶಿಷ್ಟ ಪಟ್ಟಿಗೆ ಸೇರಿಸುವ ಬಗ್ಗೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಕೇಂದ್ರ ರಿಜಿಸ್ಟರ್ ಜನರಲ್ ಆಫ್ ಇಂಡಿಯಾ ರವರು ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಸ್ಪಷ್ಟನೆ, ಸಮರ್ಥನೆ, ಸೂಕ್ತ, ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಲು ಕುಲ ಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿಯವರಿಗೆ ಕೋರಲಾಗಿತ್ತು. ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ ರವರ ವರದಿ ಬಂದ ತಕ್ಷಣ ಸರಕಾರಕ್ಕೆ ಮಾಹಿತಿ ಸಲ್ಲಿಸಲಾಗುವುದು ಎಂದು ತಿಳಿಸಲಾಗಿತ್ತು.

# ವೀರಣ್ಣ ಬೆಳ್ಳುಬ್ಬಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಗೆದ್ದಲಮರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವೀರಣ್ಣ ಬೆಳ್ಳುಬ್ಬಿ ಅವರಿಗೆ ರಾಜ್ಯಮಟ್ಟದ ವಿದ್ಯಾರತ್ನ ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ಹುಣಸಗಿ ಸರಕಾರಿ ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ವಿಠ್ಠಲ್ ಬಿ. ಚೌಹಾನ್, ಶಿಕ್ಷಕರಾದ ಶ್ರೀ ನಾಗನಗೌಡ ಪಾಟೀಲ್, ಬಸವರಾಜ ತೆಗ್ಗಳ್ಳಿ, ಭೀಮಣ್ಣ ವಾಲ್ಮೀಕಿ, ಶ್ರೀಮತಿ ವಿಜಯಲಕ್ಷ್ಮಿ ಕುಂಬಾರ್, ಶ್ರೀಮತಿ ಅಕ್ಕಮಹಾದೇವಿ ದೇಶಮುಖ್, ಗೀತಾ ಸಜ್ಜನ್, ಲಲಿತಾಬಾಯಿ ಮಠ, ಲಾಲಬಿ ಎಂ. ಖಾಜಿ, ಸುವರ್ಣ ಮುದನೂರು, ಶ್ರೀ ಗುರುರಾಜು ಜೋಶಿ, ಯುನೂಸ್ ಕೋತ್ವಾಲ್, ಸೋಮನಗೌಡ ಬಳವಾಟ, ಕಡಲು ಬಾಳಪ್ಪ, ಪ್ರಭುಗೌಡ ಪಾಟೀಲ್ ಹಾಗೂ ಉದಯ್ ಅಂಬಿಗೇರ ಉಪಸ್ಥಿತರಿದ್ದರು.

# ಗೃಹ ಬಳಕೆ ಗ್ಯಾಸ್ ಸಿಲಿಂಡರ್ ವಶ



• ಮ್ಮಲ್ಲಮ ನುಡಿ ವಾರ್ತೆ ಹುಣಸಗಿ

ಪಟ್ಟಣದ ಕೆಲ ಹೋಟೆಲ್ ಮತ್ತು ಡಾಬಾ ಅಂಗಡಿಗಳಲ್ಲಿ ಕಮರ್ಷಿಯಲ್ ಗ್ಯಾಸ್ ಬದಲು ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಬಳಸುತ್ತಿರುವ ಬಗ್ಗೆ ಬಂದ ಮಾಹಿತಿಯ ಮೇರೆಗೆ ಅಧಿಕಾರಿಗಳು ದಾಳಿ ನಡೆಸಿ ಸುಮಾರು 20 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡರು.

ಹುಣಸಗಿ ತಾಲೂಕು ಆಹಾರ ನಿರೀಕ್ಷಕರು ಸಿ.ಎಸ್. ರಾಜು ಅವರ ನೇತೃತ್ವದ ತಂಡ ಇಂದು ಹುಣಸಗಿ ಪಟ್ಟಣದ ವಿವಿಧ ಹೋಟೆಲ್ ಹಾಗೂ ಡಾಬಾಗಳಲ್ಲಿ ಪರಿಶೀಲನೆ ನಡೆಸಿತು. ಈ ವೇಳೆ ಕಮರ್ಷಿಯಲ್ ಗ್ಯಾಸ್ ಬದಲು ಗೃಹ ಬಳಕೆ ಸಿಲಿಂಡರ್‌ಗಳನ್ನು ಅಕ್ರಮವಾಗಿ ಬಳಸುತ್ತಿರುವುದು ಪತ್ತೆಯಾಗಿದ್ದು, ಸುಮಾರು 20 ಸಿಲಿಂಡರ್‌ಗಳನ್ನು ವಶಕ್ಕೆ ಪಡೆದರು.

ಈ ಕುರಿತು ಹುಣಸಗಿ ತಾಲ್ಲೂಕು ದಂಡಾಧಿಕಾರಿ ಎಂ. ಬಸವರಾಜ ಅವರಿಗೆ ಮಾಹಿತಿ ನೀಡಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಿಯಮ ಉಲ್ಲಂಘನೆ ಮಾಡುವ ಹೋಟೆಲ್ ಹಾಗೂ ಡಾಬಾ ಮಾಲೀಕರ ವಿರುದ್ಧ ಮುಂದಿನ ದಿನಗಳಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ದಾಳಿಯ ವೇಳೆ ತಾಲೂಕು ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು

# ವಿದ್ಯಾರ್ಥಿಗಳಿಗೆ ಉಚಿತ ಬಸ್ ವ್ಯವಸ್ಥೆ

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಮಾ.18 ರಿಂದ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿ ಇತರೆ ವಿದ್ಯಾಸಂಸ್ಥೆಗಳಿಗೆ ಪರೀಕ್ಷಾ ಕೇಂದ್ರಗಳ ನಿಯೋಜನೆಯಾಗಿರುವುದರಿಂದ, ವಿದ್ಯಾರ್ಥಿಗಳ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆ ನಡೆಯುವ ದಿನಾಂಕಗಳಂದು, ಅಂದರೆ ಮಾ.18 ರಿಂದ ಏಪ್ರಿಲ್ 2 ರವರೆಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಹಾಗೂ ಪರೀಕ್ಷೆ ಮುಗಿಸಿ ವಾಸ ಸ್ಥಳಕ್ಕೆ ಹಿಂದಿರುಗಲು ಸಂಸ್ಥೆಯ ನಗರ, ಉಪನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

# ಪರವಾನಿಗೆ ರದ್ದುಪಡಿಸಲು ಪ್ರಸ್ತಾವನೆ ಸಲ್ಲಿಕೆ: ಆಕ್ಷೇಪಣೆ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಅವಧಿ ಮುಕ್ತಾಯಗೊಂಡರೂ ಸಹ ಪರವಾನಿಗೆ ನವೀಕರಿಸದೇ ಇರುವ ಈ ಕೆಳಕಂಡ ಲೇವಾದೇವಿ/ಗಿರವಿದಾರರ/ಹಣಕಾಸು ಸಂಸ್ಥೆಗಳ ಪರವಾನಿಗೆಯನ್ನು ರದ್ದುಪಡಿಸಲು ಸೇಡಂ ಉಪವಿಭಾಗ ಸೇಡಂ ಲೇವಾದೇವಿ ಮತ್ತು ಗಿರವಿದಾರರ ಸಹಾಯಕ ನಿಬಂಧಕರು ಕಲಬುರಗಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಕುರಿತು ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಕಲಬುರಗಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯಲ್ಲಿ ಸಲ್ಲಿಸಬೇಕು. ಯಾವುದೇ ಆಕ್ಷೇಪಣೆ ಬಾರದೆ ಇದ್ದಲ್ಲಿ ನಿಯಮಾನುಸಾರ ಪರವಾನಿಗೆ ರದ್ದುಪಡಿಸಿ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಎಂದು ಕಲಬುರಗಿ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

ಪರವಾನಿಗೆ ಅವಧಿ ಮುಕ್ತಾಯಗೊಂಡ ಈ ಕೆಳಕಂಡ ಪರವಾನಿಗೆಯನ್ನು ಲೇವಾದೇವಿ/ಗಿರವಿದಾರರ ಕಾಯ್ದೆ 1961ರ ಅವಕಾಶದಡಿ ರದ್ದುಪಡಿಸಲು ಮತ್ತು ಕಲಂ 7-ಬಿ, 4-ಬಿ (ಆಯಾ ಕಾಯ್ದೆಯನ್ವಯ) ಭದ್ರತಾ ಠೇವಣಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ನಿರ್ಣಯಿಸಿದ್ದು, ಕಲಬುರಗಿ ಜಿಲ್ಲೆಯಲ್ಲಿ ಲೇವಾದೇವಿ/ಗಿರವಿದಾರರ/ವ್ಯವಹಾರವನ್ನು ನಡೆಸುವ ಲೇವಾದೇವಿ/ಗಿರವಿ/ ಹಣಕಾಸು ಸಂಸ್ಥೆಗಳ ಕರ್ನಾಟಕ ಲೇವಾದೇವಿ ಕಾಯ್ದೆ 1961, ಕರ್ನಾಟಕ ಗಿರವಿ ಕಾಯ್ದೆ 1961 ರನ್ವಯ ಪರವಾನಿಗೆಯನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಈ ರೀತಿ ಪರವಾನಿಗೆಯನ್ನು ಪಡೆದು-ಕೊಂಡು ಸದರಿ ಪರವಾನಿಗೆ ಅವಧಿ 5 ವರ್ಷಗಳು ಇರುತ್ತದೆ. (2025ನೇ ತಿದ್ದುಪಡಿ ಅಧಿನಿಯಮದ ನಂತರ 3 ವರ್ಷಗಳು) ಇರುತ್ತದೆ.

ಲೇವಾದೇವಿ/ಹಣಕಾಸು ಸಂಸ್ಥೆಗಳ ವಿವರ ಇಂತಿದೆ: ಮೇ: ಸಮೃದ್ಧಿ ಫೈನಾನ್ಸ್ ಮತ್ತು ಲೀಜಿಂಗ ಸುಗರ ಕಾಂಪ್ಲೇಕ್ಸ್ ಶಾಪ್ ನಂ.1 ಊಡಗಿ ರೋಡ ಸೇಡಂ, ಮೇ: ಶ್ರೀ ಸಿದ್ಧಿವಿ ನಾಯಕ ಪೈನಾನ್ಸ ಮತ್ತು ಲಿಜಿಂಗ ಪ್ಲಾಟ್ ನಂ.1 ಜಗಜ್ಯೋತಿ ಕಾಂಪ್ಲೇಕ್ಸ್ ಬಸ್‌ಸ್ಟ್ಯಾಂಡ ರೋಡ ಕಾಳಗಿ, ಮೇ: ಭವಾನಿ ಪೈನಾನ್ಸ ಮತ್ತು ಲಿಜಿಂಗ ಕಾರ್ಪೋರೇಷನ ಶಾಪ್ ನಂ 2. ಸಜ್ಜನಶೆಟ್ಟಿ ಕಾಂಪ್ಲೇಕ್ಸ ಊಡಗಿ ರೋಡ ಸೇಡಂ, ಮೇ: ಶ್ರೀ ಶೀವನಂದಿ ಪೈನಾನ್ಸ ಮತ್ತು ಲಿಜಿಂಗ ಲ್ವಾಜಿಂಗ ಕ್ರಾಸ ಚಿತ್ತಾಪೂರ, ಮೇ: ಶ್ರೀ ಗುರು ಯಲ್ಲಾಲಿಂಗೇಶ್ವರ ಪೈನಾನ್ಸ ಮತ್ತು ಲಿಜಿಂಗ ಯಲ್ಲಾಲಿಂಗೇಶ್ವರ ಮಿಲಾಯ 1 ಮಹಡಿ ಸುಲೇಪೇಟ, ಮೇ: ಶ್ರೀನಿಧಿ ಫೈನಾನ್ಸ್ ಮತ್ತು ಲೀಜಿಂಗ ಕುಲಕರ್ಣಿ ಕಾಂಪ್ಲೇಕ್ಸ ನೆಹರು ಚೌಕ ಶಹಾಬಾದ, ಮೇ: ಜಗನಾಥ ಮಡಬೂಳ ಇನ್‌ಡಿಜಿವೆಲ್ ಮನಿಲೆಂಡಿಂಗ್ ಶಂಕರ ಕಾಲೋನಿ ಸೇಡಂ ರೋಡ ಮಳಖೇಡ, ಮೇ: ಶ್ರೀಲಕ್ಷ್ಮಿ ವೆಂಕಟೇಶ್ವರ ಪೈನಾನ್ಸ ಶಾಪ್ ನಂ. 1 ಮೇನ್ ರೋಡ ಗೋಟುರ, ಮೇ: ಶಿವಶಕ್ತಿ ಪೈನಾನ್ಸ ಮತ್ತು ಲಿಜಿಂಗ ವಾಡಿ(ಜಂ),

# ಸರಕಾರಿ ಹುದ್ದೆಗಳ ನೇಮಕಾತಿಗೆ ಎಬಿವಿಪಿ ಪ್ರತಿಭಟನೆ




• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಕರ್ನಾಟಕ ರಾಜ್ಯದಲ್ಲಿ ಸರಕಾರಿ ಹುದ್ದೆಗಳ ನೇಮಕಾತಿ ಮಾಡುವಂತೆ ಆಗ್ರಹಿಸಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಸರಿಪಡಿಸುವಂತೆ ಆಗ್ರಹಿಸಿ ನಗರದಲ್ಲಿ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮನವಿ ಸ್ವೀಕರಿಸಲು ತಡವಾಗಿ ಬಂದ ಡಿ.ಸಿ ಜಿಲ್ಲಾಧಿಕಾರಿಗಳ ಕಚೇರಿಗೆ ನುಗ್ಗಲು ಯತ್ನಿಸಿದ ವಿದ್ಯಾರ್ಥಿಗಳು, ನಂತರ ಆಗಮಿಸಿದ ಜಿಲ್ಲಾಧಿಕಾರಿಗಳು ಮನವಿ ಸ್ವೀಕಸಿದರು. ಈ ಸಂದರ್ಭದಲ್ಲಿ ಎಬಿವಿಪಿಯ ಕೇಂದ್ರೀಯ ಕಾರ್ಯಸಮಿತಿ ಸದಸ್ಯರಾದ ಸಚಿನ ಕುಳಗೇರಿ ಮಾತನಾಡಿ ರಾಜ್ಯದಲ್ಲಿ ಕಳೆದ 5-6 ವರ್ಷಗಳಿಂದ ವಿದ್ಯಾರ್ಥಿಗಳ ಪರಿಸ್ಥಿತಿ ಶೋಚನೀಯವಾಗಿದೆ, ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯಾರ್ಥಿಗಳ ಜೊತೆಗೆ ನಿಲ್ಲಬೇಕಾದ ಸರ್ಕಾರ ಕುಂಭನಿದ್ರೆಗೆ ಜಾರಿದೆ. ಸರಕಾರದ ಹತ್ತಿರ ಯಾವುದೇ ದೂರದೃಷ್ಟಿಯ ಯೋಜನೆಗಳು ಇಲ್ಲದೆ ಸಮಸ್ಯೆಗಳು ಬಂದಾಗ ಅವುಗಳಿಗೆ ತೇಪೆ ಹಚ್ಚುವ ಕಾರ್ಯ ನಡೆಯುತ್ತಿದೆ. ಖಾಲಿ ಇರುವ ಸರಕಾರಿ ಹುದ್ದೆಗಳ ನೇಮಕಾತಿ.

ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ನೇಮಕಾತಿಯನ್ನ ಮಾಡಿಕೊಳ್ಳುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ಕಳೆದ ಮೂರು ವರ್ಷಗಳಿಂದ ಯಾವುದೇ ನೇಮಕಾತಿಗಳನ್ನು ಮಾಡದೆ ವಿದ್ಯಾರ್ಥಿಗಳಿಗೆ ಮೋಸ ಮಾಡಿದೆ, ರಾಜ್ಯದಲ್ಲಿ ಒಟ್ಟು 43 ಇಲಾಖೆಗಳಲ್ಲಿ 2 84,881 ಹುದ್ದೆಗಳು ಖಾಲಿ ಇದೆ, ಲಕ್ಷಾಂತರ ಅಭ್ಯರ್ಥಿಗಳು ಕಳೆದ ಐದಾರು ವರ್ಷಗಳಿಂದ ಸರ್ಕಾರ ನೇಮಕಾತಿಗಳನ್ನ ಮಾಡುತ್ತೆ ಎಂಬ ನಂಬಿಕೆಯೊಂದಿಗೆ ಪ್ರತಿ ತಿಂಗಳು ಹಣವನ್ನು ಖರ್ಚು ಮಾಡಿಕೊಂಡು ತರಬೇತಿಯನ್ನು ಪಡೆಯುತ್ತಾ ಸರಕಾರಿ ಸೇವೆಯನ್ನು ಮಾಡಬೇಕು ಆಸೆಯನ್ನು ಇಟ್ಟುಕೊಂಡು ಅಧ್ಯಯನ ಮಾಡುತ್ತಿದ್ದಾರೆ, ಆದರೆ ಅಂತಹ ಸಾವಿರಾರು ಅಭ್ಯರ್ಥಿಗಳ ವಯಸ್ಸು ಕೂಡಾ ಮೀರುತ್ತಿದೆ, ಆದರೆ ಸರಕಾರಕ್ಕೆ ಈ ಯಾವುದೇ ತೊಂದರೆಗಳನ್ನು ಗಮನಿಸದೆ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದರು.

ಎಬಿವಿಪಿಯ ಜಿಲ್ಲಾ ಸಂಚಾಲಕ ಸಂದೀಪ ಅರಳಗುಂಡಿ ಮಾತನಾಡಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ 79,694 ಹುದ್ದೆಗಳು, ಉನ್ನತ ಶಿಕ್ಷಣ ಇಲಾಖೆಯಲ್ಲೂ 13,599 ಹುದ್ದೆಗಳು ಖಾಲಿ ಇದ್ದು ಇದರಿಂದ ರಾಜ್ಯದ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ, ಸರಿಯಾಗಿ ತರಗತಿಗಳು ನಡೆಯುತ್ತಿಲ್ಲ, ಸರ್ವರಿಗೂ ಶಿಕ್ಷಣವನ್ನು ನೀಡಬೇಕಾದದ್ದು ಸರಕಾರಗಳ ಕರ್ತವ್ಯ ಆದರೆ ಸರಕಾರಿ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳ ಸರಕಾರ ಅನ್ಯಾಯ ಮಾಡುತ್ತಿದೆ ಎಂದರು. ಎಬಿವಿಪಿಯ ಕಾನೂನು ವಿದ್ಯಾರ್ಥಿಗಳ ಪ್ರಮುಖ ಮಂಜುನಾಥ ಹಳ್ಳಿ ಮಾತನಾಡಿ ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಶೋಚನೀಯವಾಗಿದೆ. ಕರ್ನಾಟಕ ರಾಜ್ಯದ ವಿಶ್ವವಿದ್ಯಾಗಳ ಸ್ಥಿತಿಗತಿ ಶೋಚನೀಯವಾಗಿದೆ, ಕರ್ನಾಟಕ ರಾಜ್ಯ ಮೊದಲು ಉನ್ನತ ಶಿಕ್ಷಣ-ಕ್ಕೆ ಹೆಸರುವಾಸಿ ಆದ ರಾಜ್ಯ, ಪ್ರತಿಷ್ಠಿತ ವಿವಿಗಳು ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಿ ಅವರ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿವೆ, ಆದರೆ ಇತ್ತೀಚಿನ ದಿನಗಳಲ್ಲಿ ರಾಜ್ಯದ ವಿವಿಗಳನ್ನು ಸರಕಾರ ಕಡೆಗಣಿಸಿದೆ, ವಿವಿಗಳಿಗೆ ಯಾವುದೇ ಅನುದಾನ ನೀಡದೇ ಅವುಗಳನ್ನು ಕೇವಲ ವಿದ್ಯಾರ್ಥಿಗಳ ಶುಲ್ಕದ ಮೇಲೆ ನಡೆಸುವಂತೆ ಮಾಡುತ್ತಿದೆ, ಇದರಿಂದ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಮೇಲೆ ಹಲವಾರು ಶುಲ್ಕಗಳನ್ನು ಹೇರುತ್ತಿದೆ, ಹಿಂದಿನ ಸರ್ಕಾರ ಸ್ಥಾಪಿಸಿದ 09 ವಿಶ್ವವಿದ್ಯಾಲಯಗಳು ಮುಚ್ಚುವ ಸ್ತಿತಿಯನ್ನು ಸರಕಾರ ನಿರ್ಮಾಣ ಮಾಡುತ್ತಿದೆ, ಖಾಯಂ ಹುದ್ದೆಗಳ ನೇಮಕಾತಿ ಇಲ್ಲದ ಕಾರಣ ಸಕಾಲಕ್ಕೆ ಅಂಕಪಟ್ಟಿ, ಫಲಿತಾಂಶ, ಹಾಗೂ ಇನ್ನಿತರ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅನುಭವಿಸುವಂತಾಗಿದೆ.ವಿದ್ಯಾರ್ಥಿ ವೇತನ.

ಬಡ ವಿದ್ಯಾರ್ಥಿಗಳ ಶಿಕ್ಷಣ-ಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ವಿದ್ಯಾರ್ಥಿ ವೇತನವನ್ನು ನೀಡುವ ಯೋಜನೆಯನ್ನು ಸರಕಾರ ಪ್ರಾರಂಭಗಳು ಮಾಡಿವೆ ಆದರೆ ಇತ್ತೀಚಿನ ದಿನಗಳಲ್ಲಿ ಸರಕಾರ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ವಿದ್ಯಾರ್ಥಿ ವೇತನವನ್ನು ತಲುಪಿಸುತ್ತಿಲ್ಲ ಇದರಿಂದ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಹೊಡೆತ ಬೀಳುತ್ತಿದೆ ಎಂದರು.

ಈ ಸಂದರ್ಭದಲ್ಲಿ ಎಬಿವಿಪಿಯ ವಿಭಾಗ ಸಂಘಟನಾ ಕಾರ್ಯದರ್ಶಿ ಹರ್ಷ ನಾಯಕ, ಶಶಿಕಾಂತ ರಾಕ್ಲೆ, ಚೇತನ ಕೋರವಾರ, ದುಂಡಪ್ಪ ನಿಲೋಗಿ, ಬಾಲಾಜಿ ಬಿರಾದಾರ, ಬಸನಗೌಡ ಕೋನರಡ್ಡಿ, ಕಾರ್ತಿಕ ಬಿರಾದಾರ, ಅಜಯ, ಶಿಲ್ಪಾ ಪೂಜಾರಿ, ನಿಖಿತಾ ರೂಡಿ, ಅಜಯ ಸೋಲಂಕಿ, ಶಶಿಕುಮಾರ ಪಾಟೀಲ, ಸಾಯಿ ಬಿರಾದಾರ,

## ಅಭ್ಯರ್ಥಿಗಳ ಪ್ರಮುಖ ಬೇಡಿಕೆಗಳು?

» ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಾರಂಭ ಮಾಡಬೇಕು.

» ವಿವಿಧ ಇಲಾಖೆಗಳಿಗೆ ನೇಮಕಾತಿ ಮಾಡುವಾಗ ವಯೋಮಿತಿಯನ್ನು ಸಡಿಲಿಕೆ ಮಾಡಬೇಕು.

» ವಿಶ್ವ ವಿದ್ಯಾಲಯಗಳಿಗೆ ಅನುದಾನ ನೀಡಬೇಕು.

» ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಫಲಿತಾಂಶ, ಅಂಕಪಟ್ಟಿ ನೀಡಬೇಕು.

» ಸಮರ್ಪಕವಾಗಿ ವಿದ್ಯಾರ್ಥಿ ವೇತನವನ್ನು ತಲುಪಿಸಬೇಕು.

» ಕರ್ನಾಟಕ ರಾಜ್ಯದಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಕೇಳುವುದಕ್ಕೆ ಸರಕಾರಕ್ಕೆ ಸಮಯವಿಲ್ಲ, ಸರಕಾರ ವಿದ್ಯಾರ್ಥಿಗಳನ್ನು ಸಂಪೂರ್ಣವಾಗಿ ಕಡೆಗಣಿಸಿದೆ, ಸರಕಾರ ತಕ್ಷಣವೇ ಸಮಸ್ಯೆಗಳಿಗೆ ಸ್ಪಂದಿಸದೇ ಹೋದರೆ ಬೃಹತ್ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

# ದಾರಿ ದೀಪವಾದ ಜ್ಞಾನ ವೃಕ್ಷ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಕೇವಲ 11 ವಿದ್ಯಾರ್ಥಿಗಳಿಂದ 2013ರಲ್ಲಿ ಆರಂಭವಾದ ಜ್ಞಾನವೃಕ್ಷ ತರಬೇತಿ ಸಂಸ್ಥೆ ಇಂದು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡುತ್ತಾ ಗಮನ ಸೆಳೆದಿದೆ. ಕಳೆದ 13 ವರ್ಷಗಳಿಂದ ನಿರಂತರವಾಗಿ ತರಬೇತಿ ನೀಡುತ್ತಾ, ಸುಮಾರು 2000 ರಿಂದ 3000 ವಿದ್ಯಾರ್ಥಿಗಳು ತಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ಇಲ್ಲಿ ತರಬೇತಿ ಪಡೆದು ಹೊರಟಿದ್ದಾರೆ.

ಇತ್ತೀಚೆಗೆ ಸಂಸ್ಥೆ ಮತ್ತೊಂದು ಮಹತ್ವದ ಸಾಧನೆ ಮಾಡಿದ್ದು, ಪರೀಕ್ಷೆ ಬರೆದ ಒಟ್ಟು 39 ವಿದ್ಯಾರ್ಥಿಗಳಲ್ಲಿ 34 ಮಂದಿ ಉತ್ತೀರ್ಣರಾಗಿ ಸೈನಿಕ ಶಾಲೆಗೆ ಆಯ್ಕೆಯಾಗಿದ್ದಾರೆ. ಈ ಸಾಧನೆ ಸಂಸ್ಥೆಗೆ ಮಾತ್ರವಲ್ಲದೆ ಗುರುಮಠಕಲ್ ಪಟ್ಟಣಕ್ಕೂ ಹೆಮ್ಮೆಯ ವಿಷಯವಾಗಿದೆ.

ಈ ಸಂಸ್ಥೆಯಿಂದ ತರಬೇತಿ ಪಡೆದವರಲ್ಲಿ 150 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಕ್ಷೇತ್ರಕ್ಕೆ, ಸುಮಾರು 600 ರಿಂದ 700 ವಿದ್ಯಾರ್ಥಿಗಳು ಇಂಜಿನಿಯರಿಂಗ್ ಕ್ಷೇತ್ರಕ್ಕೆ ಪ್ರವೇಶ ಪಡೆದಿದ್ದಾರೆ. ಅಲ್ಲದೆ 20 ರಿಂದ 30 ವಿದ್ಯಾರ್ಥಿಗಳು ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್.ಡಿ.ಎ) ಭಾರತೀಯ ಸಶಸ್ತ್ರ ಪಡೆಗಳಿಗೆ ಆಯ್ಕೆಯಾಗಿರುವುದು ಸಂಸ್ಥೆಯ ವಿಶೇಷತೆ. ಇದರ ಜೊತೆಗೆ ಸುಮಾರು 30 ವಿದ್ಯಾರ್ಥಿಗಳು ವಿವಿಧ ಸರ್ಕಾರಿ ಇಲಾಖೆಯಲ್ಲಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶಿಕ್ಷಣದ ಜೊತೆಗೆ ಸಂಸ್ಕಾರ, ಶಿಸ್ತು ಮತ್ತು ಮೌಲ್ಯಗಳನ್ನು ನೀಡುವುದರಲ್ಲಿ ಜ್ಞಾನವೃಕ್ಷ ತರಬೇತಿ ಸಂಸ್ಥೆ ಪ್ರಮುಖ ಪಾತ್ರವಹಿಸುತ್ತಿದೆ. ಇಲ್ಲಿ ವಸತಿ ಸಹಿತ ಹಾಗೂ ವಸತಿ ರಹಿತ ತರಬೇತಿ ವ್ಯವಸ್ಥೆ ಕೂಡ ಲಭ್ಯವಿದೆ.

ಪ್ರಸ್ತುತ ವರ್ಷದಲ್ಲಿ ಸುಮಾರು 250 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದು, ಸಂಸ್ಥೆಯಲ್ಲಿ ಸುಸಜ್ಜಿತ ಕಟ್ಟಡ, 11 ವಿಶಾಲ ಕೊಠಡಿಗಳು ಮತ್ತು ವಿಶಾಲ ಮೈದಾನ ಸೇರಿದಂತೆ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಸುಮಾರು 10 ಜನ ಪರಿಣಿತ ಶಿಕ್ಷಕರು ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ನೀಡುತ್ತಾ ತರಬೇತಿ ಕೇಂದ್ರವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

ಸ್ಥಳೀಯ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಉಜ್ವಲ ಭವಿಷ್ಯ ರೂಪಿಸುವಲ್ಲಿ ಈ ಸಂಸ್ಥೆ ಮಹತ್ವದ ಪಾತ್ರವಹಿಸುತ್ತಿದ್ದು, ಈ ಬಾರಿಯ ಪ್ರವೇಶಗಳು ಪ್ರಾರಂಭವಾಗಿದ್ದು, ಏಪ್ರಿಲ್ 2 ರಿಂದ ತರಗತಿಗಳು ಪ್ರಾರಂಭವಾಗುತ್ತಿವೆ, ಹೆಚ್ಚಿನ ಮಾಹಿತಿಗಾಗಿ 9494940818 ಕರೆ ಮಾಡಿ ಅಥವಾ ತರಬೇತಿ ಕೇಂದ್ರಕ್ಕೆ ಭೇಟಿ ನೀಡಲು ಸಂಸ್ಥೆಯ ಸಂಸ್ಥಾಪಕರು ರಮೇಶ್ ಅನಸುರ ಸಲಹೆ ನೀಡಿದ್ದಾರೆ.

# ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ದಾಳಿ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತನ್ನದೇ ಕಚೇರಿಯ ಕೆಳಹಂತದ ನೌಕರನಿಂದ ಲಂಚ ಸ್ವೀಕರಿಸುತ್ತಿದ್ದ ವೇಳೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿರುವ ಘಟನೆ ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ. ಮುಳ್ಳೂರು ಗ್ರಾ.ಪಂ. ಪಿಡಿಒ ಮಂಜುಳಾ ಬಂಧಿತ ಅಧಿಕಾರಿಯಾಗಿದ್ದು, ಲೋಕಾಯುಕ್ತ ದಾಳಿಯ ಆಘಾತದಿಂದ ಕಚೇರಿಯಲ್ಲೇ ಕೈ ಕುಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ನಾಟಕೀಯ ಬೆಳವಣಿಗೆಯೂ ಜರುಗಿದೆ. ಘಟನೆಯ ವಿವರ: ಇದೇ ಪಂಚಾಯಿತಿಯಲ್ಲಿ ತಂದೆಯ ನಿಧನದ ನಂತರ ಅನುಕಂಪದ ಆಧಾರದ ಮೇಲೆ ವಾಟರ್‌ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಮಹದೇವಪ್ಪ ಎಂಬುವವರ ದಾಖಲೆಗಳನ್ನು ಹಿರಿಯ ಅಧಿಕಾರಿಗಳಿಗೆ ಕಳುಹಿಸಿಕೊಡಲು ಪಿಡಿಒ ಕಳೆದ 6 ತಿಂಗಳಿನಿಂದ ಸತಾಯಿಸುತ್ತಿದ್ದರು. ಈ ಕೆಲಸಕ್ಕಾಗಿ ಅವರು ಒಟ್ಟು 40 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರಿಂದ ಬೇಸತ್ತ ಮಹದೇವಪ್ಪ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಗ್ರಾಮ ಪಂಚಾಯಿತಿ ಕಚೇರಿಯಲ್ಲೇ ಮಹದೇವಪ್ಪ ಅವರಿಂದ 25 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ಏಕಾಏಕಿ ದಾಳಿ ನಡೆಸಿ ಮಂಜುಳಾ ಅವರನ್ನು ರೆಡ್‌ಹ್ಯಾಂಡ್ ಆಗಿ ಹಿಡಿದಿದ್ದಾರೆ. ಲೋಕಾಯುಕ್ತ ದಾಳಿಯಿಂದ ಆಘಾತಕ್ಕೊಳಗಾದ ಪಿಡಿಒ, ತಕ್ಷಣವೇ ಕಚೇರಿಯಲ್ಲಿದ್ದ ವಸ್ತುವಿನಿಂದ ತಮ್ಮ ಕೈಯನ್ನು ತಾವೇ ಕುಯ್ದುಕೊಂಡು ಅಸ್ವಸ್ಥರಾದರು. ಕೂಡಲೇ ಅವರನ್ನು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ದಾಖಲಿಸಲಾಯಿತು. ಸ್ಥಳಕ್ಕೆ ತಾ.ಪಂ. ಇಒ ಹೊಂಗಯ್ಯ ಹಾಗೂ ತಾಲೂಕು ಪಿಡಿಒಗಳ ಸಂಘದ ಅಧ್ಯಕ್ಷ ರಾಮಣ್ಣ ಭೇಟಿ ನೀಡಿದ್ದರು. ಲೋಕಾಯುಕ್ತ ಪೊಲೀಸರು ರಾತ್ರಿಯವರೆಗೂ ಕಚೇರಿಯ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದಾರೆ.

# ಗ್ರಾಹಕರಿಗೆ ಪಂಗನಾಮ:ಮೈಕ್ರೋ ಫೈನಾನ್ಸ್ ಸಿಬ್ಬಂದಿ ಅರೆಸ್ಟ್

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಗ್ರಾಹಕರಿಂದ ಸಾಲದ ಕಂತುಗಳನ್ನು ವಸೂಲಿ ಮಾಡಿ ಬ್ಯಾಂಕ್‌ಗೆ ಪಾವತಿಸದೆ ವಂಚಿಸಿ ತಲೆಮರೆಸಿಕೊಂಡಿದ್ದ ಮೈಕ್ರೋ ಫೈನಾನ್ಸ್ ಸಿಬ್ಬಂದಿಯನ್ನು ಹುಣಸೂರು ನಗರ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಾಲೂಕಿನ ಗೌರಿಪುರ ಗ್ರಾಮದ ನಿವಾಸಿ ಸುವಾಸ್ ಬಂಧಿತ ಆರೋಪಿ. ಈತ ನಗರದ ಖಾಸಗಿ ಮೈಕ್ರೋ ಫೈನಾನ್ಸ್ ಸಂಸ್ಥೆಯೊಂದರಲ್ಲಿ ಸಾಲ ವಸೂಲಾತಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದನು.

**ಘಟನೆಯ ಹಿನ್ನೆಲೆ:**

ಇತ್ತೀಚೆಗಷ್ಟೇ ಸಂಸ್ಥೆಗೆ ಕೆಲಸಕ್ಕೆ ಸೇರಿದ್ದ ಸುವಾಸ್, ಸಂಸ್ಥೆಯ ನಂಬಿಕೆ ಗಳಿಸಿ ಗ್ರಾಹಕರಿಂದ ಹಣ ಸಂಗ್ರಹಿಸುವ ಜವಾಬ್ದಾರಿ ಹೊತ್ತಿದ್ದನು. ಕಳೆದ ಕೆಲವು ದಿನಗಳಲ್ಲಿ ಸುಮಾರು 50 ಗ್ರಾಹಕರಿಂದ ಒಟ್ಟು 1,72,200 ರೂ. ಹಣವನ್ನು ಕಂತಿನ ರೂಪದಲ್ಲಿ ವಸೂಲಿ ಮಾಡಿದ್ದನು. ಆದರೆ, ಈ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್ ಖಾತೆಗೆ ಜಮೆ ಮಾಡದೆ, ವಂಚಿಸುವ ಉದ್ದೇಶದಿಂದ ತನ್ನ ಬಳಿಯೇ ಇಟ್ಟುಕೊಂಡು ತಲೆಮರೆಸಿಕೊಂಡಿದ್ದನು.

ಬ್ಯಾಂಕ್ ವ್ಯವಸ್ಥಾಪಕರು ಈ ಹಣಕಾಸಿನ ವ್ಯತ್ಯಯವನ್ನು ಗಮನಿಸಿ, ಸುವಾಸ್ ವಿರುದ್ಧ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. **ಪೊಲೀಸ್ ಕಾರ್ಯಾಚರಣೆ:**

ದೂರನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇನ್‌ಸ್ಪೆಕ್ಟರ್ ಸಂತೋಷ್ ಕಶ್ಯಪ್ ಅವರ ಮಾರ್ಗದರ್ಶನದಲ್ಲಿ, ಸಬ್ ಇನ್‌ಸ್ಪೆಕ್ಟರ್ ತಾಜುದ್ದೀನ್ ನೇತೃತ್ವದ ತಂಡ ಆರೋಪಿಯ ಪತ್ತೆಗಾಗಿ ಬಲೆ ಬೀಸಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದ ಪೊಲೀಸರು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಯಶಸ್ವಿ ಕಾರ್ಯಾಚರಣೆಯಲ್ಲಿ ಮುಖ್ಯಪೇದೆ ಅರುಣ್, ರಾಜರತ್ನ ಭಾಗವಹಿಸಿದ್ದರು.

# ಎಸ್‌ಎಸ್‌ಎಲ್‌ಸಿ:ನಿಷೇಧಾಜ್ಞೆ ಜಾರಿ

ಬಳ್ಳಾರಿ: ಜಿಲ್ಲೆಯಾದ್ಯಂತ 65 ಕೇಂದ್ರಗಳಲ್ಲಿ ಮಾರ್ಚ್ 18 ರಿಂದ ಏಪ್ರಿಲ್ 02 ರವರಗೆ ಎಸ್‌ಎಸ್‌ಎಲ್‌ಸಿ ಪರಿಕ್ಷೆ –1 ನಡೆಯಲಿದೆ. ಪರೀಕ್ಷಾ ದಿನದಂದು ಅವ್ಯವಹಾರಗಳನ್ನು ತಡೆಗಟ್ಟಲು ಹಾಗೂ ಪರೀಕ್ಷೆ ಸಮಯದಲ್ಲಿ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಆವರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023ರ ಕಲಂ 163ರ ಅಡಿ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ ಅವರು ಆದೇಶಿಸಿದ್ದಾರೆ.

# ಬಲಭೀಮೇಶ್ವರ ಪ್ರವಚನ ಸಂಪನ್ನ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಭಕ್ತಿ ಮತ್ತು ಅಧ್ಯಾತ್ಮದ ಅಪೂರ್ವ ಸಂಗಮಕ್ಕೆ ಸಾಕ್ಷಿಯಾಗಿದ್ದ ಸಮೀಪದ ಪತ್ತೇಪುರ ಗ್ರಾಮದ ಶ್ರೀ ಬಲಭೀಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಮೂರನೇ ವರ್ಷದ 9 ದಿನಗಳ ಪುರಾಣ ಪ್ರವಚನ ಕಾರ್ಯಕ್ರಮವು ಸೋಮವಾರ ಅತ್ಯಂತ ಸಡಗರದಿಂದ ಮಂಗಲಗೊಂಡಿತು.

ಗ್ರಾಮದ ಶಾಂತಿ ಮತ್ತು ಏಳಿಗೆಗಾಗಿ ಹಮ್ಮಿಕೊಂಡಿದ್ದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ವಂದಾಲಿ ಮಠದ ಶ್ರೀ ಬಸವರಾಜ ಶ್ರೀಗಳು ಆಶೀರ್ವಚನ ನೀಡಿ, "ಮನುಷ್ಯ ಸನ್ಮಾರ್ಗದಲ್ಲಿ ನಡೆಯಲು ಧರ್ಮ ಮತ್ತು ಭಕ್ತಿ ಅತಿ ಅವಶ್ಯಕ. ಇಂತಹ ಕಾರ್ಯಕ್ರಮಗಳು ಮನಸ್ಸನ್ನು ಶುದ್ಧೀಕರಿಸುತ್ತವೆ" ಎಂದು ಹಿತವಚನ ನೀಡಿದರು.


ಗಾಯಕ ಬಸವರಾಜ ಬಂಟನೂರ್ ಗವಾಯಿಗಳ ಸುಮಧುರ ಕಂಠಸಿರಿ ಹಾಗೂ ಈಶ್ವರ ಬಡಿಗೇರ್ ಅವರ ತಬಲಾ ವಾದನ ಭಕ್ತರನ್ನು ಭಕ್ತಿ ಸಾಗರದಲ್ಲಿ ತೇಲಿಸಿತು.

ಮಂಗಳವಾರ ಬೆಳಿಗ್ಗೆ ಸಕಲ ವಾದ್ಯಗೋಷ್ಠಿಗಳೊಂದಿಗೆ ನಡೆದ ಪಲ್ಲಕ್ಕಿ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಭಕ್ತರ ಕಣ್ಣಿಗೆ ಹಬ್ಬದಂತಿತ್ತು.

ದೇವಸ್ಥಾನದ ಅರ್ಚಕ ರಾಮಣ್ಣ ಪೂಜಾರಿ ಅವರ ನೇತೃತ್ವದಲ್ಲಿ ನಡೆದ ಈ ಸಮಾರಂಭವು ಗ್ರಾಮದ ಜಾತಿ–ಮತ ಭೇದ ಮರೆತ ಒಗ್ಗಟ್ಟಿಗೆ ಕನ್ನಡಿಯಾಯಿತು. ಶಿಕ್ಷಕರಾದ ಹಣಮಂತ್ರಾಯ ಕಾಡಮಗೇರಿ ಹಾಗೂ ರಮೇಶ ತಣಕೇದಾರ ಕಾರ್ಯಕ್ರಮ ನಿರೂಪಿಸಿದರು. ಶರಣು ಮೂಡುಬೂಳ ಅವರು ವಂದಿಸಿದರು. ಗ್ರಾಮದ ಹಿರಿಯರು, ಮಹಿಳೆಯರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮಹಾಪ್ರಸಾದ ಸ್ವೀಕರಿಸಿದರು.

# ರಾಜ್ಯದಲ್ಲಿ ಆಡಳಿತ ಯಂತ್ರ ಕುಸಿದಿರುವುದಕ್ಕೆ ಕಲಾಪ ಸ್ಥಗಿತವೇ ಉತ್ತರ: ಶ್ರೀಧರ ಆರೋಪ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ರಾಜ್ಯದ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ರಾಜಕೀಯ ಶಕ್ತಿ ಕೇಂದ್ರವಾಗಿರುವ ವಿಧಾನಸಭೆ ಅಧಿವೇಶನಕ್ಕೆ ಸರಿಯಾಗಿ ಸಚಿವರು ಹಾಜರಾಗುತ್ತಿಲ್ಲ, ಶಾಸಕರ ತಮ್ಮ–ತಮ್ಮ ಮತಕ್ಷೇತ್ರಗಳ ಜನರ ಸಮಸ್ಯೆಗಳಿಗೆ ಉತ್ತರಿಸುವ ಇಲಾಖೆಗಳ ಕಾರ್ಯದರ್ಶಿಗಳು ಕೂಡ ಲಿಖಿತ ಉತ್ತರ ನೀಡುತ್ತಿಲ್ಲ, ಹೀಗಾದರೇ ಹೇಗೆ ಸದನ ನಡೆಸಬೇಕೆಂದು ವಿಧಾನಸಭಾಧ್ಯಕ್ಷ ಯು.ಟಿ ಖಾದರ ಕಲಾಪ ಸ್ಥಗಿತಗೊಳಿಸಿರುವುದನ್ನು ಗಮನಿಸಿದರೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ಯಂತ್ರ ಸಂಪೂರ್ಣ ಕುಸಿದಿರುವುದು ಬಹಿರಂಗವಾಗಿದೆ ಎಂದು ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಅಧಿಕಾರಕ್ಕೆ ಬಂದ ದಿನದಿಂದ ಮುಖ್ಯಮಂತ್ರಿ ಖುರ್ಚಿಗಾಗಿ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಬಣಗಳ ಮಧ್ಯೆ ಕಿತ್ತಾಟ ಇಂದಿನ ದಿನವರೆಗೆ ನಡೆ–ಯುತ್ತಿದೆ, ಅಧಿವೇಶನ ಸಮಯದಲ್ಲಿ ಪ್ರಮುಖ ಖಾತೆಗಳ ಸಚಿವರು ವಿಧಾನಸಭೆಗೆ ಆಗಮಿಸುತ್ತಿಲ್ಲ, ಹಿರಿಯ ಐಎಎಸ್ ಅಧಿಕಾರಿಗಳು ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಪರಿಣಾಮ ಜನಸಾಮಾನ್ಯರು ಸರ್ಕಾರದ ಕಾರ್ಯವೈಖರಿ ಬಗ್ಗೆ ರೋಸಿ ಹೋಗಿದ್ದಾರೆ ಎಂದು ತಮ್ಮ ಅಸಮಧಾನ ವ್ಯಕ್ತಪಡಿಸಿದರು.

ಈ ಮೊದಲು ಸ್ಪೀಕರ್ ಅವರು ಕೂಡ ಹಲವಾರು ಭಾರಿ ಆಡಳಿತ ಯಂತ್ರ ಚುರುಕುಗೊಳಿಸಲು ಸೂಚಿಸಿದರು ಬದಲಾವಣೆಯಾಗಿಲ್ಲ, ಬದಲಾಗಿ ಇಡೀ ಮುಖ್ಯಮಂತ್ರಿ ತಂಡ ಅಧಿಕಾರ ಖುರ್ಚಿ ಉಳಿಸಿಕೊಳ್ಳಲು ಹೆಚ್ಚು ಗಮನ ನೀಡುತ್ತಿದೆ, ಇನ್ನೊಂದು ಕಡೆ ಡಿ.ಕೆ ಶಿವಕುಮಾರ ಅವರ ತಂಡ ಮುಖ್ಯಮಂತ್ರಿ ಅಧಿಕಾರ ಡಿಕೆಶಿಗೆ ಕೊಡಿಸಲು ದೆಹಲಿ ಪೆರೇಡ್ ನಡೆಸುತ್ತಿದ್ದಾರೆ, ತಮ್ಮ ಮತಕ್ಷೇತ್ರಗಳಿಗೆ ಸೂಕ್ತ ಅನುದಾನ ಬಜೆಟ್‌ನಲ್ಲಿ ಸಿಕ್ಕಿಲ್ಲ ಎಂದು ಹಲವು ಶಾಸಕರು ಬಹಿರಂಗವಾಗಿ ಸರ್ಕಾರದ ನಡೆಯನ್ನು ಟೀಕಿಸಿ, ಕ್ಷೇತ್ರಗಳನ್ನೆ ಮರೆತಿದ್ದಾರೆ ಎಂದು ಹೇಳಿದರು.

ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಜನರ ನಿರೀ–ಕ್ಷೆಯಂತೆ ಅಭಿವೃದ್ಧಿ ಕಾರ್ಯಗಳು ಜರುಗುತ್ತಿಲ್ಲ, ಹಲವಾರು ಸಚಿವರು ಭ್ರಷ್ಟಾಚಾರವೆಸಗಿದ್ದಾರೆ, ಶಾಸಕರಿಗೆ ಪರ್ಸಂಟೇಜ್ ಲಂಚದ ಹಣ ಮುಟ್ಟಿದ ಮೇಲೆಯೇ ಕಾಮಗಾರಿಗಳಿಗೆ ಶಂಕುಸ್ಥಾಪನೆಗೆ ಆಗಮಿಸುತ್ತಿದ್ದಾರೆ, ಇದನ್ನು ಮುಚ್ಚಿಕ್ಕೊಳ್ಳಲು ಕೆಲ ಪ್ರಭಾವಿ ಸಚಿವರು ದೇಶದ ಪ್ರಧಾನಿ ನರೇಂದ್ರ ಮೋದಿಯವರನ್ನು ದಿನಾಲೂ ಟೀಕಿಸುತ್ತಾ ಕಾಲ ಕಳೆಯುತ್ತಿದ್ದಾರೆ, ಎಲ್ಲವನ್ನು ಗಮನಿಸುತ್ತಿರುವ ಜನರು ಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ.

# ಶ್ರೀ ಭಗವಾನ್ ಮಹಾವೀರ ಜಯಂತಿ ಅರ್ಥಪೂರ್ಣವಾಗಿ ಅಚರಿಸಲು ಕ್ರಮ



ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಮಾರ್ಚ್ 31 ರಂದು ಶ್ರೀ ಭಗವಾನ್ ಮಹಾವೀರ ಜಯಂತಿಯನ್ನು ಅದ್ದೂರಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್–2 ಸಭಾಂಗಣದಲ್ಲಿ ಶ್ರೀ ಭಗವಾನ್ ಮಹಾವೀರ ಆಚರಣೆ ಕುರಿತು ಕರೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಶ್ರೀ ಭಗವಾನ್ ಮಹಾವೀರ ಜಯಂತಿ ಪ್ರಯುಕ್ತ ಸಮಾಜದ ಸಹಭಾಗಿತ್ವದಲ್ಲಿ ಮಾ. 31ರ ಬೆಳಿಗ್ಗೆ 8.30ಕ್ಕೆ ಮಹಾವೀರರ ಭಾವಚಿತ್ರದ ಮೆರವಣಿಗೆಯು ನಗರದ ಸಾಹಿತ್ಯ ಭವನದದಿಂದ ಆರಂಭಗೊಂಡು ಶ್ರೀ ಮುನಿ ಸೂರತ್ ಜೈನ ಮಂದಿರದವರಿಗೆ ನಡೆಯಲಿದೆ. ನಂತರ ಬೆಳಿಗ್ಗೆ 11.30ಕ್ಕೆ ನಗರದ ಎಂಪಿ ಪ್ಯಾಲೇಸ್ ನಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಪೂಜೆ, ಶ್ರೀ ಭಗವಾನ್ ಮಹಾವೀರ ಕುರಿತು ವಿಶೇಷ ಉಪನ್ಯಾಸ ಹಾಗೂ ಇತರೆ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಶ್ರೀ ಭಗವಾನ್ ಮಹಾವೀರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತದೆ. ಈ ಜಯಂತಿ ಕಾರ್ಯಕ್ರಮ ಯಶಸ್ವಿಗೆ ಸಮಾಜದ ಎಲ್ಲಾ ಮುಖಂಡರು, ಸಾರ್ವಜನಿಕರ ಸಹಕಾರವು ಅತ್ಯವಶ್ಯಕವಾಗಿದ್ದು, ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

# ಮಳೆಗೆ ರಾಶಿ ರಾಶಿ ಧರೆಗಿಳಿದ ಆನೆಕಲ್ಲು



ಕಲಘಟಗಿ : ಬೀಸಿಲಿನ ಬೇಗೆಯಿಂದ ನರಳಿದ ಪಟ್ಟಣದ ಜನತೆಗೆ ಮದ್ಯಾನ್ಹ 3–45ರಿಂದ ಪ್ರಾರಂಭವಾಗಿ 5 ಘಂಟೆಯವರೆಗೆ ಮಳೆ ಜೊರಾಗಿ ಸುರಿಯುವುದರ ಜೊತೆಗೆ ಆನೆಕಲ್ಲುಗಳ ರಾಶಿಯನ್ನೆ ಧರೆಗಿಳಿಸಿತು.

ದೊಡ್ಡದೊಡ್ಡಗಾತ್ರದ ಆನೆಕಲ್ಲುಗಳು ಬಿಳುವುದರ ಜೊತೆಗೆ ಮಳೆ ಗಾಳಿ ಬಿಸಿ ತಂಪಾಗಿಸಿತು ಕೆಲವುಂದೆಡೆ ಆನೆಕಲ್ಲುಗಳ ರಾಶಿ ಬಿದ್ದಿದ್ದರಿಂದ ಪಟ್ಟಣ ಕಾಶ್ಮೀರದಲ್ಲಿನ ಹಿಮದ ರಾಶಿಯ ಅನುಭವವನ್ನು ತಂದಿತೆಂದು ಪ್ರತ್ಯಕ್ಷ ದರ್ಶಿಗಳು ಪತ್ರಿಕೆಗೆ ತಿಳಿಸಿದ್ದಾರೆ ನವಸಂವತ್ಸರ ಆರಂಬಕ್ಕೂ ಮುನ್ನ ಸುರಿದ ಮಳೆಯಿಂದ ಕಬ್ಬು ಬೆಳೆಗಾರರಿಗೆ ಹರುಷ ತಂದಿದ್ದು ರೈತರಲ್ಲಿ ಹರ್ಷ ಮೂಡಿಸಿದೆ.

# ಬಸವಶ್ರೀ ಬ್ಯಾಂಕ್ ವತಿಯಿಂದ ನೀರಿನ ಅರವಟಿಗೆ ಉದ್ಘಾಟನೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಪಟ್ಟಣದ ಶ್ರೀ ಬಸವಶ್ರೀ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ಮಾನವಿ ಯಾದಗಿರಿ ಶಾಖೆ ವತಿಯಿಂದ ಪಟ್ಟಣದ ಚಿತ್ತಾಪುರ ರಸ್ತೆಯ ಖಖಿಔ ಆಫೀಸ್ ಎದುರುಗಡೆ ಸಹಕಾರಿ ಸಂಘದಿಂದ ಪ್ರಾರಂಭಿಸಿದ ಶುದ್ಧ ಕುಡಿಯುವ ನೀರಿನ ಅರವಟಿಗೆಯನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದ ಶ್ರೀ ಬಸವಶ್ರೀ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ಮಾನವಿ ಸಿಇಒ ವೀರೇಶ ಎನ್. ಹೊಸೂರು ರವರು

’ವರ್ಷದಿಂದ ವರ್ಷಕ್ಕೆ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ಮಾರ್ಚ್ ಆರಂಭದಲ್ಲಿಯೇ ಹೆಚ್ಚು ಬಿಸಿಲು

ಇರುವುದರಿಂದ ಪ್ರತಿ ವರ್ಷ ದಂತೆ ಈ ವರ್ಷವು ಸಂಘದ ಶಾಖೆ ಗಳಾದ ಮಾನವಿ, ಲಿಂಗಸುಗೂರು, ಸಿರವಾರ, ದೇವದುರ್ಗ, ರಾಯಚೂರು, ಸಿಂಧನೂರು, ಗಂಗಾವತಿ, ಕೊಪ್ಪಳ ಹಾಗೂ ಹುಣಸಗಿ ಕಡೆಗಳಲ್ಲಿ ನೀರಿನ ಅರವಟಿಗೆ ಪ್ರಾರಂಭಿಸಿದ್ದು,

ಪಟ್ಟಣಕ್ಕೆ ಬರುವ ಸಾವಿರಾರು ಪ್ರಯಾಣಿಕರು ,ಸಾರ್ವಜನಿಕರು, ಹಳ್ಳಿಗರರಿಗೆ ಮತ್ತು ವಿದ್ಯಾರ್ಥಿಗಳಿಗೆ ನೀರಿನ ದಾಹ ತಣಿಸಲು ಸಹಕಾರಿಯಾಗಲಿದೆ’ ಎಂದರು.

ಯಾದಗಿರಿ ಶಾಖೆಯ ಸದಸ್ಯರಾದ, ಬಸವರಾಜಪ್ಪಗೌಡ ಬಿಳ್ಹಾರ್, ಶರಣಬಸಪ್ಪ ಗೌಡ, ಸುರೇಶ್ ಗೌಡ ಶೆಟ್ಟಳ್ಳಿ, ಸಂಜೀವ ರೆಡ್ಡಿ, ವೈಜನಾಥ, ಪರಸನಗೌಡ, ಶರಣಬಸಪ್ಪ ಬೆಂಕೋಫ್, ರಮೇಶ ಬಸವಂತಪುರ, ಈರಪ್ಪ ಮತ್ತು ವ್ಯವಸ್ಥಾಪಕರಾದ ಅಭಿಷೇಕ ಬಿ, ಸಿಬ್ಬಂದಿಗಳಾದ ವೀರೇಶ ರೆಡ್ಡಿ, ಪೂರ್ಣಿಮಾ, ಶ್ರೀ ಕಾಂತ , ಪವನ್ ಕುಮಾರ್ ಹಾಜರಿದ್ದರು.

# ಮುದ್ನಾಳ ಅಭಿಮಾನಿ ಬಳಗ ರಚಿಸಲು ನಿರ್ಧಾರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲಾದ್ಯಂತ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ಅವರ ನಿರಂತರ ಹೋರಾಟದದಿಂದ ಜನ ಸಾಮಾನ್ಯರ ಸಮಸ್ಯೆ ವಿಶೇಷವಾಗಿ ಮೂಲ ಭೂತ ಸೌಕರ್ಯ ಕುಡಿಯುವ ನೀರು ರೈತರ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಇತ್ಯಾರ್ಥ ಪಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ ಆದ ಕಾರಣ ಯುಗಾದಿ ಹಬ್ಬದ ನಂತರ ಅವರ ಹೆಸರಿನಲ್ಲಿ ಅಭಿಮಾನಿಗಳ ಸಂಘ ರಚಿಸಲಾಗುವುದೆಂದು ಡೇವಿಡ್ ಸ್ಯಾಮಿನ್ ಯಾದಗಿರಿ ಅವರು ನಗರದ ಪತ್ರಿಕಾ ಭವನದಲ್ಲಿ ಪತ್ರಿಕೆ ಗೋಷ್ಠಿಯಲ್ಲಿ ತಿಳಿಸಿದ್ದಾರೆ

ಈ ಕುರಿತು ಪತ್ರಿಕೆ ಗೋಷ್ಠಿಯಲ್ಲಿ ಮಾತನಾಡಿದ ಅವರು ಸಾಮಾಜಿಕ ಹೋರಾಟಗಾನ ಸಂಘ ರಚನೆಗೆ ಪಕ್ಷಾತೀತವಾಗಿ ಬನ್ನಿ ಹೋರಾಟಮಾಡಿ ಜಿಲ್ಲೆಯ ಅಧಿವೃದ್ಧಿಗೆ ಶ್ರಮಿಸಿ! ಡೇವಿಡ್ ಸ್ಯಾಮಿನ್ ಯಾದಗಿರಿ ಕರೆ ಕೊಟ್ಟಿದ್ದಾರೆ. ಜಿಲ್ಲೆಯ ನಗರ ಹೋಬಳಿ ತಾಲೂಕ ಜಿಲ್ಲಾ ಘಟಕಗಳಲ್ಲಿ ಪೂರ್ವಭಾವಿ ಸಭೆ ಕರೆದು ಅವರ ಹೆಸರಿನ ಮೇಲೆ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ಅಭಿಮಾನಿ ಬಳಗದ ಸಂಘ ಸಂಚಾಲಕರನ್ನಾಗಿ ಮಾಡಲಾಗುವುದೆಂದು ಹೇಳಿದರು.

ರಫೀಕ್ ಪಟೇಲ್ ಮಾತನಾಡಿದ ಅವರು ಜಿಲ್ಲೆಯ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿರುವ ಆದ ಕಾರಣ ನಿಸ್ವಾರ್ಥಿಯಿಂದ ಸಮಾಜ ಸೇವಾ ಮಾಡುಲು ಬಯಸುವವರು ಯಾವುದೇ ದೃಷ್ಟಟವಿರಬಾರದು ಮತ್ತು ಪಕ್ಷಾತೀತ ಸಂಘಟನೆ ಮಾಡಲಾಗುತ್ತಿದ್ದು ಆದ ಕಾರಣ ಇವರ ಹೆಸರಿನಲ್ಲಿ ನಗರ ಹೋಬಳಿ ತಾಲ್ಲೂಕು ಮತ್ತು ಜಿಲ್ಲಾ ಘಟಕ ಅಭಿಮಾನಿಗಳ ಸಂಘ ರಚನೆ ಮಾಡಲು ತೀರ್ಮಾನಿಸಲಾಗಿದೆ ಯುಗಾದಿ ಹಬ್ಬದ ನಂತರ ನಿರಂತರ ಅಭಿಮಾನಿಗಳು ಸಂಚಾರ ಮಾಡಿ ಸಂಘ ರಚಿಸಲಾಗುವುದು ಹೆಚ್ಚಿನ ಮಾಹಿತಿಗಾಗಿ ಅಂಜು 9844840080 ಭೀಮಾಶಂಕರ : 7090808016 ಇವರಿಗೆ ಸಂಪರ್ಕಿರಿ ಎಂದು ತಿಳಿಸಿದ್ದಾರೆ

ಇದೇ ಸಂದರ್ಬದಲ್ಲ : ಜಗದೀಶ ಹಿರೇಮಠ, ಬಾಬುಖಾನ್, ಆಂಜನೇಯ, ಭೀಮಾಶಂಕರ, ಪವನ ಸೇರಿದಂತೆ ಅನೇಕ

# ಜನಗಣತಿ: ಅಚ್ಚುಕಟ್ಟಾಗಿ ನಿರ್ವಹಿಸಿ



ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಭಾರತ ಜನಗಣತಿ 2027ರ ಕಾರ್ಯಕ್ಕೆ ನೇಮಿಸಲ್ಪಡುವ ಅಧಿಕಾರಿಗಳು ಮತ್ತು ಸಹಾಯಕ ಅಧಿಕಾರಿಗಳು ಜನಗಣತಿ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಾರತ ಜನಗಣತಿ 2027ರ ಸಂಬಂಧ ಜಿಲ್ಲಾ ಹಂತದ ಅಧಿಕಾರಿಗಳು, ನಗರ, ಸ್ಥಳೀಯ ಸಂಸ್ಥೆ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ಆಯೋಜಿಸಿದ್ದ ಮೂರು ದಿನಗಳ ತರಬೇತಿ ಕಾರ್ಯಾಗಾರದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಜನಗಣತಿ–2027 ಪ್ರಕ್ರಿಯೆಯ ಪೂರ್ವ ಸಿದ್ಧತೆಗಳು ಆರಂಭಗೊಳ್ಳುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ಈ ಜನಗಣತಿ ಪ್ರಕ್ರಿಯೆಗೆ ಅವಶ್ಯವಿರುವ ಅಗತ್ಯ ನಕ್ಷೆಗಳು, ನಮೂನೆಗಳನ್ನು ತಯಾರು ಮಾಡುವುದು ಸೇರಿದಂತೆ ಎಲ್ಲಾ ಪೂರ್ವ ತಯಾರಿಗಳನ್ನು ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ಜನಗಣತಿ ಕರ್ತವ್ಯವನ್ನು ನಿರ್ವಹಿಸಬೇಕು. ಈ ಕಾರ್ಯದ ಮೇಲ್ವಿಚಾರಣೆಗಾಗಿ ನೇಮಕ ಮಾಡಲಾದ ತಾಲ್ಲೂಕು ನೋಡಲ್ ಅಧಿಕಾರಿಗಳು, ತಮಗೆ ಹಂಚಿಕೆ ಮಾಡಲಾದ ತಾಲ್ಲೂಕಿನ ಅರ್ಬನ್ ಮತ್ತು ರೂರಲ್ ಚಾರ್ಜಗಳಲ್ಲಿ ಜನಗಣತಿ ಕಾರ್ಯ 2027ರ ಸಂಬಂಧಿಸಿದ ಕಾರ್ಯಗಳನ್ನು ಸಂಬಂಧಪಟ್ಟ ತಹಶೀಲ್ದಾರರು, ಪೌರಾಯುಕ್ತರು ಅಥವಾ ಮುಖ್ಯಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಸೂಕ್ತ ಮೇಲ್ವಿಚಾರಣೆ ಮಾಡಬೇಕು ಎಂದು ಸೂಚನೆ ನೀಡಿದರು.

ನಿಖರ ಜನಗಣತಿಯಿಂದ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ಜನಸಾಮಾನ್ಯರಿಗೆ ತಲುಪಿಸಲು ಅನುಕೂಲವಾಗಲಿದೆ. ಕಳೆದ ಬಾರಿ 2011ರಲ್ಲಿ ಜನಗಣತಿಯು ಹಳೆಯ ಮ್ಯಾನುವೆಲ್ ಪದ್ಧತಿಯಲ್ಲಿ ನಡೆದಿತ್ತು. ಆದರೆ, ಈ ಬಾರಿ 2027ರ ಜನಗಣತಿಯು ಸಂಪೂರ್ಣವಾಗಿ ಮೊಬೈಲ್ ಆ್ಯಪ್ ಮೂಲಕ ಡಿಜಿಟಲ್ ಮೋಡ್‌ನಲ್ಲಿ ನಡೆಯಲಿದೆ. ಡಿಜಿಟಲ್ ಮೋಡ್‌ನಲ್ಲಿ ನಡೆಯುವ ಜನಗಣತಿಯು ನಿಖರತೆ ಹಾಗೂ ಪಾರದರ್ಶಕತೆಯಿಂದ ಕೂಡಿರಲಿದೆ. ಇದರಿಂದ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಲು ಸಾಧ್ಯವಾಗಲಿದೆ. ಹಾಗಾಗಿ ಜಿಲ್ಲಾ ಹಂತದ ಅಧಿಕಾರಿಗಳು, ನಗರ, ಸ್ಥಳೀಯ ಸಂಸ್ಥೆ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ಪೂರ್ವಭಾವಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

2027ರ ಜನಗಣತಿಯು ಎರಡು ಹಂತಗಳಲ್ಲಿ ನಡೆಯಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಮೊದಲ ಹಂತದಲ್ಲಿ ಕರ್ನಾಟಕದಲ್ಲಿ ಮನೆಪಟ್ಟಿ ಕಾರ್ಯಾಚರಣೆಯು 2026ರ ಏಪ್ರಿಲ್ 16 ರಿಂದ ಮೇ 15ರ ವರೆಗೆ ಒಂದು ತಿಂಗಳ ಕಾಲ ನಡೆಯಲಿದೆ. ಈ ಮೂವತ್ತು ದಿನಗಳ ಮನೆಪಟ್ಟಿ ಕಾರ್ಯ ಪ್ರಾರಂಭವಾಗುವ ಹದಿನೈದು ದಿನಗಳ ಮೊದಲು ಸ್ವಯಂ ಗಣತಿಯ ಆಯ್ಕೆ ಲಭ್ಯವಿರುತ್ತದೆ. ಎರಡನೇ ಹಂತದ ಜನಗಣತಿಯು 2027ರ ಫೆಬ್ರುವರಿಯಿಂದ ಆರಂಭವಾಗಲಿದೆ.

# ಟ್ಯಾಂಕರ್, ಲಾರಿ, ಬೈಕ್ ನಡುವೆ ಅಪಘಾತ ಓರ್ವ ಸಾವು ನಾಲ್ವರು ಗಂಭೀರ ಗಾಯ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತಾಲೂಕಿನ ಗೊರೇಬಾಳ ಗ್ರಾಮಪಂಚಾಯಿತಿವ್ಯಾಪ್ತಿಯಲ್ಲಿ ಬರುವ

ಕೆ.ಹಂಚಿನಾಳ ಕ್ಯಾಂಪ್ ಬಳಿ ಭೀಕರ ಘಟನೆ ರಸ್ತೆಯಲ್ಲಿ ಅಪಘಾತ ಸಂಭವಿಸಿ ಸ್ಥಳದಲ್ಲಿ ಓರ್ವರು ಮೃತಪಟ್ಟಿದ್ದು. ಇನ್ನು ನಾಲ್ವರಿಗೆ ಗಂಭೀರ ಗಾಯಗೊಂಡಿದ್ದಾರೆ

ರಾಸಾಯನಿಕಗೊಬ್ಬರವನ್ನು ತುಂಬಿಕೊಂಡಿರುವ ಲಾರಿ. ಹಾಲಿನ ಟ್ಯಾಂಕರ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು.ನೋಡಿಸ್ಥಳೀಯ ಸಾರ್ವಜನಿಕರಿಗೆ ಭಯದ ವಾತಾವರಣ ಮನೆಮಾಡಿದೆ

ಗೊಬ್ಬರವನ್ನುಲಾರಿಯಲ್ಲಿ ತುಂಬಿಕೊಂಡುಬರುತ್ತಿರುವಾಗ ಎದುರಿಗೆಹಾಲಿನಟ್ಯಾಂಕರ್ ಲಾರಿ ಎರಡು ಮುಖಾಮುಖಿ ಅಪಘಾತ ಸಂಭವಿಸುವ ರಸ್ತೆಗಳು ಮದ್ಯಬೈಕ್ ಸವಾರ ಬರುತ್ತಿರುವ ಸಂದರ್ಭದಲ್ಲಿ ಅಪಘಾತದಲಾರಿಬೈಕ್ ಸವಾರ ನ ಮೇಲೆ ಹರಿದುಹೋಗಿದ್ದು. ಹಾಗೂ ಲಾರಿ ಚಾಲಕ ಶೇಕ್ ಅಬ್ದುಲ್ ರಹೀಮ .ಸಾ. ಸಿಯತಲಾಬ್ ಎಂಬವರು ಸ್ಥಳದಲ್ಲಿ ಸಾವನ್ನಪ್ಪಿದ್ದು. ಎರಡುಲಾರಿಗಳು ಸಂಪೂರ್ಣ ನುಚ್ಚುನೀರಯಾಗಿದ್ದುನೋಡಿ ಸ್ಥಳೀಯ ಸಾರ್ವಜನಿಕರು ಭಯಾನಕಘಟನೆ ರಸ್ತೆಯಲ್ಲಿ ನಡೆದಿದ್ದುಅಘಾತಕಾರಿ ವಿಷಯ ಕಂಡು ಬಿಚ್ಚಿ ಬಿದ್ದಿದ್ದಾರೆ .

ಗೊಬ್ಬರ ಲಾರಿ ಡ್ರೈವರ್ ಗೆ ಗಂಭೀರ ಗಾಯಗಳಾಗಿದ್ದು. ಅಸ್ಪತ್ರೆಗೆಸಾಗಿಸುವಸಂದರ್ಭದಲ್ಲಿ ದಾರಿಯಲ್ಲಿ ಮೃತಪಟ್ಟಿದ್ದಾನೆ. ಹಾಲಿನ ಟ್ಯಾಂಕರ್ ಲಾರಿ ಡ್ರೈವರ್ ಬೈಕ್ ಸವಾರರು ಸ್ಥಿತಿ ಗಂಭೀರವಾಗಿದ್ದು. ಇವರನ್ನು ನಗರದ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಈ ಸಂದರ್ಭದಲ್ಲಿ ತಾಲೂಕು ವೈದ್ಯರು ತುರ್ತು ವೈದ್ಯಕೀಯ ಚಿಕಿತ್ಸೆ ನೀಡಲಾರಂಭಿಸಿದರು. ನಂತರ ಪೊಲೀಸ್ ಇಲಾಖೆ ಸಿಬ್ಬಂದಿ ವರ್ಗ ರಸ್ತೆಯಲ್ಲಿ ಜಮಾಯಿಸಿದ ನೂರಾರು ಸಾರ್ವಜನಿಕರನ್ನು ಚದುರಿಸಿ ರಸ್ತೆಯಲ್ಲಿ ನಿಂತು ವಾಹನಗಳಿಗೆ ಹೋಗುವುದಕ್ಕೆ ಅನುಕೂಲ ಮಾಡಿಕೊಟ್ಟರು.

# ಬಾಲಾಜಿಯರವರಿಗೆ ಸಚಿವರಿಂದ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆರಾಯಚೂರು

ನಗರದ ಪಂಡಿತ್ ಸಿದ್ದರಾಮ ಜಂಬಲದಿನಿ ರಂಗಮಂದಿರದಲ್ಲಿ ನಡೆದ ಮಾತೊ ಶ್ರೀ ಮಹಾಂತಮ್ಮ ಶಿವಬಸಪ್ಪ ಗೋನಾಳ್ ಪ್ರತಿಷ್ಠಾನ ಹಾಗೂ ಪ್ರತಿಭಾ ಸುಗಮ ಸಂಗೀತ ಸಂಸ್ಥೆ 16ನೇ ವಾರ್ಷಿಕೋತ್ಸವದ ಅಂಗವಾಗಿನಡೆದಈಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕನ್ನಡ ಜಾನಪದ ಪರಿಷತ್ತಿನಕ್ರಿಯಾಶೀಲರಾಜ್ಯಅಧ್ಯಕ್ಷರಾದ ಡಾ. ಜಾನಪದ ಬಾಲಾಜಿಯವರನ್ನು ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವರಾದ ಎನ್ ಎಸ್ ಬೋಸರಾಜ್ ಅವರು ಸನ್ಮಾನಿಸಿ ಗೌರವಿಸಿದರು .

ಈ ಸಂದರ್ಭದಲ್ಲಿ ನಿವೃತ್ತ್ ಐಎಎಸ್ ಅಧಿಕಾರಿ ಶರಣ ಸಾಹಿತ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷರಾದ ಸೋಮಶೇಖರ. ಚಂದ್ರಶೇಖರ್ ಪಾಟೀಲ್, ಮಿರ್ಜಾಪುರ್ ಕೆ ಶಾಂತಪ್ಪ ಪಂಡಿತ್ ನರಸಿಂಹಲು ವಡವಾಟಿ. ಅಪ್ಪಿಗೇರಿ ತಿಮ್ಮರಾಜು. ಜಯಂತ್ ರಾವ್ ಪತಂಗೆ ನಾಗರಾಜ್ ಮಸ್ಕಿ ಚುಕ್ಕಿ ಸುಗಪ್ಪ ಸೌಕಾರ್ ಸಂಸ್ಥೆಯ ಅಧ್ಯಕ್ಷರಾದಡಾ.ಶರಣಪ್ಪಗೋನಾಳ್. ಡಾಕ್ಟರ್

ದಂಡಪ್ಪ ಬಿರಾದಾರ. ಪ್ರತಿಭಾ ಗೋನಾಳ್ ಪಾಗುಂಟಪ್ಪ ಮಿರ್ಜಾಪುರ್ ಅಮರೇಶ್ ನಿರೂಪಕ ಮುರಳಿ ಕುಲಕರ್ಣಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಧೈರ್ಯದಿಂದ, ಪ್ರಾಮಾಣಿಕವಾಗಿ ಪರೀಕ್ಷೆ ಬರೆಯಿರಿ: ಬಸವರಾಜ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ



ಇಂದುಬುದುವಾರರಂದುಆರಂಭವಾಗಲಿರುವ ಎಸ್‌ಎಸ್‌ಎಲ್‌ಸಿ (ಖಖಐಅ) ಪರೀಕ್ಷೆಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು ಯಾವುದೇ ಭಯ ಹಾಗೂ ಆತಂಕ–ಕ್ಕೆ ಒಳಗಾಗದೆ ಧೈರ್ಯದಿಂದ ಮತ್ತು ಪ್ರಾಮಾಣಿಕವಾಗಿ ಪರೀಕ್ಷೆ ಬರೆಯಬೇಕು ಎಂದು ಹುಣಸಗಿ ಪಟ್ಟಣ ಪತ್ತಿನ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಬಸವರಾಜ ಮೇಲಿನ ಹೇಳಿದರು.

ವಿದ್ಯಾರ್ಥಿಗಳಿಗೆ ಶುಭಾಶಯ ತಿಳಿಸಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಹಂತವಾಗಿದ್ದು, ಪರಿಶ್ರಮ ಮತ್ತು ಆತ್ಮವಿಶ್ವಾಸದಿಂದ ಉತ್ತಮ ಫಲಿತಾಂಶ ಪಡೆಯಬಹುದು ಎಂದು ಹೇಳಿದರು. ವಿದ್ಯಾರ್ಥಿಗಳು ಸಮಯವನ್ನು ಸಮರ್ಪಕವಾಗಿ ಬಳಸಿಕೊಂಡು ಪುನರಾವರ್ತನೆ ಮಾಡಿಕೊಂಡು ಏಕಾಗ್ರತೆಯಿಂದ ಓದಿದರೆ ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪರೀಕ್ಷೆ ವೇಳೆ ಯಾವುದೇ ಒತ್ತಡಕ್ಕೆ ಒಳಗಾಗದೆ ಶಾಂತ ಮನಸ್ಸಿನಿಂದ ಪ್ರಶ್ನೆಗಳಿಗೆ ಉತ್ತರಿಸಬೇಕು. ಪ್ರಾಮಾಣಿಕವಾಗಿ ಪರೀಕ್ಷೆ ಬರೆಯುವುದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಉತ್ತಮ ದಾರಿ ತೋರಿಸುತ್ತದೆ ಎಂದು ಹೇಳಿದರು.

ಹುಣಸಗಿ ತಾಲ್ಲೂಕಿನ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ತಮ್ಮ ಪೋಷಕರು, ಶಿಕ್ಷಕರು ಹಾಗೂ ಶಾಲೆಗೆ ಮಾತ್ರವಲ್ಲದೆ ತಾಲ್ಲೂಕು ಮತ್ತು ಜಿಲ್ಲೆಗೆ ಕೀರ್ತಿ ತರಬೇಕು ಎಂದು ಅವರು ಶುಭ ಹಾರೈಸಿದರು.

# ಶಿವನಗೌಡ ನಾಯಕ ವಿರುದ್ಧ ಶೂನ್ಯ ದೂರು ಹಿಂಪಡಿಯುವಂತೆ ದಲಿತ ಸಂಘಟನೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಸಿರವಾರ

ತಾಲೂಕಿನ ಮಾಜಿ ಸಚಿವ ಕೆ ಶಿವನಗೌಡ ನಾಯಕ ವಿರುದ್ಧ ಶೂನ್ಯ ಎ□□□ಆರ್ ಹಿಂಪಡಿಯುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಿರವಾರ ತಾಲೂಕ ಒಕ್ಕೂಟದಿಂದ ಸರ್ಕಾರಕ್ಕೆ ಆಗ್ರಹಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ಕರೆದು ಪಟ್ಟಣ ಪಂಚಾಯತ್ ಸದಸ್ಯರಾದ ಕೃಷ್ಣನಾಯಕ್, ಅಜಿತ್ ಕುಮಾರ್ ಹೊನ್ನಟ್ಟಿಗಿ ಅವರು ಜಂಟಿಯಾಗಿ ಸುದ್ದಿಗೋಷ್ಠಿ ಮಾಡಿದರು.

ಚಿತ್ರದುರ್ಗದಲ್ಲಿ ನಡೆದ ಬೃಹತ್ ಜನಾಂದೋಲನ ಐತಿಹಾಸಿಕ ಹೋರಾಟದ ಸಿದ್ಧತೆಗಾಗಿ ಪೂರ್ವಭಾವಿ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯಲ್ಲಿ ನಡೆದ ಅನ್ಯಾಯವನ್ನು ಖಂಡಿಸಿ ಮಾಜಿ ಸಚಿವರಾದ ಕೆ ಶಿವನಗೌಡ ನಾಯಕ ಕರ್ನಾಟಕದಲ್ಲಿ ಎಸ್ ಸಿ, ಎಸ್ ಟಿ , ಸಮುದಾಯಗಳಿಗೆ ಬಹುದೊಡ್ಡ ಅನ್ಯಾಯವಾಗುತ್ತಿದೆ ಇದನ್ನು ಸಚಿವ ಸಂಪುಟದಲ್ಲಿ ಸಚಿವರಿಗೆ ತಪ್ಪುನಿರ್ಧಾರಗಳನ್ನು ತೆಗೆದುಕೊಂಡು ದಲಿತರಿಗೆ ಅನ್ಯಾಯ ಮಾಡಿದ್ದಾರೆ. ಈ ರೀತಿ ಅನ್ಯಾಯಕ್ಕೆ ಒಳಗಾದ ಸಮುದಾಯಗಳಿಗೆ ನ್ಯಾಯ ನೀಡುವ ಸರ್ಕಾರವೇ ದಲಿತರಿಗೆ ಅನ್ಯಾಯ ಮಾಡುತ್ತಿದೆ. ಸಮಾಜ ಕಲ್ಯಾಣ ಸಚಿವರಾದ ಎಸ್ ಸಿ ಮಹದೇವಪ್ಪನವರು ಪರಿಶಿಷ್ಟ



ಜಾತಿ ಪರಿಶಿಷ್ಟ ಪಂಗಡ ಸಮುದಾಯಗಳಿಗೆ ನ್ಯಾಯ ಕೊಡಿಸಲು ಹೇಗೆ ಸಾಧ್ಯ. ದಲಿತರಿಗೆ ಅನ್ಯಾಯ ಮಾಡುತ್ತಿರುವುದು ನೋಡಿದರೆ ಇವರನ್ನು ದಲಿತ ಸಚಿವರು ಎಂದು ನಾವು ಹೇಗೆ ಕರೆಯಬೇಕು. ಮತ್ತು ಒಳ ಮೀಸಲಾತಿ ಸಂಪೂರ್ಣಗೊಳಿಸದೆ 56,432 ಉದ್ಯೋಗ ಸೃಜನಿ ಮಾಡುವಲ್ಲಿ ದಲಿತ ಅಸ್ಪೃಶ್ಯ ಸಮುದಾಯಗಳು ವಂಚಿತರಾಗುತ್ತಾರೆ. ಎಸ್ ಸಿ, ಎಸ್ ಟಿ, ಸಿಗಬೇಕಾದಂತ ಮೀಸಲಾತಿ ಉದ್ಯೋಗಗಳನ್ನು ತಪ್ಪಿಸುವ ಉನ್ನರು ಸರಕಾರದ ಸಚಿವರ ನಡೆ ಖಂಡಿಸಿ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ .ಎಂದು ಮಾಜಿ ಸಚಿವರಾದ ಕೆ .ಶಿವನಗೌಡ ನಾಯಕ ಅನ್ಯಾಯವನ್ನ ಸಹಿಸುವುದಿಲ್ಲ ಸಮಾಜ ಕಲ್ಯಾಣ ಸಚಿವರಾದ ಎಸ್. ಟಿ .ಮಹದೇವಪ್ಪನವರಿಗೆ ಕಪಾಳಕ್ಕೆ ಹೊಡೆಯಬೇಕು ಎಂದು ಅನಿಸುತ್ತದೆ. ಗ್ರಾಮೀಣ ಭಾಷೆಯ ಮೂಲಕ ಮಾತನಾಡಿರುವುದು. ಮತ್ತು ಹಾಡು ಭಾಷೆಯಲ್ಲಿ ಮಾತನಾಡಿರುವುದು ಕಂಡುಬಂದಿದ್ದು. ಹಾಗಾಗಿ ಸಚಿವರು ಯಾವುದೇ ನೇರವಾಗಿ ಎಲ್ಲಿಯೂ ಹೇಳಿಕೆ ಹೇಳಿರುವುದಿಲ್ಲ ಹಾಗಾಗಿ ರಾಯಚೂರು ಜಿಲ್ಲೆಯ ಪ್ರಭಾವಿ ನಾಯಕರಾದ ಹಾಗೂ ರಾಜಕಾರಣಿಯು ಆಗಿದ್ದು. ಇವರ ರಾಜಕೀಯ ಏಳಿಗೆಯನ್ನ ಸಹಿಸಲಿ ಕೆಲವು ಪಟ್ಟಭದ್ರ ಹಿತಾಸಕ್ತಿ ವ್ಯಕ್ತಿಗಳು ಆರೋಪ ಮಾಡುವುದು ಸರಿಯಲ್ಲ ದಲಿತ ಸಮುದಾಯಗಳಲ್ಲಿ ಬಹು ದೊಡ್ಡ ನಾಯಕರು ಸಾಮಾಜಿಕ ಚಿಂತಕರು. ಅಂಬೇಡ್ಕರ್ ಸಿದ್ಧಾಂತ ಮೈಗೂಡಿಸಿಕೊಂಡು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಅಳವಡಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವರಾದ ಎಸ್ ಸಿ ಮಾದೇವಪ್ಪನವರು ಅಸ್ಪೃಶ್ಯ ಮತ್ತು ದಲಿತ ಸಮುದಾಯಗಳ ಜವಾಬ್ದಾರಿಯನ್ನು ಮರೆತು ಎಸ್ ಸಿ ಪಿ,ಟಿ ಎಸ್ ಪಿ, ಅನುದಾನವನ್ನು ಸರಕಾರ ಗ್ಯಾರಂಟಿ ಯೋಜನೆಗೆ 25,000 ಕೋಟಿಯಷ್ಟು ಅನುದಾನ ದುರ್ಬಳಕೆ ಮಾಡಲಾಗಿದೆ. ಸಮುದಾಯದ ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಎಂದು ದಲಿತ ಸಂಘರ್ಷ ಸಮಿತಿ ಸಿರವಾರ ತಾಲೂಕ ದಲಿತ ಸಂಘರ್ಷ ಸಮಿತಿ ತಾಲೂಕು ಒಕ್ಕೂಟದಿಂದ ಕೆ ಶಿವನಗೌಡ ನಾಯಕ್ ಅವರ ಮೇಲೆ ದಾಖಲಾಗಿರುವ ಶೂನ್ಯ ದೂರನ್ನು ಹಿಂಪಡಿಯಬೇಕು ಇಲ್ಲವಾದಲ್ಲಿ ಎಸ್ಸಿ ಎಸ್ಟಿ ಸಮುದಾಯಗಳ ಸಮುದಾಯದಿಂದ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಸದಸ್ಯರಾದ ಮಲ್ಲಪ್ಪ ದೊಡ್ಮನಿ, ಅಮರೇಶ್ ಗಡ್ಲ, ಭರತ್ ನಾಯಕ, ಬಸವರಾಜ ನಕ್ಕುಂದಿ ,ಗೋಪಾಲ್ ನಾಯಕ, ನಾಗರಾಜ್, ವಿನಯ್ ಕುಮಾರ, ಮುತ್ತಣ್ಣ ಚಾಗಬಾವಿ, ಅಮರೇಶ ಅತನೂರ, ನಾಗೇಶ್ ನಾಯಕ, ಮಾರೆಪ್ಪ, ವೆಂಕೋಬ, ಬಸವರಾಜ ಜಂಬಲದಿನ್ನಿ ,ಡೇವಿಡ್ , ಜೈಯರಾಜ ಜಕ್ಕಲದಿನಿ ,ಸೇರಿದಂತೆ ದಲಿತ ಸಂಘರ್ಷ ಸಮಿತಿ ತಾಲೂಕು ಒಕ್ಕೂಟದ ಸದಸ್ಯರು ಇದ್ದರು.

# ಮಹಿಳೆ ಕಾಣೆ ಪತ್ತೆಗಾಗಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ ತಾಲ್ಲೂಕಿನ ಮನ್ನಳ್ಳಿ ಗ್ರಾಮದ ನಿವಾಸಿಯಾದ ಸಬಾ ಅಂಜುಮ ಗಂಡ ಮೋಯಿಜೊದ್ದಿನ್ ದರ್ವೇಶ (25) ಇವರು ದಿನಾಂಕ: 01–03–2026 ರಂದು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಾಗರಾಳ (ಗಂಡನ ಮನೆ) ಗ್ರಾಮಕ್ಕೆ ಹೋಗುತ್ತೇನೆಂದು ಮನೆಯಿಂದ ಹೋಗಿ ಕಾಣೆಯಾಗಿರುತ್ತಾಳೆ.

ಕಾಣೆಯಾದ ಮಹಿಳೆಯು 5 ಅಡಿ 3 ಇಂಚ್ ಎತ್ತರ ಇದ್ದು, ಗೋಧಿ ಮೈಬಣ್ಣ ಇದ್ದು, ದುಂಡು ಮುಖ, ಸಣ್ಣ ದಪ್ಪ ಮೂಗು, ಸಾಧಾರಣಾ ಮೈಕಟ್ಟು ಇದ್ದು, ಮನೆಯಿಂದ ಹೊರಡುವಾಗ ಮೈಮೇಲೆ ಒಂದು ಕಪ್ಪು ಬಣ್ಣದಲ್ಲಿ ಬಿಳಿ ಬಣ್ಣದ ಹೂ ಉಳ್ಳ ಟಾಪ್, ಒಂದು ಕಪ್ಪು ಬಣ್ಣದಲ್ಲಿ ಬಿಳಿ ಬಣ್ಣದ ಹೂ ಉಳ್ಳ ಲೇಗಿನ್ಸ್, ಒಂದು ಕಪ್ಪು ಬಣ್ಣದ ಓಣಿ, ಒಂದು ಕಪ್ಪು ಬಣ್ಣದ ಬುರ್ಕಾ ಧರಿಸಿರುವ ಇವಳು ಹಿಂದಿ ಮತ್ತು ಕನ್ನಡ ಭಾಷೆಯಲ್ಲಿ ಮತನಾಡುತ್ತಾಳೆ.

ಈ ಕಾಣೆಯಾದ ಮಹಿಳೆಯ ಬಗ್ಗೆ ಯಾರಿಗಾದರೂ ಮಾಹಿತಿ ಸಿಕ್ಕರೆ ಮನ್ನಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಮೊಬೈಲ್ ಸಂಖ್ಯೆ: 8277975088 ಗೆ ಸಂಪರ್ಕಿಸಬೇಕೆಂದು ಮನ್ನಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ಕೋರಿದ್ದಾರೆ

# ನಮ್ಮ ಕ್ಲಿನಿಕ್ ಕಸಬಾ ಲಿಂಗಸುಗೂರ ಹೆಚ್‌ಪಿವಿ ಲಸಿಕೆ ಅಭಿಯಾನ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು

ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳ ಮಾರ್ಗಸೂಚಿಯಂತೆ ಗರ್ಭ ಕಂಠ ಕ್ಯಾನ್ಸರ್ ತಡೆಗೆ ಹ್ಯೂಮೆನ್ ಪ್ಯಾಪಿಲೋಮಾ ವೈರಸ್ ಒಂದು ಡೋಸ್ ಲಸಿಕೆಯನ್ನು 14 ವರ್ಷ ಮುಗಿದ 15 ವರ್ಷದೊಳಗಿನ ಎಲ್ಲಬಾಲಕಿಯರಿಗೆ ನೀಡಲಾಗುವುದು.ಆದ್ದರಿಂದ ಶಾಲಾ ಶಿಕ್ಷಕರು ಮತ್ತು ಪಾಲಕರು ಅರ್ಹ ಬಾಲಕಿಯರಿಗೆ ಲಸಿಕೆ ಹಾಕಿಸಲು ಕೋರಲಾಯಿತು. ಸರಕಾರಿ ಪ್ರೌಢ ಶಾಲೆಯಲ್ಲಿ ಲಸಿಕೆ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು. ಎಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಲಸಿಕೆ ನೀಡಲಾಗುವುದು ಎಂದು ಮಾಹಿತಿ ತಿಳಿಸಲಾಯಿತು.

ಈಸಂದರ್ಭದಲ್ಲಿ ಲಸಿಕೆ ಅಭಿಯಾನ ದಲ್ಲಿ ನಮ್ಮ ಕ್ಲಿನಿಕ್ ವೈದ್ಯಾಧಿಕಾರಿ ಡಾ: ಬಸನಗೌಡ.ಆರೋಗ್ಯ ಇಲಾಖೆಯ ಪ್ರಾಣೇಶ್. ನಾಗರತ್ನ. ಅಪ್ಸರಾ.ಸೀತಾ. ರವಿಕುಮಾರ.ಸಿಧ್ಧರೂಢ.ಆಶಾಕಾರ್ಯಕರ್ತರು.ಪಾಲಕರು.ಶಿಕ್ಷಕರು ಭಾಗವಹಿಸಿದ್ದರು

# ಗರ್ಭಕಂಠದ ಕ್ಯಾನ್ಸರ್ ತಡೆಗೆ ಲಸಿಕೆ ಅವಶ್ಯ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು

ಗರ್ಭಕಂಠದಕ್ಯಾನ್ಸರ್ ತಡೆಯಲು 9ರಿಂದ 14 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಎಚ್ ಪಿವಿ ಲಸಿಕೆ ನೀಡಲಾಗುತ್ತಿದೆ," ಎಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರಮೇಶ್ ಹೇಳಿದರು.

ತಾಲೂಕಿನ ದೇವರಭೂಪೂರ ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಚ್ ಪಿವಿ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. "ಆರೋಗ್ಯ ಇಲಾಖೆಯ # ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಮೇಶ ಹೇಳಿಕೆ ಮೂಲಕ ಉಚಿತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. ಪಾಲಕರು ತಮ್ಮ 14 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಲಸಿಕೆ ಹಾಕಿಸಬೇಕು," ಎಂದರು.

ಈಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಶಮರಾಯ ಆಶಾ ಕಾರ್ಯಕರ್ತೆಯರು ಹನುಮಂತಿ ಅಮರಗುಂಡಮ್ಮ ವಿಜಯಲಕ್ಷ್ಮಿ ಶಾಲೆಯ ವಿದ್ಯಾರ್ಥಿಗಳು

ಆಯುಷ್ಮಾನ ಆರೋಗ್ಯ ಮಂದಿರ್ ದೇವರ ಭೂಪೂರು ಪ್ರಾಥಮಿಕ ಆರೋಗ್ಯ ಕೇಂದ್ರ ಗುರುಗುಂಟ ಇತರರು ಇದ್ದರು.

# ಗ್ರಾಮ ಆಡಳಿತ ಅಧಿಕಾರಿಗಳ 3ನೇ ಹಂತದ ಆಯ್ಕೆ ಪಟ್ಟಿ ಪ್ರಕಟ

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆ ಸಂಬಂಧಿಸಿದಂತೆ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು 3ನೇ ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಜಿಲ್ಲಾ ವೆಬ್‌ಸೈಟ್‌ನಲ್ಲಿ ಅಧಿಕೃತ ಜ್ಞಾಪನಾ ಪ್ರಕಟಿಸಲಾಗಿದೆ ಎಂದು ಗ್ರಾಮ ಆಡಳಿತ ಅಧಿಕಾರಿಗಳ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ ಮತ್ತು ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಳಿಜೋಳ ಖರೀದಿ ಪ್ರಕ್ರಿಯೆ ಆರಂಭ: ನಿತೀಶ್

ರಾಯಚೂರು: ಜಿಲ್ಲೆಯಲ್ಲಿ 2025–26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಮತ್ತು ಹಿಂಗಾರು ಋತುವಿನಲ್ಲಿ ಬಿಳಿಜೋಳವನ್ನು ಬೆಳೆದಿರುವ ರೈತರು ಈಗಾಗಲೇ ತಮ್ಮ ಎಫ್‌ಐಡಿ ಯೊಂದಿಗೆ ನೋಂದಣಿ ಮಾಡಿಕೊಂಡಿದ್ದು, ಮಾರ್ಚ್ 17 ರಿಂದ ಜಿಲ್ಲೆಯಲ್ಲಿರುವ ಎಲ್ಲಾ ಖರೀದಿ ಕೇಂದ್ರಗಳಲ್ಲಿ ವಿದ್ಯುಕ್ತವಾಗಿ ಖರೀದಿ ಪ್ರಕ್ರಿಯೆಯನ್ನು ಆರಂಭಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಲಾದ ಅನುಕ್ರಮವಾರು ಮೊದಲು ಮುಂಗಾರು ಋತುವಿನಲ್ಲಿ ಬೆಳೆದ ರೈತರಿಂದ ಖರೀದಿಯನ್ನು ಮಾಡಲಾಗುವುದು. ರೈತರು ಆತುರ ಪಡದೇ ಅಥವಾ ನೂಕು ನುಗ್ಗಲು ಮಾಡದೇ ತಮಗೆ ಖರೀದಿ ಕೇಂದ್ರದಿಂದ ನೀಡಲಾಗುವ ದಿನಾಂಕವಾರು ತಾವು ಬೆಳೆದಿರುವ ಜೋಳವನ್ನು ಸರಬರಾಜು ನೀಡುವುದು.

## ರಾಜ ರತ್ನ ಪುನೀತ್ ರಾಜಕುಮಾರ್ ಜನ್ಮದಿನ

# ನೀರಿನ ಆರವಟ್ಟಿಗೆ ಉದ್ಘಾಟನೆ: ಪಠ್ಯ ಪುಸ್ತಕ ವಿತರಣೆ

ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು

ಪಟ್ಟಣದ ಬಸವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಕರ್ನಾಟಕ ರತ್ನ ನಟ ಡಾ ಪುನೀತ್ ರಾಜಕುಮಾರ್ ರವರ 51ನೇ ವರ್ಷದ ಜನ್ಮ ದಿನಾಚರಣೆ ಕಾರ್ಯಕ್ರಮ ಅಪ್ಪು ಅಭಿಮಾನಿ ರಾಂಪುರದ ಪ್ರಕಾಶ್ ಮತ್ತು ಬಳಗದ ವತಿಯಿಂದ 25 ಕೆಜಿ ತೂಕದ ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಲಾಗಿದೆ.



ಪುನೀತ್ ರಾಜಕುಮಾರ್ ಅವರ ಜೀವನಸಾರ್ಥಕತೆಯನ್ನು ಮೆರೆಸುವಂತಹ ಅಪ್ಪಟ ಅಭಿಮಾನಿ ಆರ್ ಪ್ರಕಾಶ್ ಮತ್ತು ಅವರ ಬಳಗದವರು ಯಾವುದೆ ಸ್ವಾರ್ಥ ವಿಲ್ಲದೆ ಕಾರ್ಯಕ್ರಮಗಳು ಮಾಡುತ್ತ ಬಂದಿದ್ದಾರೆ ಪ್ರಕಾಶ್ ರವರ ಸೇವೆ ನಿಜಕ್ಕೂ ಶ್ಲಾಘನೆ ಎಂದು ಎಂಎಂಜೆ ಹರ್ಷವರ್ಧನ್ ರವರು ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಂಬೇಡ್ಕರ್ ಸಂಘದ ಅಧ್ಯಕ್ಷರಾದ ಬಿ.ದುರುಗೇಶ್ ನವರು ಸಮಾಜದಲ್ಲಿ ಉತ್ತಮ ಸೇವೆ ಮಾಡಲು ಉದಾರ ಮನಸ್ಸು ಹೊಂದಿರಬೇಕು ಅಂತಹ ಮನಸ್ಸು ನಟ ಪುನೀತ್ ರಾಜಕುಮಾರ್ ರವರು ಪಡೆದುಕೊಂಡಿದ್ದರು ಇವರ ಸೇವೆ ಕರ್ನಾಟಕಕ್ಕೆ ಅತ್ಯಂತ ಮಹತ್ವವಾದದ್ದು ಅಪ್ಪು ನವರ ಅನುಕರಣೆಯನ್ನು ಪ್ರಾಮಾಣಿಕವಾಗಿ ಆರ್. ಪ್ರಕಾಶ್ ನವರು ಮಾಡುತ್ತಿರುವುದು ಸಂತೋಷದ ವಿಷಯ ಎಂದರು

ಪ್ರತಿ ವರ್ಷವೂ ಅಪ್ಪು ಅವರ ನೆನಪಿನಲ್ಲಿ ಪ್ರಕಾಶ್ ನವರು ನಿಸ್ಕಲ ಮನಸ್ಸಿನಿಂದ ಸೇವೆ ಸಲ್ಲಿಸುತ್ತಿರುವುದು ನಿಜಕ್ಕೂ ಹೆಮ್ಮೆ ವಿಚಾರ ಇಂತಹ ಸಮಾಜ ಮುಖಿ ಕೆಲಸಗಳು ಇನ್ನಷ್ಟು ಮುಂದುವರೆಯಲಿ ಎಂದು ಮುಖಂಡ ಮರಿಸ್ವಾಮಿ ನವರು ಹೇಳಿದರು.ಬದ್ದಿ ಮರಿಸ್ವಾಮಿ, ಇತರರು ಮಾತನಾಡಿದರು.

ಸಿದ್ದೇಶ್ ಅಗ್ನಿ,ಅಂಗಡಿ ನಾಗೇಶ್ ರಾಜೇಶ್ವರಿ,ಪರಿಮಳ ಇತರರು ಸ್ನೇಹ ಲೋಕ ಮೇಲೊಡಿಸ್ ಹಾಗೂ ಸ್ಥಳೀಯ ಕಲ್ಪತರು ಕಲಾ ಟ್ರಸ್ಟ್ ವತಿಯಿಂದ ಪುನೀತ್ ರಾಜಕುಮಾರ್ ಅವರಿಗೆ ಗೀತ ನಮನಗಳನ್ನು ಸಲ್ಲಿಸಿದರು.

ಈಸಂದರ್ಭದಲ್ಲಿ ಮುಖಂಡರಾದ, ಸುಧಾಕರ್ ಗೌಡ ಪಾಟೀಲ್, ಡಾ.ರಾಕೇಶ್, ಶಿವಯ್ಯ, ನಾಗರಾಜ್ ಗೌಡ,ಟಿ.ಹನುಮಂತಪ್ಪ, ಶಿಕ್ಷಕ. ರಮೇಶ್,ಆರ್. ಶ್ರೀನಿವಾಸ್, ಅಂಬರೀಷ್,

ಅಪ್ಪುಅಭಿಮಾನಿಬಳಗದವರಾದ.ಬಿ. ರಾಜ, ಕೊಟ್ರೇಶ್, ಅಪ್ಪಣ್ಣ, ವಿರೇಶ್, ಮುಂತಾದವರು ಉಪಸ್ಥಿತರಿದ್ದರು.

• **ಕುಡಿಯುವ ನೀರಿನ ಅರವಟ್ಟಿಗೆಗೆ ಚಾಲನೆ**

ರಾಂಪುರದ ಪ್ರಕಾಶ್ ನವರು ಸುಮಾರು 3 ವರ್ಷದಿಂದ ಬೇಸಿಗೆ ಸಮಯದಲ್ಲಿ 3 ತಿಂಗಳುಗಳ ಕಾಲ ನಟ ಪುನೀತ್ ರಾಜಕುಮಾರ್ ರವರ ಕುಡಿಯುವ ನೀರಿನ ಅರವಟ್ಟಿಗೆಯನ್ನು ಮಾಡಲಾಗಿದೆ ಈ ಅರವಟ್ಟಿಗೆಯು ಸಂಪೂರ್ಣ ಅಪ್ಪು ರವರ ಭಾವಚಿತ್ರ ಅಳವಡಿಸಿ ನಿರ್ಮಿಸಲಾಗಿ ಅವರ ಹೆಸರಿನಲ್ಲಿ ಸಾಕಷ್ಟು ಉತ್ತಮ ಕಾರ್ಯಗಳು ನಡೆಸುತ್ತ ಬಂದಿದ್ದಾರೆ.

• **ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ**

ಸರ್ಕಾರಿ ಶಾಲಾ ಮಕ್ಕಳಿಗೆ ಪುನೀತ್ ರಾಜಕುಮಾರ್ ಅವರ ಜನ್ಮದಿನದ ಪ್ರಯುಕ್ತ ಪ್ರತಿವರ್ಷವೂ ಉಚಿತ ಪಠ್ಯ ಪುಸ್ತಕಗಳನ್ನು ನೀಡುವುದರರ ಮುಖಂತರ ಅಪ್ಪು ರವರ ಜನ್ಮ ಸಾರ್ಥಕತೆಯನ್ನು ಮೆರೆಸುವಂತಹ ಕಾರ್ಯಕ್ರಮಗಳನ್ನು ಮಾಡಲಾಗಿದೆ

# ಅನಾವಶ್ಯಕವಾಗಿ ವಸ್ತುಗಳ ಖರೀದಿ ಬೇಡ : ಸಾಜಿದ್ ಮುಲ್ಲಾ

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ದಿನನಿತ್ಯದ ಜೀವನದಲ್ಲಿ ಪ್ರತಿಯೊಬ್ಬರೂ ಗ್ರಾಹಕರೇ ಆಗಿದ್ದಾರೆ. ಆಧುನಿಕ ಕಾಲದಲ್ಲಿ ವ್ಯವಹಾರ ಬಹಳ ವಿಸ್ತಾರಗೊಂಡಿದ್ದು, ಮನೆಯಲ್ಲೇ ಕುಳಿತುಕೊಂಡು ವಿಶ್ವ ಮಾರುಕಟ್ಟೆಯಲ್ಲಿ ವ್ಯವಹಾರ ಮಾಡಲಾಗುತ್ತಿದೆ. ಇತರರಿಗೆ ಪ್ರದರ್ಶಿಸಲು ಅನಾವಶ್ಯಕವಾಗಿ ವಸ್ತುಗಳನ್ನು ಖರೀದಿಸದೆ, ಅಗತ್ಯ ಹಾಗೂ ಆರ್ಥಿಕ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ವಸ್ತುಗಳನ್ನು ಖರೀದಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ಹೇಳಿದರು.ಅವರು ಸೋಮವಾರ ಕಾರವಾರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ , ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಕಾರವಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ವಾರ್ತಾ



ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆಹಾರ ಸುರಕ್ಷತೆ ಇಲಾಖೆ, ಕರ್ನಾಟಕ ಆಹಾರ ನಿಗಮ ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು (ಆಂತರಿಕ ಗುಣಮಟ್ಟ ಭರವಸೆ ಕೋಶ) ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಪೀಳಿಗೆ ಆನ್‌ಲೈನ್‌ನಲ್ಲಿ ವಸ್ತುಗಳನ್ನು ಖರೀದಿಸುವಾಗ ಹೆಚ್ಚಾಗಿ ಮೋಸ ಮತ್ತು ವಂಚನೆಗೆ ಒಳಗಾಗುವ ಸಾಧ್ಯತೆ ಇದೆ. ಆದ್ದರಿಂದ ವಸ್ತುಗಳನ್ನು ಖರೀದಿಸುವ ಮೊದಲು ಅದರ ಮೌಲ್ಯ, ಗುಣಮಟ್ಟ, ಬೆಲೆ ಮತ್ತು ಸೇವೆಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು. ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅಗತ್ಯ ವಸ್ತುಗಳನ್ನು ಮಾತ್ರ ಖರೀದಿಸಿ. ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಅನಾವಶ್ಯಕವಾಗಿ ರೀಲ್ಸ್ ವೀಕ್ಷಣೆ ಮಾಡುವುದನ್ನು ಕಡಿಮೆ ಮಾಡಿ ಜ್ಞಾನವರ್ಧಕ ವಿಡಿಯೋಗಳನ್ನು ವೀಕ್ಷಿಸುವ ಮೂಲಕ ಹಾಗೂ ಪುಸ್ತಕಗಳನ್ನು ಓದುವ ಮೂಲಕ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದರಿಂದ ಉತ್ತಮ ಗ್ರಾಹಕರಾಗಲು ಸಾಧ್ಯ ಎಂದು ಹೇಳಿದರು.ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ರಾಜಪ್ಪ ಗೌಳಿ ಮಾತನಾಡಿ, ಬ್ಯಾಂಕ್ ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿ, ಸರ್ಕಾರ ವಿವಿಧ ಯೋಜನೆಗಳನ್ನು ಬ್ಯಾಂಕ್‌ಗಳ ಮೂಲಕ ತಮಗೆ ಒದಗಿಸಲಾಗುತ್ತಿದೆ. ಬ್ಯಾಂಕ್‌ನಿಂದ ಕರೆ ಮಾಡುತ್ತಿರುವುದು ಎಂದು ವಂಚಕರು ಹೇಳಿ, ಡಿಜಿಟಲ್ ಅರೆಸ್ಟ್, ಒಟಿಪಿ, ಕೆವೈಸಿ, ಯುಪಿಐ, ವಹಿವಾಟು ಸಂಬಂಧಿಸಿದ ಕರೆಗಳು ಬಂದಲ್ಲಿ ಕೂಡಲೇ ಜಾಗೃತರಾಗಬೇಕು. ಸಾಮಾಜಿಕ ಜಾಲತಾಣದಲ್ಲಿ ವೈಯಕ್ತಿಕ ಮಾಹಿತಿಗಳನ್ನು ಹಚ್ಚಿಕೊಳ್ಳಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಎಪಿಕೆ ಲಿಂಕ್‌ಗಳ ತೆರೆಯಬಾರದು. ಪಬ್ಲಿಕ್ ವೈಫೈ, ಚಾರ್ಜರ್ ಬಳಸಬಾರದು. ಬ್ಯಾಂಕ್ ಖಾತೆ ಪ್ರತಿಯೊಬ್ಬರ ಭವಿಷ್ಯದ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಲೋನ್ ಪಡೆಯಲು ಪಿಎಂ ವಿದ್ಯಾಲಕ್ಷ್ಮೀ ಪೋರ್ಟಲ್ ಮೂಲಕ ಬ್ಯಾಂಕ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದರು.ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಹೇಮಲತಾ ಕೆ ಮಾತನಾಡಿ, ಈ ವರ್ಷ "ಸುರಕ್ಷಿತ ಉತ್ಪನ್ನಗಳು–ಆತ್ಮವಿಶ್ವಾಸದ ಗ್ರಾಹಕರು" ಎಂಬ ಘೋಷವಾಕ್ಯದೊಂದಿಗೆ ವಿಶ್ವ ಗ್ರಾಹಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ಸುರಕ್ಷಿತವಾದ ಮತ್ತು ನಂಬಿಕೆಯುಕ್ತ ವಸ್ತುಗಳನ್ನು ಖರೀದಿಸುವ ಸ್ವಾತಂತ್ರ್ಯ ನೀಡುವುದೇ ಇದರ ಮುಖ್ಯ ಉದ್ದೇಶವಾಗಿದೆ.

# ತುರ್ತು ಪರಿಸ್ಥಿತಿಯಲ್ಲಿ ಸ್ವಯಂ ಸೇವಕರ ಪಾತ್ರ ಮಹತ್ವದ್ದು : ಸುಮನ್ ಪನ್ನೇಕರ್



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತುರ್ತು ಪರಿಸ್ಥಿತಿಯ ಸಂದರ್ಭ ಹಾಗೂ ವಿಪತ್ತುಗಳು ಸಂಭವಿಸಿದ ಸಮಯದಲ್ಲಿ ರೆಡ್ ಕ್ರಾಸ್ ಮತ್ತು ರೇಂಜರ್ಸ್,ರೋವರ್ಸ್ ಗಳ ಪಾತ್ರ ತುಂಬಾ ಅಮೂಲ್ಯವಾದುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ.ಸುಮನ್ ಡಿ. ಪನ್ನೇಕರ್ ನುಡಿದರು.

ಅವರು ಇಂದು ನಗರದ ಸರಳಾದೇವಿ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾ ಭಾರತೀಯ ರೆಡ್ ಕ್ರಾಸ್

ಸಂಸ್ಥೆಯು ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿ ಮತ್ತು ಸ್ವಯಂಸೇವಕರಿಗಾಗಿ ಆಯೋಜಿಸಿದ್ದ ' ಪ್ರಥಮ ಚಿಕಿತ್ಸೆ ಮತ್ತು ಪ್ರಕೃತಿ ವಿಕೋಪ ನಿರ್ವಹಣೆ ' ವಿಶೇಷ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಥಮ ಚಿಕಿತ್ಸೆಯು ರೋಗಿಗೆ ತಕ್ಷಣದ ವೈದ್ಯಕೀಯ ನೆರವು ನೀಡಿದರೆ ವಿಕೋಪ ನಿರ್ವಹಣೆಯು ಪಾರುಗಾಣಿಕಾ ಮತ್ತು ಚೇತರಿಕೆ-ಯ ಮೂಲಕ ಪ್ರಾಣಹಾನಿ ಕಡಿಮೆ ಮಾಡುತ್ತದೆ ಎಂದರು.

ರೆಡ್ ಕ್ರಾಸ್ ಸಂಸ್ಥೆಯ ಖಜಾಂಚಿ ಪೋಲಾ ರಾಧಾಕೃಷ್ಣ ಮಾತನಾಡಿ. ಮಡಿಕೇರಿಯಲ್ಲಿ ಈ ಹಿಂದೆ ಗುಡ್ಡ ಕುಸಿತ ಉಂಟಾಗಿ ನೂರಾರು ಜನ ತೊಂದರೆಗೆ ಈಡಾದ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ನಿರ್ವಹಿಸಿದ ಕಾರ್ಯವನ್ನು ನೆನಪಿಸಿಕೊಂಡು ಶ್ಲಾಘಿಸಿದರು.

ರೆಡ್ ಕ್ರಾಸ್ ಸಂಸ್ಥೆಯ. ಉಪಾಧ್ಯಕ್ಷ ಡಾ.ಎಸ್.ಜೆ.ವಿ.ಮಹಿಪಾಲ್, ಕಾರ್ಯದರ್ಶಿ ಎಂ. ಎ ಶಕೀಬ್ ಇದ್ದರು.

ಅಧ್ಯಕ್ಷತ ವಹಿಸಿ ಮಾತನಾಡಿದ ಪ್ರಾಂಶುಪಾಲರಾದ ಡಾ.ಪ್ರಹ್ಲಾದ್ ಚೌದ್ರಿ ಪ್ರಕೃತಿ ವಿಕೋಪಗಳು ಅಥವಾ ಆಕಸ್ಮಿಕ ಅವಘಡಗಳು ಸಂಭವಿಸಿದಾಗ ಗಾಬರಿಯಾಗದೆ ದಿಟ್ಟತನ ಮತ್ತು ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸುವುದು ಮುಖ್ಯ ಎಂದರು. ವೇದಿಕೆಯ ಮೇಲೆ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿ ಡಾ. ಪಲ್ಲವಿ ಇದ್ದರು. ಈ ವೇಳೆ ರೋವರ್ ಲೀಡರ್ ಡಾ.ಗುರುಬಸಪ್ಪ, ರೇಂಜರ್ ಲೀಡರ್ ಡಾ.ಸಲಿಹಾ ಹಾಗೂ ಸ್ವಯಂಸೇವಕರು ಭಾಗವಹಿಸಿದ್ದರು.

# ಸ್ವಾಮಿ ಹುಟ್ಟುಹಬ್ಬ: ಕಟೌಟ್ ಅಳವಡಿಕೆಗೆ ಎಫ್ಐಆರ್ ರಾಜಕೀಯ ಷಡ್ಯಂತ್ರ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




ಸಮಾಜಸೇವಕ ಜಿ.ಕೆ. ಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಸೆಪ್ಟೆಂಬರ್ 1ರಂದು ನಗರದ ವಿವಿಧ ಭಾಗಗಳಲ್ಲಿ ಕಟೌಟ್ ಅಳವಡಿಸಿದ ಹಿನ್ನೆಲೆಯಲ್ಲಿ ಪಾಲಿಕೆ ಅಧಿಕಾರಿಗಳು ಏಕಾಏಕಿ ಎಫ್ಐಆರ್ ದಾಖಲಿಸಿರುವ ಘಟನೆ ಹೊಸ ವಿವಾದಕ್ಕೆ ಕಾರಣವಾಗಿದೆ. ಈ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿರುವ ಜಿ.ಕೆ. ಫೌಂಡೇಶನ್ ಸದಸ್ಯರು, ಯಾವುದೇ ಪೂರ್ವ ಸೂಚನೆ ನೀಡದೆ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಟ್ಟೆ ಸ್ವಾಮಿ ಅವರು, "ನಮ್ಮ ಸಂಸ್ಥೆ ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು, ಶಿಕ್ಷಣ, ಆರೋಗ್ಯ ಹಾಗೂ ಬಡವರ ನೆರವಿಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಇಂತಹ ಸಂದರ್ಭದಲ್ಲಿ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳು ಸ್ವ-ಯಂಪ್ರೇರಿತವಾಗಿ ಕಟೌಟ್‌ಗಳನ್ನು ಅಳವಡಿಸಿದ್ದಾರೆ.

ಆದರೆ ಪಾಲಿಕೆ ಅಧಿಕಾರಿಗಳು ಯಾವುದೇ ಮುನ್ನೋಟ ಅಥವಾ ನೋಟಿಸ್ ನೀಡದೆ ನೇರವಾಗಿ ಎಫ್ಐಆರ್ ದಾಖಲಿಸಿರುವುದು ಆಶ್ಚರ್ಯಕರ" ಎಂದು ಹೇಳಿದ್ದಾರೆ.

ಅವರು ಮುಂದುವರಿದು, "ಈ ಕ್ರಮ ಸಂಪೂರ್ಣವಾಗಿ ರಾಜಕೀಯ ಪ್ರೇರಿತವಾಗಿದೆ. ನಮ್ಮ ಸಂಸ್ಥೆಯ ಬೆಳವಣಿಗೆಯನ್ನು ಸಹಿಸದ ಕೆಲವರು ಒತ್ತಡ ಹಾಕಿ ಈ ಕ್ರಮ ಕೈಗೊಳ್ಳಲಾಗಿದೆ ಎಂಬ ಅನುಮಾನ ಇದೆ. ನಾವು ಕಾನೂನು ಪಾಲಿಸುವ ನಾಗರಿಕರು. ನಿಯಮ ಉಲ್ಲಂಘನೆ ನಡೆದಿದೆ ಎಂದು ತಿಳಿಸಿದ್ದರೆ, ನಾವು ತಕ್ಷಣವೇ ಕಟೌಟ್ ತೆರವುಗೊಳಿಸುತ್ತಿದ್ದೆವು" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿ.ಕೆ. ಫೌಂಡೇಶನ್ ವತಿಯಿಂದ ಹಲವು ವರ್ಷಗಳಿಂದ ಸಾಮಾಜಿಕ ಸೇವಾ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದು, ಅನಾಥಾಶ್ರಮಗಳಿಗೆ ನೆರವು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಆರೋಗ್ಯ ಶಿಬಿರಗಳ ಆಯೋಜನೆ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ಫೌಂಡೇಶನ್‌ನ ಇತರ ಸದಸ್ಯರು ಸಹ ಪಾಲಿಕೆ ಅಧಿಕಾರಿಗಳ ಕ್ರಮವನ್ನು ಖಂಡಿಸಿ, "ಎಫ್ಐಆರ್ ಅನ್ನು ತಕ್ಷಣ ಹಿಂಪಡೆಯಬೇಕು. ಇಲ್ಲವಾದಲ್ಲಿ ಕಾನೂನು ಹೋರಾಟ ನಡೆಸುವುದರೊಂದಿಗೆ ಹಂತಹಂತವಾಗಿ ಪ್ರತಿಭಟನೆ ನಡೆಸಲಾಗುವುದು" ಎಂದು ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಫೌಂಡೇಶನ್‌ನ ಹಲವು ಪ್ರಮುಖ ಸದಸ್ಯರು ಹಾಗೂ ಅಭಿಮಾನಿಗಳು ಹಾಜರಿದ್ದು, ಘಟನೆಯ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

# ಸುವರ್ಣ ಹೆಸರಿಗೆ ಮಾತ್ರ ನಗರದಲ್ಲಿ ಕಸ, ವ್ಯರ್ಥ ಪದಾರ್ಥಗಳದ್ದೇ ಸಾಮ್ರಾಜ್ಯ



ಬಳ್ಳಾರಿ, : ಇತ್ತೀಚಿನ ದಿನಗಳಲ್ಲಿ "ಸುವರ್ಣ ಬಳ್ಳಾರಿ" ಎಂಬ ಹೆಸರು ಬಹಳ ಪ್ರಸಿದ್ಧಿಯಾಗಿದೆ. "ಸುವರ್ಣ" ಎಂದರೆ ಬಂಗಾರದಂತೆ ಹೊಳೆಯುವ ಬಳ್ಳಾರಿ ಎಂಬ ಅರ್ಥ. ಆದರೆ ವಾಸ್ತವದಲ್ಲಿ ಬಳ್ಳಾರಿ ನಗರದಲ್ಲಿ ಎಲ್ಲೆಡೆ ಕಸ ಮತ್ತು ವಿವಿಧ ರೀತಿಯ ವ್ಯರ್ಥ ಪದಾರ್ಥಗಳು ತುಂಬಿಕೊಂಡಿವೆ. ರಾಜ್ ಕಾಲುವೆಗಳು ಕಸದಿಂದ ತುಂಬಿ ದುರ್ವಾಸನೆ ಉಂಟಾಗುತ್ತಿದೆ ಎಂದು ಸಾಮಾಜಿಕ ಹೋರಾಟಗಾರ ಮೇಲಕ ಈಶ್ವರರೆಡ್ಡಿ ಆರೋಪಿಸಿದ್ದಾರೆ.

ಮುಖ್ಯವಾಗಿ ಬೇಸಿಗೆ ಕಾಲದಲ್ಲಿ ಇದರಿಂದ ರೋಗಗಳು ಹರಡುವ ಸಾಧ್ಯತೆ ಇದೆ. ಆದ್ದರಿಂದ ಕನಿಷ್ಠ ವರ್ಷಕ್ಕೆ ಒಮ್ಮೆ ಆದರೂ ಕಾಲುವೆಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವಂತೆ ಕ್ರಮ ಕೈಗೊಳ್ಳಬೇಕು.ಎಂದು ಸಂಬಂಧಿಸಿದ ಅಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ವಿಶೇಷವಾಗಿ ಶ್ರೀರಾಮಪುರ ಕಾಲೋನಿ, ಕೋಲ್ ಬಜಾರ್, ಬಳ್ಳಾರಪ್ಪ ಕಾಲೋನಿ ಮುಂತಾದ ಪ್ರದೇಶಗಳಲ್ಲಿ ಮನೆಗಳ ಮುಂದೆ ಇರುವ ಉಪ ಕಾಲುವೆಗಳು ದುರ್ವಾಸನೆ ಬೀರುತ್ತಿವೆ. ಆದ್ದರಿಂದ ದಯವಿಟ್ಟು

ಈ ಕಾಲುವೆಗಳನ್ನು ಕನಿಷ್ಠ ವಾರಕ್ಕೊಮ್ಮೆ ಸ್ವಚ್ಛಗೊಳಿಸುವಂತೆ ಕ್ರಮ ಕೈಗೊಳ್ಳುವಂತೆ ವಿನಂತಿಸುತ್ತೇವೆ.

ಇನ್ನೂ ಪ್ರಮುಖವಾಗಿ, ಎಲ್ಲೆಡೆ ಫುಟ್ಪಾತ್ ಮೇಲಿನ ವ್ಯಾಪಾರಸ್ಥರು ಹಾಗೂ ಕೆಲ ನಿವಾಸಿಗಳು ಎಷ್ಟೇ ಹೇಳಿದರೂ ಕೂಡ ಕಸ (ಹಸಿಕಸ) ವನ್ನು ರಸ್ತೆ ಮೇಲೆ ಬಿಸಾಡುವ ಅಭ್ಯಾಸ ಮಾಡಿಕೊಂಡಿದ್ದಾರೆ. ಇದಕ್ಕೆ ಮಹಾನಗರ ಪಾಲಿಕೆಯ ನಿರ್ಲಕ್ಷ್ಯವೂ ಕಾರಣವಾಗಿದೆ.

ಆದ್ದರಿಂದ ಸಿಸಿ ಕ್ಯಾಮೆರಾಗಳ ಮೂಲಕ ಕಸ ಬಿಸಾಡುವವರನ್ನು ಗುರುತಿಸಿ, ಯಾರೇ ಆಗಿದ್ದರೂ ಅವರಿಗೆ 5,000 ದಂಡ ವಿಧಿಸಿ, ಪತ್ರಿಕಾ ಹಾಗೂ ಮಾಧ್ಯಮಗಳ ಮೂಲಕ ಪ್ರಕಟಿಸಿದರೆ ಇತರರು ಕೂಡ ಕಸ ಬಿಸಾಡಲು ಭಯಪಡುತ್ತಾರೆ.

ಹೀಗಾಗಿ ದಯವಿಟ್ಟು ಬೇಸಿಗೆ ಕಾಲದಲ್ಲಿ ರಾಜ್ ಕಾಲುವೆಗಳನ್ನು ಸ್ವಚ್ಛಗೊಳಿಸಿ, ರಸ್ತೆ ಮೇಲಿನ ಕಸವನ್ನು ತೆರವುಗೊಳಿಸಿ, ಧೂಳು ಮತ್ತು ದುರ್ವಾಸನೆ ಇಲ್ಲದ ಸ್ವಚ್ಛವಾದ ಬಳ್ಳಾರಿಯನ್ನು ನಿರ್ಮಿಸುವಂತೆ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ "ಸುವರ್ಣ ಬಳ್ಳಾರಿ" ಎಂಬ ಹೆಸರಿಗೆ ನಿಜವಾದ ಅರ್ಥ ಬರುತ್ತದೆ.

ಇನ್ನೂ ಅರಣ್ಯ ಇಲಾಖೆಯವರು ಹಾಗೂ ಎಂಎ ಅನುದಾನದಿಂದ ನೆಡಲಾಗಿರುವ ಗಿಡಗಳು ನೀರು ಸಿಗದೆ ಒಣಗಿಹೋಗುತ್ತಿರುವುದು ಕಂಡುಬರುತ್ತಿದೆ. ಉದಾಹರಣೆಗೆ ಎಸ್.ಎಚ್ 132 ರಸ್ತೆಯಲ್ಲಿರುವ ಗಿಡಗಳು ಮತ್ತು ಮರಗಳು ಇದಕ್ಕೆ ಸಾಕ್ಷಿಯಾಗಿದೆ.

ಈ ಗಿಡಗಳನ್ನು ಸಂರಕ್ಷಿಸುವುದು ಮಳೆಗಾಲದಲ್ಲಿ ಅಲ್ಲ, ಮುಖ್ಯವಾಗಿ ಬೇಸಿಗೆ ಕಾಲದಲ್ಲಿ ಅಗತ್ಯವಾಗಿದೆ. ಆದ್ದರಿಂದ ಕನಿಷ್ಠ ವಾರಕ್ಕೊಮ್ಮೆ ರಸ್ತೆಯಲ್ಲಿರುವ ಗಿಡಗಳಿಗೆ ನೀರು ಹಾಕುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸುತ್ತೇವೆ. ಇಲ್ಲವಾದರೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ನೆಡಲಾಗಿರುವ ಗಿಡಗಳು ಒಣಗಿ ಹೋಗುತ್ತವೆ ಮತ್ತು ಪ್ರತಿ ವರ್ಷ ಸಾರ್ವಜನಿಕ ಹಣವನ್ನು ಮತ್ತೆ ಖರ್ಚು ಮಾಡಬೇಕಾಗುತ್ತದೆ ಎಂದು ಮೇಕಲ ಈಶ್ವರರೆಡ್ಡಿ ಅಭಿಪ್ರಾಯಪಟ್ಟಿದ್ದಾರೆ.

# ಮಹಿಳಾ ಸಬಲೀಕರಣಕ್ಕೆ ರಮಾಬಾಯಿ ಆದರ್ಶ : ಘನಮಲ್ಲಿ

ಬಳ್ಳಾರಿ,: ತಾಲೂಕಿನ ಹೊಸ ಎರಗುಡಿ ಗ್ರಾಮದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ತಾಯಿ ರಮಾಬಾಯಿ ಅಂಬೇಡ್ಕರ್ ಹಾಗೂ ಸಾವಿತ್ರಿ ಬಾಯಿ ಫುಲೆ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.



ಈ ಸಂದರ್ಭದಲ್ಲಿ ಮಾತನಾಡಿದ ಆರ್. ಘನಮಲ್ಲಿ ಅವರು, ಧಮನಿತರ , ಶೋಷಿತರ, ದೀನದಲಿತರ, ಏಳಿಗೆಗೆ ತಮ್ಮ ಜೀವನವನ್ನೇ ಮೂಡುಪಾಗಿಟ್ಟ ಮಹಾನ್ ಚೇತನರಾದ ತಾಯಿ ರಮಾಬಾಯಿ ಅಂಬೇಡ್ಕರ್ ಹಾಗೂ ಸಾವಿತ್ರಿ ಬಾಯಿ ಫುಲೆ ಅವರು ಸಮಾಜದಲ್ಲಿ ಸಮಾನತೆ, ಶಿಕ್ಷಣ ಮತ್ತು ಮಹಿಳೆಯರ ಹಕ್ಕುಗಳಿಗಾಗಿ ಮಾಡಿದ ಸೇವೆ ಅಪಾರವಾಗಿದೆ ಎಂದು ಹೇಳಿದರು.ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಮಹಿಳೆಯರಿಗೆ ಗೌರವ ಹಾಗೂ ಸಮಾನ ಅವಕಾಶಗಳನ್ನು ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಗ್ರಾಮದ ಅಂಗನವಾಡಿ ಶಿಕ್ಷಕಿಯರಾದ ಪುಷ್ಪಲತಾ ಮತ್ತು ಮಹಾದೇವಮ್ಮ ಸೇರಿದಂತೆ ಹಿರಿಯರನ್ನು ಸನ್ಮಾನಿಸಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಶಿಕ್ಷಕರಾದ ಜಿ. ವೀರೇಶ್ ಅವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕರಾದ ನಾಗಮೂರ್ತಿ, ಜಿ. ವೀರೇಶ್, ಕೆ. ಮಲ್ಲಿಕಾರ್ಜುನ, ಜೆ. ವೀರೇಶ್, ರಂಗಣ್ಣ ಹಾಗೂ ಬ್ಯಾಂಕ್ ನೌಕರರಾದ ಡಿ. ಮಲ್ಲಿಕಾರ್ಜುನ, ಓಂಕಾರ್, ಅಶೋಕ ಬಿ., ವೀರೇಶ್.ಪಿ , ಮಲ್ಲಿಕಾರ್ಜುನ , ಎ. ವೀರೇಶ್ ಹಾಗೂ ಊರಿನ ಮುಖಂಡರಾದ ಶಿವಶಂಕರ್, ಹೆಚ್. ಈರೇಶ, ಹೆಚ್.ಎಂ. ವೀರೇಶ್, ಆರ್. ಜಾನೇಶ್, ಆರ್. ಶ್ರೀನಿವಾಸ್ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕಿ ಸಂಧ್ಯಾ ವಹಿಸಿದ್ದರು.

# ದೆಹಲಿಯಲ್ಲಿ ಯುವಕ ತರುಣ್ ಹತ್ಯೆ ಖಂಡನೆ: ಬಳ್ಳಾರಿಯಲ್ಲಿ ಬೃಹತ್ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಯುವಕ ತರುಣ್ ಮೇಲೆ ನಡೆದಿರುವ ಬರ್ಬರ ಹತ್ಯೆಯನ್ನು ಖಂಡಿಸಿ, ಬಳ್ಳಾರಿ ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಯಿತು. ನಗರದ ಮೋತಿ ಸರ್ಕಲ್‌ನಿಂದ ರಾಯಲ್ ಸರ್ಕಲ್‌ವರೆಗೆ ಸಾವಿರಾರು ಜನರು ಭಾಗವಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರು "ಹತ್ಯೆಗಾರರಿಗೆ ಕಠಿಣ ಶಿಕ್ಷೆ ವಿಧಿಸಬೇಕು", "ನಿರಪರಾಧಿಗಳಿಗೆ ನ್ಯಾಯ ಸಿಗಲಿ" ಎಂಬ ಘೋಷಣೆಗಳನ್ನು ಕೂಗಿ, ಘಟನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಅತಿ ಸಣ್ಣ ಕಾರಣಕ್ಕಾಗಿ ಯುವಕನ ಪ್ರಾಣ ತೆಗೆಯಲಾಗಿರುವುದು ಸಮಾಜಕ್ಕೆ ದೊಡ್ಡ ಎಚ್ಚರಿಕೆಯಾಗಿದೆ ಎಂದು ಪ್ರತಿಭಟನಾಕಾರರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, "ಈ ರೀತಿಯ ದುಷ್ಕೃತ್ಯಗಳು ಮರುಕಳಿಸದಂತೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಆರೋಪಿಗಳನ್ನು ತಕ್ಷಣ ಬಂಧಿಸಿ ಕಾನೂನು ಪ್ರಕಾರ ಗಂಭೀರ ಶಿಕ್ಷೆಗೆ ಒಳಪಡಿಸಬೇಕು. ಸಂತ್ರಸ್ತ ಕುಟುಂಬಕ್ಕೆ ಸಂಪೂರ್ಣ ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ" ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಬಳ್ಳಾರಿ ನಗರ ಮಾಜಿ ಶಾಸಕರಾದ ಗಾಲಿ ಸೋಮಶೇಖರ ರೆಡ್ಡಿ, ಬಿಜೆಪಿ ಬಳ್ಳಾರಿ ಜಿಲ್ಲಾ ಅಧ್ಯಕ್ಷರಾದ ಅನಿಲ್ ನಾಯ್ಡು ಮೋಕಾ ಸೇರಿದಂತೆ ಹಲವು ಗಣ್ಯರು ಭಾಗವಹಿಸಿ, ಹತ್ಯೆ ಘಟನೆಯನ್ನು ತೀವ್ರವಾಗಿ ಖಂಡಿಸಿದರು. ವಿವಿಧ ಸಂಘಟನೆಗಳ ಮುಖಂಡರು ಹಾಗೂ 'ಹಿಂದೂ ಕಟ್ಟಿಗೆ ಸಮಾಜ'ದ ಸದಸ್ಯರು ದೊಡ್ಡ ಸಂಖ್ಯೆಯಲ್ಲಿ ಹಾಜರಿದ್ದು, ಏಕತೆಯ ಸಂದೇಶವನ್ನು ಸಾರಿದರು.

ಪ್ರತಿಭಟನೆ ಶಾಂತಿಯುತವಾಗಿ ಸಾಗಿದ್ದು, ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಬಂದೋಬಸ್ತ್ ವ್ಯವಸ್ಥೆ ಮಾಡಿತ್ತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ಈ ಘಟನೆಗೆ ಸಂಬಂಧಿಸಿದಂತೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಿ, ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂಬ ಒತ್ತಾಯ ಪ್ರತಿಭಟನೆಯ ಮುಖ್ಯ ಉದ್ದೇಶವಾಗಿತ್ತು.

# ಶ್ರೀಗಂಧ ಕಳ್ಳರ ಬಂಧನಕ್ಕೆ ಎಸ್ಪಿಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಕಂಪ್ಲಿ ತಾಲೂಕಿನ ಶ್ರೀರಾಮರಂಗಾಪುರಂ ಬಳಿಯ ಜಮೀನಿನಲ್ಲಿ ಶ್ರೀಗಂಧದ ಮರಗಳನ್ನು ಕದ್ದವರನ್ನು ಬಂಧಿಸಲು ಎಸ್ಪಿ ಸುಮನ್ ಪೆನ್ನೇಕರ್ ಅವರಿಗೆ ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘವು ಮನವಿ ಸಲ್ಲಿಸಿದ್ದಾರೆ.

ಈ ಸಂಘ ಕರ್ನಾಟಕದಾದ್ಯಂತ ನೆಲೆಸಿರುವ ಶ್ರೀಗಂಧ ಬೆಳೆಗಾರರು ಮತ್ತು ವನಕೃಷಿಕರ ಶ್ರೇಯೋಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದೆ.

ಕುಡಿತಿನಿ ಠಾಣಾ ವ್ಯಾಪ್ತಿಯಲ್ಲಿ. ಶ್ರೀರಾಮರಂಗಾಪುರ ಗ್ರಾಮದ ಸುರೇಶ ಬಾಬು ಅವರ ಜಮೀನಿನಲ್ಲಿನ 5 ಶ್ರೀಗಂಧದ ಮರಗಳನ್ನು ಪೂರ್ಣವಾಗಿ ಕತ್ತರಿಸಿ ಕಳುವು ಮಾಡಿದ್ದು, 30 ಮರಗಳನ್ನು ಅರ್ಧಕ್ಕೆ, ಕತ್ತರಿಸಿ ಬಿಟ್ಟು ಹೋಗಿದ್ದಾರೆ. ಇವುಗಳ ಮೌಲ್ಯ ರೂ 165000 ಗಳಾಗಿದೆ.

ಹಂಪಿ ಪೊಲಿಸ್ ಠಾಣೆಯಲ್ಲಿ ನವೆಂಬರ್ 2023 ರಲ್ಲಿ ಪ್ರಕರಣ ದಾಖಲಾಗಿದ್ದು ಇನ್ನೂ ಇಬ್ಬರು ಕದ್ದ ಮಾಲು ಸ್ವೀಕರಿಸಿದ ಆರೋಪಿತರನ್ನು ದಸ್ತಗಿರಿ ಮಾಡುವುದು ಬಾಕಿ ಇದೆ.

ಹೊಸಪೇಟೆ ನಗರ ಠಾಣೆಯಲ್ಲಿ ಆರು ಜನ ಆರೋಪಿತರು. ( ಈ ಪ್ರಕರಣದಲ್ಲಿ ಎರೆಡು ಜನ ಶ್ರೀಗಂಧ ಕದ್ದ ಮಾಲನ್ನು ಖರೀದಿಸಿದ ಆರೋಪಿತರು ಕೇರಳ ಮೂಲದವರನ್ನು ದಸ್ತಗಿರಿ ಮಾಡಿದೆ ಹೀಗೆ ಅನೇಕ ಪ್ರಕರಣಗಳು ನಡೆದಿವೆ.

ಮರಗಳ ಬಗ್ಗೆ ಮಾಹಿತಿ ನೀಡುವ, ಮರ ಕದಿಯುವ, ಕದ್ದ ಮರಗಳನ್ನು ಸಾಗಾಟ ಮಾಡುವ, ಕದ್ದ ಮರವನ್ನು ಖರೀದಿ ಮಾಡುವ, ಅಲ್ಲದೇ ಕದ್ದ ಮರದಿಂದ ಮೌಲ್ಯವರ್ಧನೆ ಮಾಡಿ ಲಾಭ ಪಡೆಯುವ ಕಾರ್ಖಾನೆಯವರೆಗೂ ಎಲ್ಲಾ ಹಂತಗಳಲ್ಲೂ ತಂಡ ವ್ಯವಸ್ಥಿತವಾಗಿ ತೊಡಗಿಕೊಂಡಿದೆ ಶ್ರೀಗಂಧದ ಕಳ್ಳತನಗಳು ದಶಕಗಳಷ್ಟು ಹಳೆತಾದರೂ, ಯಾವುದೇ ಸರ್ಕಾರ ನಿರ್ಧಿಷ್ಟ ಮತ್ತು ನಿಕೃಷ್ಟ ಕ್ರಮ ತೆಗೆದುಕೊಳ್ಳದಿರುವುದು ಕಳ್ಳತನಗಳ ಹೆಚ್ಚಳಕ್ಕೆ ಇಂಬು ನೀಡಿದೆ.

ಈ ವೇಳೆ ಬಿಜೆಪಿ ರೈತ ಮೋರ್ಚಾದ ಜಿಲ್ಲಾ ಅಧ್ಯಕ್ಷ ಗಣಪಾಲ ಐನಾಥರೆಡ್ಡಿ, ಮಾಗರಾಜ ಕೆ.ಎಂ. ಕೊಳಗಲ್ಲು, ಲಿಂಗಾರೆಡ್ಡಿ ಯರಗುಡಿ, ಶರಣಬಸಂಪ್ಪ ಬಾದನಹಟ್ಟಿ, ಮಾಗರಾಜ, ಹನುಮನಗೌಡ, ರುದ್ರಪ್ಪ, ಪ್ರಕಾಶ್ ಬಾಬು, ಕರಿಬಸಪ್ಪ ಮೊದಲಾದವರು ಇದ್ದರು.

# ಜಿಲ್ಲೆಯ 65 ಕೇಂದ್ರಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ



ಬಳ್ಳಾರಿ, : ನಾಳೆಯಿಂದ ರಾಜ್ಯದೆಲ್ಲಡೆಯಂತೆ ಜಿಲ್ಲೆಯಲ್ಲಿ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆ ಜಿಲ್ಲೆಯ 65 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಇದಕ್ಕೆ ಸಿದ್ದತೆ ಮಾಡಿದೆ.

ಪರೀಕ್ಷೆಗಳನ್ನು ಶಿಸ್ತು ಮತ್ತು ಕಾಪಿ ಹೊಡೆಯದಂತೆ ನಡೆಸಲು 803 ಸಿಸಿ ಕೆಮೆರಾ ಅಳವಡಿಸಿದೆ. ಜಿಲ್ಲೆಯ 149 ಶಾಲೆಗಳ 23271 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೊಂದಾಯಿಸಿಕೊಂಡಿದ್ದಾರೆ. ಪೂರ್ವ ಸಿದ್ದತಾ ಪರೀಕ್ಷೆಯಲ್ಲಿ ಶೇ 62 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರು.

ಪರೀಕ್ಷೆಯಂದ್ರೇ ಭಯಬೇಡ ಎಂದು ಮಕ್ಕಳಿಗೆ ಡಿಸಿ ನಾಗೇಂದ್ರ ಪ್ರಸಾದ್ ಅವರು ಮನವಿ ಮಾಡಿದ್ದು. ಪರೀಕ್ಷೆ ಸುಧಾರಣೆ ವಿಚಾರದಲ್ಲಿ ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಮಕ್ಕಳಿಗೆ ಬರವಣಿಗೆ ಅಭ್ಯಾಸ ಮಾಡಿಸಿದ್ದೇವೆ. ಪ್ರಶ್ನೆ ಪತ್ರಿಕೆ ತೆಗೆದುಕೊಂಡು ಹೋಗುವ ವಾಹನಕ್ಕೆ ಜಿಪಿಎಸ್ ಅಳವಡಿಸಲಾಗ್ತಿದೆ ಎಂದು ಹೇಳಿದ್ದಾರೆ.ಜಿಪಂ ಸಿಇಓ ಮಹಮ್ಮದ್ ಹಾರೀಸ್ ಸುಮೇರ್ ಅವರು ಪರೀಕ್ಷೆ ಕೇಂದ್ರದ ಔಟ್ ಸೈಡ್ ಮತ್ತು ಪ್ರಿನ್ಸಿಪಾಲ್ ಚೇಂಬರ್ ನಲ್ಲಿಯೂ ಸಿಸಿ ಕ್ಯಾಮರ ಅಳವಡಿಸಲಾಗ್ತಿದೆ. ಪ್ರಿಪ್ರರೇಟರಿ ಎಕ್ಸಾಂ ಕೂಡ ಕಟ್ಟು ನಿಟ್ಟಾಗಿ ಮಾಡಿದ್ದೇವೆ ಇದರಲ್ಲಿ ಯೂ ಸಹ ವಿದ್ಯಾರ್ಥಿನಿಯರ ರಿಸಲ್ಟ್ ಹೆಚ್ಚಾಗಿದೆ. ಕೆಲವು ಶಾಲೆಗಳಲ್ಲಿ ಕಡಿಮೆ ಬಂದಿರೋ ಹಿನ್ನೆಲೆಯಲ್ಲಿ ಅವರಿಗೆ ವಿಶೇಷ ತರಗತಿಯನ್ನು ತೆಗೆದು

ಕೊಳ್ಳಲಾಗ್ತಿತ್ತು. ಹಾಸ್ಟೆಲ್ ನಲ್ಲಿ ವಾರ್ಡನ್ ಗಳು ಕ್ಲಾಸ್ ತೆಗೆದುಕೊಳ್ಳುವ ರೀತಿಯಲ್ಲಿ ವ್ಯವಸ್ಥೆ ಮಾಡಲಾಗ್ತಿತ್ರು. ಈ ವರ್ಷ ಫಲಿತಾಂಶ ಹೆಚ್ಚಾಗುವ ನಿರೀಕ್ಷೆಯಿದೆ ಎಂದಿದ್ದಾರೆ.

# ವಚನಗಳಿಂದ ಮಾತ್ರ ಸಮಾಜ ಬದಲಾವಣೆ ಸಾಧ್ಯ: ಮಲ್ಲಿಕಾರ್ಜುನಗೌಡ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ರಾಷ್ಟ್ರೀಯ ಬಸವದಳದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬಳ್ಳಾರಿ ತಾಲೂಕು ಘಟಕದ ವತಿಯಿಂದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಮೊದಲಿಗೆ ಪ್ರಾರ್ಥನಾ ಗೀತೆಯನ್ನು ಡಾ. ತಿಪ್ಪೇರುದ್ರ ಸಂಡೂರು ನೆರವೇರಿಸಿ ಕೊಟ್ಟರು. ಉಪನ್ಯಾಸಕಿ ಹಾಗೂ ಸಾಹಿತ್ಯ ಪರಿಷತ್ತಿನ ಮಹಿಳಾ ಸದಸ್ಯರಾದ ಶ್ರೀಮತಿ ಜೆ ಭಾಗ್ಯಲಕ್ಷ್ಮಿ ರವರು ಗಣ್ಯಮಾನ್ಯರನ್ನು ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು. ತಾಲೂಕು ಘಟಕದ ಅಧ್ಯಕ್ಷರಾದ ನಾಗರೆಡ್ಡಿ ಕೆ. ವಿ ರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ಕಾರ್ಯಕ್ರಮಗಳ ಜೊತೆಗೆ ಹಲವಾರು ಕನ್ನಡ ಪರ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದೆ ಜೊತೆಗೆ ರಾಜ್ಯದಲ್ಲಿಯೇ ಹೆಚ್ಚು ದತ್ತಿ ಸಂಗ್ರಹಿಸಿದ ಜಿಲ್ಲೆ ಬಳ್ಳಾರಿ. ಕಾರ್ಯಕ್ರಮಕ್ಕೆ ಆಗಮಿಸಿರುವ ಎಲ್ಲಾ ಕನ್ನಡ ಮನಸುಗಳು ಇಂತಹ ಕಾರ್ಯಕ್ರಮಗಳಿಗೆ ಹೆಚ್ಚು ಹೆಚ್ಚು ಭಾಗವಹಿಸಿ ಎಂದು ತಮ್ಮ ಪ್ರಾಸ್ತಾನಿಕ ನುಡಿಯಲ್ಲಿ ನುಡಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ನಿವೃತ್ತ ಪ್ರಾಚಾರ್ಯರಾದ ಡಾ. ಎಚ್ ಮಲ್ಲಿಕಾರ್ಜುನಗೌಡ




ರವರು ಉದ್ಘಾಟಿಸಿ ಅವರು ತಮ್ಮ ಉದ್ಘಾಟನಾ ನುಡಿಯಲ್ಲಿ ಇಂತಹ ಕಾರ್ಯಕ್ರಮಗಳಿಂದ ಮಾತ್ರ ಸಮಾಜ ಬದಲಾಗಲು ಸಾಧ್ಯ ಎಂದು ತಿಳಿಸಿದರು.

ದತ್ತಿ ಉಪನ್ಯಾಸವನ್ನು ನೀಡಿದ ವಿಜಯನಗರ ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ರಸಾಯನ ಶಾಸ್ತ್ರದ ಮುಖ್ಯಸ್ಥರಾದ ಡಾ. ಅರುಣ್ ಕುಮಾರ್ ಲಗಶೆಟ್ಟಿ ರವರು ತಮ್ಮ ಉಪನ್ಯಾಸದಲ್ಲಿ ಸ್ವಾರ್ಥವಿಲ್ಲದ ಸಮಾಜ ನಿರ್ಮಾಣವಾಗಬೇಕೆಂಬುದು ಬಸವಣ್ಣನವರ ಆಶಯವಾಗಿತ್ತು. ಮನೆಯಲ್ಲಿನ ನೀರು ಭಕ್ತಿ ಸೇರಿದಾಗ ತೀರ್ಥವಾಗುತ್ತದೆ, ಮನೆಯಲ್ಲಿರುವ ಅನ್ನ ದೇವಸ್ಥಾನದಲ್ಲಿ ಪ್ರಸಾದವಾಗುತ್ತದೆ ಇಂತಹ ಉಪನ್ಯಾಸಗಳನ್ನು ಕೇಳಿದಾಗ ಮೃಗದಂತಹ ಮನಸ್ಸು ಮಾನವೀಯ ಮೌಲ್ಯಗಳನ್ನು ತಾಳುತ್ತದೆ.

ವ್ಯಕ್ತಿಯ ದೃಷ್ಟಿ ಬದಲಾದಾಗ ಮಾತ್ರ ಸೃಷ್ಟಿ ಬದಲಾಗುತ್ತದೆ ಈ ರೀತಿಯ ಆಧ್ಯಾತ್ಮದ ಸಿಂಚನದಿಂದ ಸಮಾಜ ಸುಧಾರಣೆಯಾಗಲು ಸಾಧ್ಯ. ಮೊಬೈಲ್ ಸಂಸ್ಕೃತಿ ಹೊರಟು ಹೋಗಿ ಪುಸ್ತಕ ಸಂಸ್ಕೃತಿ ಮಕ್ಕಳಲ್ಲಿ ಮೇಳಯಿಸುವಂತೆ ತಂದೆ ತಾಯಿಗಳು ಕಾಳಜಿ ವಹಿಸಬೇಕು. ತಂದೆ ತಾಯಿಗಳನ್ನು ಅನಾಥಾಶ್ರಮಗಳಿಗೆ ವೃದ್ಧಾಶ್ರಮಗಳಿಗೆ ಕಳಿಸುವ ಸಂಸ್ಕೃತಿ ನಿಲ್ಲಬೇಕಾದರೆ ಪ್ರತಿನಿತ್ಯ ಮನೆ ಮನಗಳಲ್ಲಿ ವಚನ ಸಿಂಚನವಾಗಬೇಕು. ಇಂದಿನ ಸಮಾಜದಲ್ಲಿ ಬಡವರು ಮತ್ತು ಜನಸಾಮಾನ್ಯರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿರುತ್ತಾರೆ . ಶ್ರೀಮಂತರಲ್ಲ ಎಂದು ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.

ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷರಾದ ಡಾ. ನಿಷ್ಠಿ ರುದ್ರಪ್ಪ ರವರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಉಪನ್ಯಾಸಕರಾದ ಬಿ.ಲಿಂಗಾರೆಡ್ಡಿ ಮತ್ತು ಕೆ.ಗಾದಿಲಿಂಗಪ್ಪ ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರಾಷ್ಟ್ರೀಯ ಬಸವದಳದ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ರವಿಶಂಕರ್ ರವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಚನ ಸಾಹಿತ್ಯ ಸಮಾಜವನ್ನು ಬದಲಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ದತ್ತಿದಾನಿಗಳನ್ನು ಮತ್ತು ದತ್ತಿ ಉಪನ್ಯಾಸ ನೀಡಿದ ಅರುಣ್ ಕುಮಾರ್ ಲಗಶೆಟ್ಟಿ ರವರನ್ನು ಗೌರವಿಸಲಾಯಿತು.

# ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ನಗರ ಜೆಸ್ಕಾಂ ಉಪ ವಿಭಾಗ-1 ಮತ್ತು 2 ರ ವ್ಯಾಪ್ತಿಯ ಹೆಚ್.ಟಿ ಮತ್ತು ಇ.ಹೆಚ್.ಟಿ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ಸಭೆಯನ್ನು ಮಾ.18 ರಂದು ಬೆಳಿಗ್ಗೆ 11 ಗಂಟೆಗೆ ವಲಯ ಕಚೇರಿ ಮೊದಲ ಮಹಡಿಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಬಳ್ಳಾರಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವೃತ್ತದ ಅಧೀಕ್ಷಕ ಅಭಿಯಂತರರು (ವಿ) ಅಧ್ಯಕ್ಷತೆ ವಹಿಸುವರು.

ಸಭೆಗೆ ನಗರದ ಎಲ್ಲಾ ಹೆಚ್.ಟಿ ಮತ್ತು ಇ.ಹೆಚ್.ಟಿ ವಿದ್ಯುತ್ ಗ್ರಾಹಕರು ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-1 ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿಡಿಲು ಬಡಿದು ಬಾಲಕ ಸಾವು



• **ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ**

ತಾಲೂಕಿನ ವಂಕಲ ಕುಂಟ ಹೋಬಳಿ ಎನ್ ಜರಕುಂಟಿ ಗ್ರಾಮದಲ್ಲಿ ಮಾ.16 ರಂದು ಸಾಯಂಕಾಲ 6 –15 ಗಂಟೆಗೆ ಜಮೀನಿನಲ್ಲಿ ಸಿಡಿಲು ಬಡಿದು ಎನ್.ಜರಕುಂಟಿಯ ವಾಲ್ಮೀಕಿ ಜನಾಂಗದ 15 ವರ್ಷದ ಬಾಲಕ ಕು.ಮಂಜುನಾಥ ಮುದೇಗೌಡ ಗೌಡ್ರ ಮೃತಪಟ್ಟಿರುತ್ತಾನೆ.

ಈತನಿಗೆ ತಾಯಿ ಮತ್ತು ಅಣ್ಣ ಒಬ್ಬ ತಮ್ಮ, ತಂಗಿ ಇರುತ್ತಾರೆ.

ಕಂದಾಯ ಇಲಾಖೆ ಸಿಬ್ಬಂದಿಗಳೊಂದಿಗೆ ಕುಷ್ಟಗಿ ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು,

ಮರಣೋತ್ತರ ಪರೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಮತ್ತು ಬೇವೂರ್ ಆರಕ್ಷಕ ಉಪ ನಿರೀಕ್ಷಕರು ರವರಿಗೆ ಪ್ರಥಮ ವರ್ತಮಾನ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಯಿತು.ಈ ವೇಳೆ ಯಲಬುರ್ಗಾ ತಹಶಿಲ್ದಾರ ಪ್ರಕಾಶ ನಾಶಿ,ವಂಕಲ ಕುಂಟಾದ ವಿಜಯಕುಮಾರ ಗುಂಡೂರ ಹಾಗು ಕಂದಾಯ ಇಲಾಖೆ ಸಿಬ್ಬಂದಿಗಳು ಸೇರಿದಂತೆ ಇತರರು ಇದ್ದರು.

# ಗಬ್ಬೆದ್ದು ನಾರುತ್ತಿರುವ ಚರಂಡಿ ನೀರು



“ ಚರಂಡಿ ಸಮಸ್ಯೆ ಕುರಿತು ಉಪ್ಪಾರನಂದಿಹಾಳ ಗ್ರಾ, ಪಂ, ಪಿಡಿಓಗೆ ಮಾಹಿತಿ ನೀಡಿದರು ಯಾವುದೇ ಪ್ರಯೋಜನವಾಗಿಲ್ಲ

**ಬಸವರಾಜ ಬೋದುರು ಕಿಲ್ಲಾರಹಟ್ಟಿ ಗ್ರಾಮಸ್ಥ**

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಪಟ್ಟಣ ಸಮೀಪದ ಉಪ್ಪಾರನಂದಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕಿಲ್ಲಾರಹಟ್ಟಿ ಗ್ರಾಮದಲ್ಲಿ ಚರಂಡಿ ನೀರು ಗದ್ದದ್ದು ನಾರುತಿವೆ ಎಂದು ನಿವಾಸಿಗಳು ಆರೋಪಿಸಿದ್ದಾರೆ

ಕಿಲ್ಲಾರಹಟ್ಟಿ ಗ್ರಾಮದ ಓಣಿಗಳಲ್ಲಿ ಚರಂಡಿ ನೀರು ತುಂಬಿ ಮುಂದೆ ಹೋಗದೆ ನಿಂತಿವೆ ಹಾಗೂ ಚರಂಡಿ ನೀರು ಮಲಿನವಾಗಿ ಸೊಳ್ಳೆಗಳು ಉತ್ಪತ್ತಿಯಾಗಿ ಜನರು ಸೊಳ್ಳೆಗಳ ಕಾಟಕ್ಕೆ ಬೇಸತ್ತಿದ್ದು ಅನೇಕ ರೋಗಗಳಿಗೆ ತುರ್ತಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗ್ರಾಮಸ್ಥರು ದೂರಿದರು ಸರಕಾರ ಗ್ರಾಮಗಳ ಸ್ವಚ್ಛತೆಗೆ ಗ್ರಾಮ ಪಂಚಾಯತಿ ಮೂಲಕ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಖರ್ಚು ಮಾಡಲಾಗುತ್ತಿದೆ ಆದರೆ ಉಪ್ಪಾರನಂದಿಹಾಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಚರಂಡಿ ಸ್ವಚ್ಛತೆಗೆ ಮುಂದಾಗದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಚರಂಡಿ ಸಮಸ್ಯೆ ಕುರಿತು ಅನೇಕ ಬಾರಿ ಉಪ್ಪಾರನಂದಿಹಾಳ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿ ನೀಡಿದರು ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು

ಲಿಂಗಸುಗೂರು ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಗಮನಹರಿಸಿ ಚರಂಡಿ ಸ್ವಚ್ಛತೆ ಮಾಡಿಸಿ ಕಿಲ್ಲಾರಹಟ್ಟಿ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯ ಮಾಡಿದ್ದಾರೆ

## ಪರೀಕ್ಷೆಗೆ ವಿದ್ಯಾರ್ಥಿಗಳು ಸಜ್ಜು



• **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ**

ಇಂದು ಬುದುವಾರ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀ–ಕ್ಷೆಗೆ ಹುಣಸಗಿ ಹಾಗೂ ಸುರಪುರ ತಾಲೂಕುಗಳಲ್ಲಿ ಒಟ್ಟು 4,724 ವಿದ್ಯಾರ್ಥಿಗಳು ಹಾಜರಾಗಲಿದ್ದಾರೆ ಎಂದು ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ ಶರಣಬಸವ ಗಚ್ಚಿನಮನಿ ಮಾಹಿತಿ ನೀಡಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಈ ಎರಡೂ ತಾಲೂಕುಗಳಲ್ಲಿ ಪರೀಕ್ಷೆ ಸುಗಮವಾಗಿ ನಡೆಯಲು 18 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಪ್ರತಿಯೊಂದು ಕೇಂದ್ರಕ್ಕೂ 18 ಮುಖ್ಯ ಮೇಲ್ವಿಚಾರಕರು (ಚೀಫ್) ಹಾಗೂ 18 ಕಸ್ಟೋಡಿಯನ್‌ಗಳನ್ನು ನಿಯೋಜಿಸಲಾಗಿದೆ. ಹೆಚ್ಚುವರಿಯಾಗಿ 3 ಹೆಚ್ಚುವರಿ ಚೀಫ್‌ಗಳು ಮತ್ತು 1 ಫ್ಲೈಯಿಂಗ್ ಸ್ಕ್ವಾಡ್ (ಪರಿಶೀಲನಾ ತಂಡ) ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಇನ್ನೂ ಈ ಎರಡೂ ತಾಲೂಕುಗಳಲ್ಲಿ ಒಟ್ಟು 98 ಪ್ರೌಢಶಾಲೆಗಳು ಇದ್ದು, ಅವುಗಳಲ್ಲಿ 49 ಸರ್ಕಾರಿ ಶಾಲೆಗಳು, 7 ಅನುದಾನಿತ ಶಾಲೆಗಳು, 8 ವಸತಿಸಹಿತ ಶಾಲೆಗಳು ಮತ್ತು 34 ಖಾಸಗಿ ಶಾಲೆಗಳು ಸೇರಿವೆ ಎಂದು ತಿಳಿಸಿದರು.

ಪರೀಕ್ಷೆ ಸುಗಮವಾಗಿ ನಡೆಯಲು ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳು, ಭದ್ರತಾ ವ್ಯವಸ್ಥೆ ಹಾಗೂ ಆಡಳಿತಾತ್ಮಕ ಪೂರ್ವತಯಾರಿಗಳು ಪೂರ್ಣಗೊಂಡಿದ್ದು, ಹುಣಸಗಿ ಮತ್ತು ಸುರಪುರ ತಾಲೂಕುಗಳ ಎಲ್ಲಾ ಪರೀಕ್ಷಾ ಕೇಂದ್ರಗಳು ಸಂಪೂರ್ಣ ಸಜ್ಜಾಗಿವೆ ಎಂದು ಅವರು ಹೇಳಿದರು.ಬಾಲಕಿಯರ ಪ್ರೌಢಶಾಲೆ ಹುಣಸಗಿ SSLC ಪರೀಕ್ಷಾ ಕೇಂದ್ರದಲ್ಲಿ ಸಿಬ್ಬಂದಿಗಳು ಪೂರ್ವ ತಯಾರಿ ಮಾಡುತ್ತಿರುವದು.

# ಶ್ರೀ ರೇಣುಕಾಚಾರ್ಯರ್ಯರ ತತ್ವಗಳು ಸರ್ವಕಾಲಕ್ಕೂ ಪ್ರಸ್ತುತ



• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ**

ನಮ್ಮ ದೇಶದ ನೆಲದಲ್ಲಿ ಅನೇಕ ಜನ ಸಾಧು ಸತ್ಪುರುಷರು ಆಗಿ ಹೋಗಿ ಅಂಧಕಾರದಿಂದ ನಮ್ಮನ್ನು ಬೆಳಕಿನತ್ತ ತೋರಿಸುವಲ್ಲಿ ಅವರ ಸಾಧನೆ ಆಗಮ್ಯವಾಗಿದ್ದು ಅಂತಹವರಲ್ಲಿ ವೀರಶೈವಧರ್ಮದ ಪಂಚಪೀಠಗಳಲ್ಲಿ ಒಂದಾದ ಬಾಳೆಹೊನ್ನುರಿನ ಶ್ರೀಮದ್ ರಂಭಾಪುರಿ ಪೀಠದ ಮೊದಲ ಜಗದ್ಗುರುಗಳಾದ ರೇಣುಕಾಚಾರ್ಯರ್ರು ಒಬ್ಬರು ಎಂದು ಶಿರಕೋಳ ಶಿವಾಚಾರ್ಯ ಹಿರೇಮಠ ಷ.ಬ್ರ ಗುರುಸಿದ್ದೇಶ್ವರ ಸ್ವಾಮಿಗಳು ಮಾತನಾಡಿದರು.

ಅವರು ಪಟ್ಟಣದ ಹೊರವಲಯದಲ್ಲಿರುವ ಹನ್ನೆರಡು ಮಠದಲ್ಲಿ ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯರ್ಯರ ಜಯಂತಿ ನಿಮಿತ್ಯ ಮಾತನಾಡುತ್ತ ರೇಣುಕಾಚಾರ್ಯರ್ಯರು ಭೋಧಿಸಿದ ದಶ ಧರ್ಮದ ತತ್ವಗಳನ್ನು ಸಾರುವ ಸಿದ್ದಾಂತ ಶಿಖಾಮಣಿ ಕೃತಿಯ ಮಹತ್ವವನ್ನು ಸಾರುವ ದಿನವಾಗಿದೆ ಎಂದರು.

ವಿದಾನ ಪರಿಷತ್ ಮಾಜಿ ಸದಸ್ಯ ನಾಗರಾಜ ಛಬ್ಬಿ ಮಾತನಾಡಿ ಧರ್ಮವೆಂದರೆ ಸಮಾಜದಲ್ಲಿ ಯಾರಿಗೂ ಕೇಡನ್ನು ಬಯಸದೆ ಮಾನವ ಕಲ್ಯಾಣಕ್ಕಾಗಿ ಬದಕುವುದು , ಧರ್ಮದ ಹೆಸರಿನಲ್ಲಿ ಎಲ್ಲರೂ ಜಗತ್ ಕಲ್ಯಾಣ ಕಾರ್ಯಗಳನ್ನು ಮಾಡೋಣ ಎಂದರು.

ಹನ್ನೆರಡು ಮಠದ ಷ.ಬ್ರ ರೇವಣಸಿದ್ದ ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಿದರು.

ಧರ್ಮಸಭೆ ಜರುಗಿತು ಮಹಾ ಪ್ರಸಾದ ಸೇವೆ ಆಯೋಜಿಸಲಾಗಿತ್ತು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ಆದಿಜಗದ್ಗುರು ರೇಣುಕಾಚಾರ್ಯರ್ಯರ ನೂತನ ಮೂರ್ತಿ ಮೆರವಣಿಗೆ ಮಾಡಲಾಯಿತು ವೀರಗಾಸೆ,ಕುಂಬಮೇಳಗಳು ಭಾಗವಹಿಸಿದ್ದವು .

ಇ ಸಂಧರ್ಬದಲ್ಲಿ ಎಸ್.ವಿ ತಡಸಮಠ, ಎಂ.ಸಿ ಹಿರೇಮಠ,ಸಿ.ಬಿ ಹೊನ್ನಿಹಳ್ಳಿ,ಹರಿಶಂಕರಮಠಧ,ನಿಂಗಪ್ಪ ಸುತಗಟ್ಟಿ,ಬಸವರಾಜ ತಿಪ್ಪಣ್ಣವರ ,ಮಲ್ಲಯ್ಯಸ್ವಾಮಿ ತೋಟಗಂಟಿ,ಬಸಯ್ಯ ಹಿರೇಮಠ,ಸಿ.ಬಿ ಹೊನ್ನಿಹಳ್ಳಿ,ಬಾಳು ಖಾನಾಪೂರ,ಯಲ್ಲಾರಿ ಸಿಂಧೆ.ಐ.ಸಿ ಗೂಕೂಲ,ಗಂಗಾಧರ ಚಿಕ್ಕಮಠ,ಸಾಗರ ಸೂತಾರ,ಮಹಾಂತೇಶ ವಿರಕ್ತಿಮಠ, ಸಂಗಯ್ಯ ತೋಟಗಂಟಿ ಶಂಕರಗೌಡ ಭಾವಿಕಟ್ಟಿ,ಇದ್ದರು.

# ಯುಕೆಜಿ ಮಕ್ಕಳಿಗೆ ಪದವಿ ಪ್ರದಾನ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಜಿಲ್ಲೆಯ ಹುನಗುಂದ ತಾಲೂಕಿನ ಕೂಡಲಸಂಗಮ ಪುನರ್ವಸತಿ ಕೇಂದ್ರ್ರದಲ್ಲಿನ ಸಿದ್ಧಗಂಗಾ ಪಬ್ಲಿಕ್ ಸ್ಕೂಲಿನಲ್ಲಿ ಯುಕೆಜಿ ಮಕ್ಕಳಿಗೆ ಪದವಿ ಪ್ರದಾನ ಸಮಾರಂಭ ಜರುಗಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಇಳಕಲ್ಲಿನ ಅನ್ವೇಷಣಾ ಮಾಂಟೆಸರಿ ಸ್ಕೂಲಿನ ನಿರ್ದೇಶಕಿ ರಶ್ಮೀ ದೇಶಪಾಂಡೆ ಮಾತನಾಡಿ, ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿಯೆ ಅವರ ಕನಸುಗಳ ಈಡೇರಿಕೆಗಾಗಿ ಪೂರಕವಾದ ವಾತಾವರಣ ಕಲ್ಪಿಸಬೇಕು ಅದಕ್ಕೆ ಪೋಷಕರು ಮಕ್ಕಳ ಕನಸಿಗೆ ಆಸರೆಯಾಗಿ ನಿಲ್ಲಬೇಕು. ಮಕ್ಕಳ ಗುರಿ, ಮತ್ತು ಕನಸಿಗೆ ಮುಕ್ತವಾಗಿ ಸಹಕರಿಸಬೇಕು ಎಃದರು. ಶಾಲೆಯ ಸಿ.ಇ.ಓ ಸಿದ್ಧಲಿಂಗಸ್ವಾಮಿ ನವಲಿಹಿರೇಮಠ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಶಾಲೆಯ ಆಡಳಿತಾಧಿಕಾರಿ ಎಸ್.ಬಿ.ಕೋಟಿ, ಪ್ರಾಂಶುಪಾಲ ರಾಘವೇಂದ್ರ ಕೆ.ಬಿ ಮಾತನಾಡಿದರು. ಶ್ವೇತಾ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಸುಮಲತಾ ಅಗಸಿಮುಂದಿನ ವಾರ್ಷಿಕ ವರದಿ ಓದಿದರು. ನಂತರ ಮಕ್ಕಳಿಗೆ ಗಣ್ಯಮಾನ್ಯರಿಂದ ಪ್ರಶಸ್ತಿ ಮತ್ತು ಪದವಿ ಪ್ರದಾನ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಉಪಪ್ರಾಂಶುಪಾಲ ದರ್ಶನ ಹೆಚ್.ಎಮ್., ಶಿಕ್ಷಕಿಯರಾದ ಗೌರಿ ಮೇಲಿನಮನಿ, ನಾಗರತ್ನ ಪಟ್ಟಣಶೆಟ್ಟಿ, ಚೈತ್ರಾ ಸಿ, ಭಾಗ್ಯಶ್ರೀ ಆರ್, ಪ್ರಿಯಾಂಕಾ ಹೊಸಮನಿ, ಸವಿತಾ ಚಟ್ಟೇರ, ವೆಂಕಟೇಶ ಲೆಕ್ಕಿಹಾಳ, ವಿನಯ ಆರ.ಸಿ, ಮಹೇಶ ಜಾಲಿಹಾಳ, ಸದಾಶಿವ ಬೆಣಗಿ ಉಪಸ್ಥಿತರಿದ್ದರು. ಆದ್ಯಾ ಸ್ವಾಗತಿಸಿದರು

ವೇದಶ್ರೀ ಬಿರಾದಾರ ಮತ್ತು ಸಾಯಿಸಮರ್ಥ ಹೂಗಾರ ಕಾರ್ಯಕ್ರಮ ನಿರೂಪಿಸಿದರು. ಚತುರ್ವಿ ದರ್ಶನ ವಂದಿಸಿದರು.

# ಅಶಕ್ತರಿಗೆ ಆಸರೆಯಾದ ಧರ್ಮಸ್ಥಳ ಸಂಸ್ಥೆಯ ಜನಮಂಗಲ ಕಾರ್ಯಕ್ರಮ: ಸುಧೀರ್


• **ಮಲ್ಲಮ್ಮ ನುಡಿ ವಾರ್ತೆ ಸಿರುಗುಪ್ಪ**

ನಗರದ ಸೋನಿಯಾಗಾಂಧಿನಗರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ ಟ್ರಸ್ಟ್‌ವತಿಯಿಂದ ಜನಮಂಗಲ ಕಾರ್ಯಕ್ರಮದಡಿಯಲ್ಲಿ ಅಶಕ್ತರು/ವಿಶೇಷ ಚೇತನರಿಗೆ ಮಂಜೂರುಗೊಂಡ ವಾಟರ್ ಬೆಡ್‌ನ್ನು ಸೋನಿಯಾಗಾಂಧಿನಗರದ ಶ್ರೀ ವಿಶ್ವಗುರು ಬಸವೇಶ್ವರ ವೃದ್ಧಾಶ್ರಮದಲ್ಲಿರುವ ಪದ್ಮಾವತಿಯವರಿಗೆ ತಾಲೂಕಿನ ಕ್ಷೇತ್ರ ಯೋಜನಾಧಿಕಾರಿ ಸುಧೀರ್ ಹಂಗಳೂರು ರವರು ವಿತರಿಸಿದರು.




ನಂತರ ಮಾತನಾಡಿದ ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ರಾಜ್ಯಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಅದರಲ್ಲೂ ವಿಶೇಷವಾಗಿ ಅಶಕ್ತರು/ವಿಶೇಷ ಚೇತನರಿಗೆ ಜಲಮಂಗಲ ಕಾರ್ಯಕ್ರಮದಡಿ ವೀಲ್ ಚೇರ್, ಕಮೋಡ್ ಚೇರ್, ಯು ಸೇಫ್ ವಾಕರ್, ತ್ರೀ ಲೆಗ್ ಸ್ಟಿಕ್, ಸಿಂಗಲ್ ಲೆಗ್ ಸ್ಟಿಕ್, ವಾಟರ್ ಬೆಡ್ ಸಲಕರಣೆಗಳನ್ನು ವಿತರಿಸಲಾಗುತ್ತಿದ್ದು, ತಾಲೂಕಿನಲ್ಲಿ ಈವರೆಗೆ 38 ಲಕ್ಷ ಮೌಲ್ಯದ ಸಲಕರಣೆಗಳನ್ನು ವಿತರಿಸಲಾಗಿದ್ದು ವಿಶೇಷ ಚೇತನರು ಗೌರವಯುತ ಜೀವನ ನಡೆಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭ ಶ್ರೀ ವಿಶ್ವಗುರು ಬಸವೇಶ್ವರ ವೃದ್ಧಾಶ್ರಮದ ಅಧ್ಯಕ್ಷ ಮಲ್ಲಿಕಾರ್ಜುನ, ವಲಯ ಮೇಲ್ವಿಚಾರಕಿ ಚಂದ್ರಕಲಾ, ರೂಪಾ, ಸೇವಾ ಪ್ರತಿನಿಧಿ ಅಂಬಿಕಾ, ಕಲ್ಪನಾ ಉಪಸ್ಥಿತರಿದ್ದರು.



ಎಮ್ಮಿಗನೂರು: ಗ್ರಾಮದಲ್ಲಿ ವಿವಿಧ ಸಂಘಟನೆಗಳು ಹಾಗೂ ಪುನೀತ್ ಅಭಿಮಾನಿ ಬಳಗದ ವತಿಯಿಂದ ಚಲನಚಿತ್ರರಂಗದ ಖ್ಯಾತ ನಟ ಹಾಗೂ ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ಅವರ ಜನ್ಮದಿನವನ್ನು ಆಚರಿಸಲಾಯಿತು ಈ ವೇಳೆ ಪ್ರಮುಖರಾದ ಶಾಶ್ವತ ರೆಡ್ಡಿ ಟಿ ರಾಮು ಎಚ್ ಮಲ್ಲೇಶ್ ಬಿ ವೀರೇಶ್ ಶಿವೇಗೌಡರ ರಾಮಪ್ಪ ಮಲ್ಲಿಕಾ ಧನಂಜಯ ರೆಡ್ಡಿ ಶ್ರೀನಿವಾಸ್ ಚನ್ನಳ್ಳಿ ಮಹೇಶ ಹನುಮಂತಯ್ಯ ಟೈಲರ್ ಹುಸೇನ್ ಬಸವರಾಜ್ ಮಂಜುನಾಥ್ ಮಾಬುಲಿ ಸೇರಿದಂತೆ ಇತರ ಇದ್ದರು

# ವಿದ್ಯಾರ್ಥಿಗಳಿಗೆ ಉಚಿತ ಬಸ್ ವ್ಯವಸ್ಥೆ

**ಮಲ್ಲಮ್ಮ ನುಡಿ ವಾರ್ತೆ ಕಾರವಾರ**

ಮಾ.18 ರಿಂದ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿ ಇತರೆ ವಿದ್ಯಾಸಂಸ್ಥೆಗಳಿಗೆ ಪರೀಕ್ಷಾ ಕೇಂದ್ರಗಳ ನಿಯೋಜನೆಯಾಗಿರುವುದರಿಂದ, ವಿದ್ಯಾರ್ಥಿಗಳ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆ ನಡೆಯುವ ದಿನಾಂಕಗಳಂದು, ಅಂದರೆ ಮಾ.18 ರಿಂದ ಏಪ್ರಿಲ್ 2 ರವರೆಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಹಾಗೂ ಪರೀಕ್ಷೆ ಮುಗಿಸಿ ವಾಸ ಸ್ಥಳಕ್ಕೆ ಹಿಂದಿರುಗಲು ಸಂಸ್ಥೆಯ ನಗರ, ಉಪನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

# ಹಿರಿಯ ಪತ್ರಕರ್ತ ಗಜಾನನ ನಾಯಕ ಅವರಿಗೆ ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ

• **ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ**




ಕನ್‌ಸ್ಯೂಮರ್ ನ್ಯೂಸ್ ರಾಷ್ಟ್ರೀಯ ಕನ್ನಡ ಪತ್ರಿಕೆ ಇವರು ಅಂತರಾಷ್ಟ್ರೀಯ ಗ್ರಾಹಕರ ದಿನಾಚರಣೆ ಹಾಗೂ ಮಹಿಳಾ ದಿನಾಚರಣೆ ಅಂಗವಾಗಿ ಗಣ್ಯರಿಗೆ ಹಾಗೂ ಸಾಧಕರಿಗೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಹಾಗೂ ಸಾಮಾಜಿಕ ಕಾರ್ಯಕರ್ತ ಗಜಾನನ ನಾಯಕ ಅವರಿಗೆ ಬೆಂಗಳೂರಿನಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಿದರು.

ಧ್ಯೇಯನಿಷ್ಠ ಪತ್ರಕರ್ತ ಪತ್ರಿ–ಕೆಯ ಮೂಲಕ ಪತ್ರಿಕಾ ಕ್ಷೇತ್ರಕ್ಕೆ ವರದಿಗಾರರಾಗಿ ಕಾರ್ಯನಿರ್ವಹಿಸಿದ ಗಜಾನನ ನಾಯಕ ಅವರನ್ನು ಪತ್ರಿಕೆಯ ಜಿಲ್ಲಾ ನಿರ್ದೇಶಕರಾಗಿಯೂ ಆಯ್ಕೆಮಾಡಲಾಗಿತ್ತು. ನಂತರ ಉದಯವಾಣಿಯಲ್ಲಿ ಕರ್ತವ್ಯ ನಿರ್ವಹಿಸಿ ಹಾಲಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಹಿರಿಯ ವರದಿಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಗೋಕರ್ಣ ಶ್ರೀ ಮಹಾಬಲೇಶ್ವರ ಸೊಸೈಟಿಯಲ್ಲಿ ಎರಡು ಬಾರಿ ನಿರ್ದೇಶಕರಾಗಿ ಆಯ್ಕೆಯಾಗಿದ್ದು, ಹನೇಹಳ್ಳಿಯ ಜನತಾ ಕೋ–ಆಪರೇಟಿವ್ ಸೊಸೈಟಿಯಲ್ಲಿ ನಿರ್ದೇಶಕರಾಗಿ ಗೋಕರ್ಣ ಆಟೋರಿಕ್ಷಾ ಚಾಲಕ, ಮಾಲಕರ ಸಂಘದ ಅಧ್ಯಕ್ಷರಾಗಿ, ಸ್ವಸಹಾಯ ಸಂಘದ ಮೇಲ್ವಿಚಾರಕರಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಇನ್ನು ಅಂಕೋಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪತ್ರಿಕಾ ದಿನಾಚರಣೆಯಂದು ಗಜಾನನ ನಾಯಕ ಅವರಿಗೆ 'ಬಾರ್ಡೋಲಿ ಗೌರವ' ಪ್ರಶಸ್ತಿ ನೀಡಿ ಗೌರವಿಸಿದರು. ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡ ಇವರಿಗೆ ಬೆಂಗಳೂರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಿರುವುದಕ್ಕೆ ಹಲವರು ಶುಭಾಷಯ ಕೋರಿದ್ದಾರೆ.

# ನಂಬಿದ ಭಕ್ತರ ಕರುಣಾ ಸಾಗರ ಕಣವಿ ವೀರಭದ್ರ ದೇವರು

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಬಾಗಲಕೋಟೆ ಹಲವು ವಿಶಿಷ್ಟಗಳಿಗೆ ಖ್ಯಾತಿ ಪಡೆದಂತೆ ಧಾರ್ಮಿಕ ಚಟುವಟಿಕೆಗಳಲ್ಲೂ ತನ್ನ ಹೆಸರನ್ನು ಚಿರಸ್ಥಾಯಿಯಾಗಿಸಿದೆ. ಅನೇಕ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಸರಾಗಿದೆ. ಅಂತಹ ಅಸಂಖ್ಯಾತ ಭಕ್ತರು ಶೃದ್ಧಾ ಭಕ್ತಿಯಿಂದ ಆಚರಣೆ ಮಾಡುವ ಮಹೋತ್ಸವ ನಗರದ ಕಣವಿ ವೀರಭದ್ರೇಶ್ವರ ರಥೋತ್ಸವ. ಶಿವಪುರಾಣದಲ್ಲಿ ವೀರಭದ್ರ ದೇವರ ಕಥೆ ವಿವರವಾಗಿ ಬರುತ್ತದೆ. ದಕ್ಷ ಯಜ್ಞದಲ್ಲಿ ಶಿವನಿಗೆ ಅವಮಾನವಾದಾಗ ಪಾರ್ವತಿಯ ದೇಹ ತ್ಯಾಗದಿಂದ ಉಂಟಾದ ರೌದ್ರ ದೃಶ್ಯವನ್ನು ತಡೆಯಲಾಗದೇ ಶಿವನು ತನ್ನ ಜಟಾ ಕುಂಡಲವನ್ನು ನೆಲಕ್ಕೆ ಹೊಡೆದು, ಅದರಿಂದ ಉಂಟಾದ ಜ್ವಾಲೆಗಳಿಂದ ಉಗ್ರರೂಪಿಯಾದ ವೀರಭದ್ರನು ಜನಿಸಿದನು. ಯಜ್ಞವನ್ನು ನಾಶಮಾಡಿ ದಕ್ಷನನ್ನು ದಂಡಿಸಿದ ಘಟನೆಯ ನಂತರ ವೀರಭದ್ರನು, ಶಿವನ ಪರಾಶಕ್ತಿಯಾಗಿ ಭಕ್ತರ ರಕ್ಷಕರಾಗಿ ಪ್ರಸಿದ್ಧನಾದ. ನಾಡಿನ ತುಂಬೆಲ್ಲಾ ವೀರಭದ್ರದೇವರ ದೇವಾಲಯಗಳು ಇದ್ದು ಭಕ್ತರಿಂದ ಪೂಜೆಗೊಳ್ಳುತ್ತಿದ್ದಾರೆ. ಬಾಗಲಕೋಟೆಯ ನಗರದ ಹೃದಯ ಭಾಗದಲ್ಲಿರುವ ಕಣವಿ ಶ್ರೀ ವೀರಭದ್ರೇಶ್ವರ ರಥೋತ್ಸವ ದಿನಾಂಕ 19 ಗುರುವಾರ ಜರುಗಲಿದೆ. ಮರುದಿವಸ ಶುಕ್ರವಾರ ಅಗ್ನಿ ಉತ್ಸವ ಜರುಗುವದು. ಇದಕ್ಕೂ ಪೂರ್ವದಲ್ಲಿ ದಿನಾಂಕ 14 ರಿಂದ 18ರ ವರೆಗೆ 5 ದಿನಗಳವರೆಗೆ ದೇವಸ್ಥಾನದ ಆವರಣದಲ್ಲಿ ಶೃದ್ಧಾ ಭಕ್ತಿಯಿಂದ ಪುರವಂತ ಸಮೇತ ಪಾಲಕಿ ಉತ್ಸವ ಜರುಗುವದು. ನಗರದ ಜನತೆ ಭಕ್ತರು, ಪುರವಂತರು, ಜಾತ್ರಾ ಮಹೋತ್ಸವದಲ್ಲಿ ಸಡಗರ ಸಂಭ್ರಮದಿಂದ ಪಾಲ್ಗೊಳ್ಳುವರು.



ಸುಮಾರು ವರ್ಷಗಳ ಹಿಂದೆ ಈಗಿರುವ ದೇವಸ್ಥಾನದ ಸ್ಥಳದಲ್ಲಿ ದೊಡ್ಡದಾದ ಕಣಿವೆಯೊಂದಿತ್ತು. ನಿರ್ಜನ ವಾತಾವರಣದಲ್ಲಿನ ಕಣಿವೆಯಲ್ಲಿ ನೀರು ನಿಲ್ಲುತ್ತಿತ್ತು. ದನಗಾಹಿಗಳು ದಿನಾಲು ಈ ಪ್ರದೇಶದಲ್ಲಿ ದನ ಮೇಯಿಸಲು ಪ್ರತಿನಿತ್ಯ ಬರುತ್ತಿದ್ದರು. ಕಣವಿ ಮಠದ ನೀಲಮ್ಮ ಎಂಬುವವಳು ದನ ಮೇಯಿಸುವ ವೇಳೆ ಭೂಮಿಯಿಂದ ಮೇಲೆ ಬಂದ ವೀರಭದ್ರೇಶ್ವರ ದೇವರ ಮೂರ್ತಿ ಕಂಡು ಬಂದಿತಂತೆ. ಊರವರೆಲ್ಲಾ ಸೇರಿ ಮೂರ್ತಿ ಹೊರಕ್ಕೆ ತೆಗೆಸಿದರಂತೆ. ನಂತರ ಕಣವಿ ಪ್ರದೇಶದಲ್ಲಿ ಅದನ್ನು ಪ್ರತಿಷ್ಠಾಪಿಸಿದ್ದರಿಂದ ಅಂದಿನಿಂದ ಕಣವಿ ವೀರಭದ್ರೇಶ್ವರ ಸ್ವಾಮಿ ಎಂಬ ಹೆಸರು ಚಾಲ್ತಿಗೆ ಬಂದಿತು. ಕಣವಿ ಮಠದ ಬಸಯ್ಯನವರು ಪೂಜಾ ಕೈಂಕರ್ಯಗಳನ್ನು ಮಾಡಹತ್ತಿದರಂತೆ. ವೀರಭದ್ರೇಶ್ವರ ದೇವರ ಪರಮ ಭಕ್ತ ಉಪ್ಪಿನ (ಕೋಟಿ) ಮನೆತನದವರು ದೇವಸ್ಥಾನದ ಗರ್ಭ ಗುಡಿಯನ್ನು, ಶಾಬಾದಿ ಸೋಮಲಿಂಗಪ್ಪನವರ ತಾಯಿಯವರು ದೇವಸ್ಥಾನದ ಸುತ್ತಲಿನ ಪಾವಳಿಯನ್ನು, ಅರ–ಕೇರಿ ಮನೆತನದವರು, ಕಲಾದಗಿ ಗದಿಗೆಪ್ಪನವರು, ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳನ್ನು ಕೈಗೊಂಡರು. ನಂತರ ಭಕ್ತರ ಸಹಕಾರದೊಂದಿಗೆ ಜಾತ್ರಾ ಮಹೋತ್ಸವ ಆರಂಭಿಸಿದರಂತೆ. ಸರಕಾರಕ್ಕೆ ಸೇರಿದ್ದ ಕಣವೀ ಪ್ರದೇಶವನ್ನು ಲೀಜ ಮೇಲೆ ಪಡೆದ ಕಣವೀ ಮಠದ ಮನೆತನದವರು ಕಣವೀ ಪ್ರದೇಶದ ಜಾಗೆಯನ್ನು ಹಾಗೂ ದೇವಸ್ಥಾನವನ್ನು ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘಕ್ಕೆ ಒಪ್ಪಿಸಿದರು.

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದವರು ಕಣವೀ ವೀರಭದ್ರೇಶ್ವರ ಹೆಸರಿನಿಂದ ಟ್ರಸ್ಟ ಸ್ಥಾಪಿಸಿ ದೇವಸ್ಥಾನಕ್ಕೆ ಕಾಯಕಲ್ಪ ನೀಡಿದ್ದಾರೆ. ಮೂರು ಬೃಹತ್ತ ಮಂಗಲ ಭವನ, ಸಂಕೀರ್ಣ ನಿರ್ಮಿಸಿ ಅಭಿವೃದ್ಧಿ ಪಡಿಸಿದ್ದಾರೆ. 1990ರಲ್ಲಿ ಮುಧುರ್ಮೈ ಗೋಪುರ ಶಿಲ್ಪಗಾರರಿಂದ, ಸುಂದರ ನೂತನ ಗೋಪುರ ನಿರ್ಮಿಸಲಾಯಿತು. ಗೋಪುರದ ಮುಂಭಾಗ ಸುತ್ತಲೂ ವಿವಿಧ ಭಂಗಿಗಳಲ್ಲಿರುವ ವಿವಿಧ ದೇವತೆಗಳ ಸುಂದರವಾದ ಮೂರ್ತಿಗಳು ನೋಡುಗರ ಕಣ್ಮನವನ್ನು ಸೆಳೆಯುತ್ತಿವೆ. ಮಹಾದ್ವಾರದ ಎಡಗಡೆ ಕೂಡಾ ವಿವಿಧ ಮೂರ್ತಿಗಳನ್ನು ನಿರ್ಮಿಸಲಾಗಿದೆ.

ದೇವಸ್ಥಾನದ ವಿಶೇಷ ಪೂಜೆಗಳು:–

ಶ್ರಾವಣ ಮಾಸದಲ್ಲಿ ಶ್ರೀ ವೀರಭದ್ರಸ್ವಾಮಿಗೆ ದಿನಾಲು ರುದ್ರಾಭಿಶೇಕ ಮಾಡಿ ದೇವರಿಗೆ ವಿಶೇಷ ಅಲಂಕಾರ ಮಾಡುವರು. ಎಲಿ ಪೂಜಾ, ವಿವಿಧ ಹೂ ಗಳಿಂದ ಅಲಂಕಾರ ಹಾಗು ವಿವಿಧ ಬಗೆಯ ಹಣ್ಣುಗಳಿಂದ, ನಾಣ್ಯಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸುವರು. ನಂದಿಯ ಮೇಲೆ ಕುಳಿತ ವೀರಭದ್ರದೇವರು, ದಕ್ಷ ಬೃಹ್ಮನ ಸಂಹಾರಿ ವೀರಭದ್ರ ದೇವರು ಹೀಗೆ ವಿವಿಧ ಬಗೆಯಿಂದ ಅಲಂಕಾರ ಮಾಡಿ ಪೂಜೆ ಮಾಡುವರು. ಬೇಸಿಗೆಯಲ್ಲಿ ಮೂರ್ತಿಗೆ ಅನ್ನದ ಬುತ್ತಿಯ ಪೂಜೆ ನೆರವೇರಿಸುವರು.

ಕಣವಿ ವೀರಬದ್ರೇಶ್ವರನ ಭಕ್ರರಾದ ಶಿವಯೋಗಪ್ಪ ಹುಚ್ಚಪ್ಪ ಹತ್ತಿಯವರು ಸುಮಾರು 7ರಿಂದ 8 ಲಕ್ಷ ರೂ ಖರ್ಚಿನಲ್ಲಿ ನೂತನ ಸಣ್ಣ ರಥವನ್ನು (ಹುಚ್ಚಯ್ಯ) ದೇವಸ್ಥಾನಕ್ಕೆ ಭಕ್ತಿಯಿಂದ ಸಮರ್ಪಿಸಲಿದ್ದಾರೆ. ನಾಡಿನ ಖ್ಯಾತ ಶಿಲ್ಪಿ ಹೊಳೆಆಲೂರಿನ ಪಾಂಡುರಂಗ ಬಡಿಗೇರ ಈ ರಥವನ್ನು ಸುಂದರವಾಗಿ ತಯಾರಿಸಿದ್ದಾರೆ. ನಾಡಿನ ಬಹುತೇಕ ದೇವಸ್ಥಾನಗಳಿಗೆ, ಕಾಶಿಯ ದೇವಸ್ಥಾನಕ್ಕೆ ರಥಗಳನ್ನು ತಯಾರಿಸಿ ಕೊಟ್ಟಿದ್ದಾರೆ. ದಿನಾಂಕ 19 ರಂದು ಸಂಘದ ಕಾರ್ಯಾಧ್ಯಕ್ಷ ಡಾ. ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಜಾತ್ರಾ ಕಮಿಟಿ ಅಧ್ಯಕ್ಷ ಸಿ.ಎಸ್. ಜಿಗಜಿನ್ನಿ, ಆಡಳಿತ ಮಂಡಳಿ ಸದಸ್ಯರು ಹಾಗೂ ಅಸಂಖ್ಯಾತ ಭಕ್ತರ ಸಮ್ಮುಖದಲ್ಲಿ ನೂತನ ಸಣ್ಣ ರಥೋತ್ಸವ ಲೋಕಾರ್ಪಣೆಗೊಳ್ಳಲಿದೆ. ನಂತರ ಚಾಂದ್ರಮಾನ ಯುಗಾದಿ ಶುಭದಿನ ದಿನಾಂಕ 19 ಗುರುವಾರ ಮಹಾರಥೋತ್ಸವ ಜರುಗಲಿದೆ. ರಥವು ಕಣವಿ ವೀರಭದ್ರೇಶ್ವರ ದೇವಸ್ಥಾನದಿಂದ ಪಾದಗಟ್ಟೆಯವರೆಗೆ ಸಾಗಿ, ಮರಳಿ ದೇವಸ್ಥಾನ ತಲಪುವದು. ಅಪಾರ ಸಂಖ್ಯೆ ಭಕ್ತ ಸಮೂಹದ ಮದ್ಯ ಸಡಗರ ಸಂಭ್ರಮದಿಂದ ಕಟ್ಟಿಗೆಯಿಂದ ಮಾಡಿದ ರಥವನ್ನು ಎಳೆಯಲಾಗುತ್ತಿದೆ. ಸಾವಿರಕ್ಕೂ ಹೆಚ್ಚು ಭಕ್ತರು ಸೇರುವ ರಥೋತ್ಸವದ ವೇಳೆ ವಿವಿಧ ಅಂಗಡಿಗಳು ಮಕ್ಕಳನ್ನು ವಿಶೇಷವಾಗಿ ಆಕರ್ಷಿಸುತ್ತವೆ.

ರಥೋತ್ಸವದ ಮರುದಿನ ಶುಕ್ರವಾರ ವೀರಭದ್ರೇಶ್ವರ ಅಗ್ನಿ ಉತ್ಸವ ಜರುಗುವದು. ಸಾವಿರಾರು ಭಕ್ತರು, ಪುರುವಂತರು ವಡಪುಗಳನ್ನು ಹೇಳುವದು, ಶಸ್ತ್ರಗಳನ್ನು ಹಾಕಿಕೊಳ್ಳುವದು ವಿಶೇಷವಾಗಿ ಕಂಡು ಬರುತ್ತದೆ. ದೇವಸ್ಥಾನದ ಪಲ್ಲಕ್ಕಿ, ಪುರವಂತರು, ನಂದಿಕೋಲದವರು ಹಾಗೂ ಅಸಂಖ್ಯಾತ ಭಕ್ತರು, ಧಗ ಧಗಿಸುವ ಬೆಂಕಿಯಲ್ಲಿ ಭಕ್ತಿಯಿಂದ ವೀರಭದ್ರ ದೇವರ ಹೆಸರು ಹೇಳುತ್ತಾ ಖಡೇ ಖಡೇ ಶ್ರೀ ವೀರಭದ್ರ ಎಂದು ಅಗ್ನಿಯಲ್ಲಿ ಹಾಯುವ ದೃಶ್ಯ ರೋಮಾಂಚನಕಾರಿಯಾಗಿರುತ್ತದೆ. ಸುಮಾರು 5 ದಿನಗಳ ಕಾಲ ಜರುಗುವ ಜಾತ್ರಾ ಮಹೋತ್ಸವ ನಂಬಿದ ಭಕ್ತರಿಗೆ ಇದೊಂದು ಸಂಭ್ರಮದ ವಾತಾವರಣ ಕಲ್ಪಿಸಿಕೊಡುವದರಲ್ಲಿ ಸಂಶಯವಿಲ್ಲ. ಬನ್ನಿ ನಾವು ನೀವೆಲ್ಲಾ ಈ ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿ, ವೀರಭದ್ರ ದೇವರ ಕೃಪಾಶೀರ್ವಾದ ಪಡೆಯೋಣ.

ಮಹಾಬಳೇಶ್ವರ ಗುಡಗುಂಟಿ. ಬಾಗಲಕೋಟೆ

# ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ, ಕಂಪ್ಲಿ ತಾಲೂಕಿನಲ್ಲಿ ಸಜ್ಜು

• ವರದಿ: ಚೆನ್ನಕೇಶವ ಕಂಪ್ಲಿ






ಕಂಪ್ಲಿ ತಾಲೂಕಿನಾದ್ಯಂತ ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾ. 18ರಿಂದ ಏಪ್ರಿಲ್ 2ರ ವರೆಗೂ ನಡೆಯಲಿದ್ದು ಶಿಕ್ಷಣ ಇಲಾಖೆ ಪರೀಕ್ಷೆಗಳನ್ನು ಪಾರದರ್ಶಕತೆಯಿಂದ ನಡೆಸಲು ಸಕಲ ಸಿದ್ಧತೆ ಕೈಗೊಂಡಿದೆ.

ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ 6ಕೇಂದ್ರಗಳು, 91 ಕೊಠಡಿಗಳನ್ನು ಗುರುತಿಸಲಾಗಿದೆ. ಸರಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢಶಾಲೆಗಳ ಬಾಲಕಿಯರು 961, ಬಾಲಕರು 1073, ಒಟ್ಟು 2034 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿಯಾಗಿದ್ದಾರೆ.

ಸಿಸಿ ಕ್ಯಾಮೆರಾ ಅಳವಡಿಕೆ:ಎಸ್ಸೆಸ್ಸೆಲ್ಸಿ ಪರೀಕ್ಷೆಯ 6 ಕೇಂದ್ರಗಳ 91 ಕೊಠಡಿಗಳಿಗೆ 110 ಸಿಸಿ ಕ್ಯಾಮೆರಾ ಅಳವಡಿಕೆ ಕಾರ್ಯ ನಡೆಸಲಾಗಿದೆ.

ಎಲ್ಲ ಕೇಂದ್ರಗಳಲ್ಲೂ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು, ಕಸ್ಟೋಡಿಯನ್ನರು, ಸ್ಥಾನಿಕ ಜಾಗೃತದಳ ಅಧಿಕಾರಿಗಳು, ಮೊಬೈಲ್ ಸ್ವಾಧಿನಾಧಿಕಾರಿಗಳು, ಕೊಠಡಿ ಮೇಲ್ವಿಚಾರಕರು, ಹೆಚ್ಚುವರಿ ಸಿಬ್ಬಂದಿ ಒಟ್ಟು 150 ಜನ ಸಿಬ್ಬಂದಿಯನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಬಿಇಒ ಕುರುಗೋಡು ಸಿದ್ದಲಿಂಗಯ್ಯ ಮೂರ್ತಿ ನೇತೃತ್ವದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಸಕಲ ಸಿದ್ಧತೆ ಮಾಡಿದ್ದಾರೆ.

**6 ಪರೀಕ್ಷೆ ಕೇಂದ್ರಗಳು:** 1ನೇ ಪರೀಕ್ಷೆ ಕೇಂದ್ರ ಶಾಮಿಯ ಚಂದ್ ಸರ್ಕಾರಿ ಪ್ರೌಢಶಾಲೆ ಬಾಲಕರ ಕಂಪ್ಲಿ. 2ನೇ ಪರೀಕ್ಷೆ ಕೇಂದ್ರ ಬಾಲಕಿರ ಪ್ರೌಢಶಾಲೆ ಕಂಪ್ಲಿ. 3ನೇ ಪರೀಕ್ಷೆ ಕೇಂದ್ರ ವಿಜಯನಗರ ಆಂಗ್ಲ ಮಾಧ್ಯಮ ಪ್ರೌಢಶಾಲೆ. ನಾಲ್ಕನೇ ಪರೀಕ್ಷೆ ಎಮಿಗನೂರು ಸರ್ಕಾರಿ ಪ್ರೌಢಶಾಲೆ. 5ನೇ ಪರೀಕ್ಷೆ ಕೇಂದ್ರ ವಿದ್ಯಾ ಭಾರತಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಸುಗ್ಗನಹಳ್ಳಿ. 6ನೇ ಪರೀಕ್ಷೆ ಕೇಂದ್ರ ಓಡೋ ಜೆಡೆಮ್ಮ ಗುರುಸಿದ್ದಯ್ಯ ಪ್ರೌಢಶಾಲೆ, ಸಣಾಪುರು ರಸ್ತೆ, ಕಂಪ್ಲಿ, ಈ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿವೆ. ಈ ಎಲ್ಲ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲು ಸೂಕ್ತವಾದ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಈ ಕೊಠಡಿಗಳಲ್ಲಿ ಕುಡಿಯುವ ನೀರು, ಗಾಳಿ, ಬೆಳಕು ಇರುವಂತೆ ವ್ಯವಸ್ಥೆ ಮಾಡಲಾಗಿದೆ.

**ನಿಷೇಧ:** ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಪ್ರದೇಶ ನಿಷೇಧಿತವಾಗಿದ್ದು ಸಮೀಪವಿರುವ ಝುರಾಕ್ಸ್, ಸೈಬರ್ ಕೇಂದ್ರಗಳನ್ನು ತೆರೆಯುವಂತಿಲ್ಲ. ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಬೇರಾವುದೇ ಸಿಬ್ಬಂದಿ ಮೊಬೈಲ್ ಬಳಕೆ ನಿಷೇಧಿಸಲಾಗಿದೆ. ಪರೀಕ್ಷಾ ಸಿಬ್ಬಂದಿ ಗುರುತಿನ ಚೀಟಿ ಧರಿಸಬೇಕು. ವಿದ್ಯಾರ್ಥಿಗಳಿಗೆ ಮೊಬೈಲ್, ಬ್ಲೂ ಟೂತ್ ವಿದ್ಯುನ್ಮಾನ ಉಪಕರಣ ನಿಷೇಧಿಸಲಾಗಿದೆ, ಕೇಂದ್ರದಲ್ಲಿ ಪರೀಕ್ಷಾ ಸಿಬ್ಬಂದಿಯನ್ನು ಹೊರತು ಪಡಿಸಿ ಅನ್ಯರಿಗೆ ಪ್ರವೇಶ ನಿಷೇಧ ಮಾಡಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ಶೌಚಾಲಯ, ಸ್ವಚ್ಚತೆಗೆ ಆದ್ಯತೆ, ಕುಡಿಯುವ ನೀರಿನ ವ್ಯವಸ್ಥೆ, ಪ್ರತಿ ಕೇಂದ್ರಕ್ಕೆ ಆರೋಗ್ಯ ಸಿಬ್ಬಂದಿ, ಸಾರಿಗೆ ಬಸ್ ವ್ಯವಸ್ಥೆ, ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಸಿಬ್ಬಂದಿ, ಪರೀಕ್ಷಾ ಕೇಂದ್ರಗಳ ಭದ್ರತೆಗೆ ಪೊಲೀಸರನ್ನು ನಿಯೋಜಿಸಿದ್ದಾರೆ.

**ವಿಕಲಚೇತನರಿಗೆ ಒಂದು ತಾಸು ಹೆಚ್ಚಿಗೆ:** ವಿಕಲಚೇತನ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ವಾಚಕರು, ಸಹಾಯಕರು ಮತ್ತು ಸಹಾಯಕ ಬರಹಗಾರರನ್ನು ನೇಮಿಸಿಕೊಳ್ಳಬಹುದು. ಒಂದು ಗಂಟೆ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ. ನೆಲ ಮಹಡಿಯಲ್ಲಿ ಆಸನದ ವ್ಯವಸ್ಥೆ ಮಾಡಲಾಗುತ್ತದೆ.

**ಸಮಿತಿ ರಚನೆ:** ಮಾ. 18ರಿಂದ ನಡೆಯುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಪಾರದರ್ಶಕವಾಗಿ ನಡೆಸಲು ಎಲ್ಲ ಸಿದ್ಧತೆಯನ್ನು ಕೈಗೊಂಡಿದೆ ಪೊಲೀಸ್ ಬಂದೋಬಸ್ತ್, ಸಿ.ಸಿ. ಕ್ಯಾಮೆರಾ, ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಿದೆ. ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ವಿತರಿಸಲು ತಹಸೀಲ್ದಾರ್, ಕೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗನ್ನೊಳಗೊಂಡ ಪ್ರಶ್ನೆಪತ್ರಿಕೆ ಪಾಲಕರ ತ್ರಿಸದಸ್ಯ ಸಮಿತಿ ರಚಿಸಲಾಗಿದೆ. ಪ್ರಶ್ನೆ ಪತ್ರಿಕೆ ವಿತರಿಸುವ ವಾಹನಗಳಿಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ ಎಂದು ಕುರುಗೋಡು ಬಿಇಒ ಸಿದ್ದಲಿಂಗಯ್ಯ ಮೂರ್ತಿ ತಿಳಿಸಿದ್ದಾರೆ.

ಕಂಪ್ಲಿ ತಾಲೂಕಿನಲ್ಲಿ ಒಟ್ಟು 6 ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ತೊಂದ–ರೆಯಾಗದಂತೆ ಸಕಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಪಾರದರ್ಶಕವಾಗಿ ಪರೀಕ್ಷೆಗಳು ನಡೆಯಲಿವೆ ಎಂದು ಕುರುಗೋಡು ಎಸ್ ಎಲ್ ಸಿ ಪರೀಕ್ಷೆ ನೋಡಲ್ಲ ಅಧಿಕಾರಿ ವಿಶ್ವನಾಥ್ ಹೇಳಿದ್ದಾರೆ.

## ಇಂದು ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ



**ಸಿಂಧನೂರು:** ಇಂದು ರಾಜ್ಯಾದ್ಯಂತ 2025–26ನೇ ಸಾಲಿನ ಎಸ್. ಎಸ್ .ಎಲ್. ಸಿ ಪರೀಕ್ಷೆ ಪ್ರಾರಂಭ ಹಿನ್ನೆಲೆಯಲ್ಲಿ ಸಿಂಧನೂರು ತಾಲೂಕಿನ ಸರಕಾರಿ– 50 ಇತರ ಇಲಾಖೆ–12 ಅನುದಾನಿತ– 11 ಖಾಸಗಿ– 12 ಒಟ್ಟು– 104 ಶಾಲೆಗಳು ಮಕ್ಕಳು ಎಸ್ ಎಸ್ ಎಲ್ ಸಿ ಪರೀಕ್ಷೆ ಸಿದ್ಧತೆಗೆ ತಯಾರಾಗಿದ್ದಾರೆ. ಎಂದು ತಿಳಿಸಿದರು.

**ಪರೀಕ್ಷೆ ಸಿದ್ಧತೆ ಕೇಂದ್ರಗಳು:** ತಾಲೂಕು ಮಟ್ಟದ ಪರೀಕ್ಷೆ ಕೇಂದ್ರಗಳು– 05 ಹೋಬಳಿ ಮಟ್ಟದಲ್ಲಿ –06 ಗ್ರಾಮೀಣ ಭಾಗದ– 08. ಒಟ್ಟು– 19 ಪರೀಕ್ಷೆ ಕೇಂದ್ರಗಳ ಇದ್ದಿದ್ದು, ಇದರಲ್ಲಿ ಸರ್ಕಾರಿ, ಇತರರು ಇಲಾಖೆ ಹಾಗೂ ಖಾಸಗಿ ಶಾಲೆಗಳ ಸೇರಿ ಒಟ್ಟು–5799 ವಿದ್ಯಾರ್ಥಿ ವಿದ್ಯಾರ್ಥಿನಿಯರು ಪರೀಕ್ಷೆ ಬರೆಯಲಿದ್ದಾರೆ ಎಂದು ಹೇಳಿದರು.

**ಪರೀಕ್ಷೆ ಸಿದ್ಧತೆ ಸಿಬ್ಬಂದಿಗಳು ನೇಮಕ:** ಅಧೀಕ್ಷರು –19 ಉಪ ಆಧೀಕ್ಷಕರು– 4 ಕಷ್ಟೂಡಿಯಾನ್ –19 ಮೊಬೈಲ್ ಸ್ವಾಧೀನ ಅಧಿಕಾರಿಗಳು–19 ಮಾರ್ಗ ಅಧಿಕಾರಿಗಳು –8 ಸ್ಥಿರ ಜಾಗ್ರತೆ ಅಧಿಕಾರಿಗಳು –19 ಸಂಚಾರಿ ಜಾಗ್ರತೆ ಅಧಿಕಾರಿಗಳು –3 ಕೊಠಡಿ ಮೇಲ್ವಿಚಾರಕರು –242 ಸೇರಿದಂತೆ ಪರೀಕ್ಷೆ ಸಿದ್ಧತೆಗೆ –333 ಅಧಿಕಾರಿಗಳು ಸಿಬ್ಬಂದಿ ವರ್ಗದವರು ನೇಮಕ ಮಾಡಲಾಗಿದೆ. ಎಂದು ತಾಲೂಕು ಶಿಕ್ಷಣಾಧಿಕಾರಿ ಬಸಲಿಂಗಪ್ಪ ಅವರು ಪತ್ರಿಕೆಗೆ ಮಾಹಿತಿ ನೀಡಿದರು.

## ಪುನೀತ್‌ರಾಜ್ ಕುಮಾರ್ ಜನ್ಮ ದಿನಾಚರಣೆಯ ಪ್ರಯುಕ್ತ ರಕ್ತದಾನ ಮತ್ತು ಅನ್ನದಾನ ಯಶಸ್ವಿ



**ಹಗರಿಬೊಮ್ಮನಹಳ್ಳಿ:** ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿಯಲ್ಲಿ ಕನ್ನಡದ ಖ್ಯಾತ ನಟ ಪುನೀತ್ ರಾಜ್ ಕುಮಾರ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ಸಮಾಜಮುಖಿ ಕಾರ್ಯಗಳಾದ ರಕ್ತದಾನ ಮತ್ತು ಅನ್ನದಾನ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಸ್ಥಳೀಯ ಅಭಿಮಾನಿ ಬಳಗಗಳು ಮತ್ತು ಸಮಾಜಸೇವಾ ಸಂಘಟನೆಗಳ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನೂರಾರು ಯುವಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು. ರಕ್ತದಾನದ ಮೂಲಕ ಅನೇಕ ಜೀವಗಳನ್ನು ಉಳಿಸಲು ಸಾಧ್ಯ ಎಂಬ ಸಂದೇಶವನ್ನು ಈ ಕಾರ್ಯಕ್ರಮ ಸಾರಿತು.

ಅನ್ನದಾನ ಕಾರ್ಯಕ್ರಮದಲ್ಲಿ ಬಡವರು, ನಿರಾಶ್ರಿತರು ಹಾಗೂ ಸಾರ್ವಜನಿಕರಿಗೆ ಉಚಿತವಾಗಿ ಊಟ ವಿತರಿಸಲಾಯಿತು. ಭಾಗವಹಿಸಿದವರು "ಅಪ್ಪು" ಅವರ ಮಾನವೀಯತೆ ಮತ್ತು ಸೇವಾಭಾವವನ್ನು ಸ್ಮರಿಸಿ, ಅವರ ಆದರ್ಶಗಳನ್ನು ಮುಂದುವರಿಸುವುದಾಗಿ ಪ್ರತಿಜ್ಞೆ ಮಾಡಿದರು.

ಕಾರ್ಯಕ್ರಮದಲ್ಲಿ ಅಪ್ಪು ಅಭಿಮಾನಿಯಾದ ಪ್ರವೀಣ್ ಅವರು ಮಾತನಾಡಿ, ಪುನೀತ್ ರಾಜ್ ಕುಮಾರ್ ಅವರ ಸಮಾಜಸೇವೆ, ಸರಳತೆ ಮತ್ತು ಜನಪ್ರೀತಿ ಸದಾ ಸ್ಮರಣೀಯವಾಗಿರುತ್ತದೆ ಎಂದು ಹೇಳಿದರು. ಶಿವುರವರು ಮಾತನಾಡಿ ಈ ರೀತಿಯ ಸೇವಾ ಕಾರ್ಯಕ್ರಮಗಳು ಸಮಾಜದಲ್ಲಿ ಒಳ್ಳೆಯ ಸಂದೇಶವನ್ನು ಹರಡುತ್ತವೆ ಎಂದು ಅಭಿಪ್ರಾಯಪಟ್ಟರು.

ಒಟ್ಟಿನಲ್ಲಿ, ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ಈ ರಕ್ತದಾನ ಮತ್ತು ಅನ್ನದಾನ ಕಾರ್ಯಕ್ರಮಗಳು ಪುನೀತ್ ರಾಜ್ ಕುಮಾರ್ ಅವರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು , ಈ ಸಂದರ್ಭದಲ್ಲಿ ಗಣೇಶ್, ವಿಶ್ವನಾಥ್,ನಾಗಭೂಷಣ ಸೇರಿದಂತೆ ನೂರಾರು ಜನ ಅಭಿಮಾನಿಗಳು ಇದ್ದರು.

## ಗುಡ್ಡಗಾಡು ಪ್ರದೇಶ ತುರ್ತು ಆರೋಗ್ಯ ಸೇವೆ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕು ಅರೋಗ್ಯಾಧಿಕಾರಿಗಳ ಕಾರ್ಯಲಯ ಸಿಂಧನೂರು ತುರ್ವಿಹಾಳ ಸಮುದಾಯ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಹೊಸಳ್ಳಿ. ಕೆ. ಗ್ರಾಮದಲ್ಲಿ ಇಂದು ಆರೋಗ್ಯ ಸೇತು ಕಾರ್ಯಕ್ರಮದ ಅಡಿಯಲ್ಲಿ ಗೀತಾ ಹಿರೇಮಠ ಮಾತನಾಡಿ ಗುಡ್ಡಗಾಡು ಪ್ರದೇಶ ಮತ್ತು ಸಂಪರ್ಕ ರಹಿತ ಪ್ರದೇಶ ಗಳಲ್ಲಿ ತುರ್ತು ಪರಿಸ್ಥಿತಿಗಳಲ್ಲಿ ಆರೋಗ್ಯ ಸೇವೆ ಜೊತೆಗೆ ಗರ್ಭಿಣಿಯರ ಶಿಶುಗಳ ಆರೋಗ್ಯದಕುರಿತು ಕಿಶೋರಿಯರು ಮತ್ತು ವೃದ್ಧರ ಆರೋಗ್ಯ ಪರಿಶೀಲನೆ ನಡೆಸುವುದು ಮತ್ತು ಹದಿಹರೆಯದ ಹೆಣ್ಣು ಮಕ್ಕಳ ಸಮಸ್ಯೆ, ಪೌಷ್ಟಿಕ ಆಹಾರದ ಬಗ್ಗೆ ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣದ ಜೊತೆಗೆ ಆರೋಗ್ಯ ಸೇವೆಗಳನ್ನು ಹಾಗೂ



ಆರೋಗ್ಯ ಜಾಗೃತಿ ಮೂಡಿಸುವುದು ಗಂಡಾಂತರ ಗರ್ಭಿಣಿ ಹಾಗೂ ಗರ್ಭಿಣಿಯರ ರಕ್ತ ಪರೀಕ್ಷೆ ಸೂಕ್ತ ಆರೋಗ್ಯ ಸಲಹೆ ನೀಡಿಲಾಯಿತು.

ನಂತರ ಸಾಂಕ್ರಾಮಿಕ ರೋಗಗಳ ಬಗ್ಗೆ, ಬಿಪಿ, ಶುಗೂರ್, ಅಸಾಂಕ್ರಾಮಿಕ ರೋಗಗಳ ಪರೀಕ್ಷೆ ಮಾಡಿ ಚಿಕಿತ್ಸೆ ನೀಡಲಾಯಿತು ಮಾಹಿತಿ ನೀಡಲಾಯಿತು ಈ ಸಂದರ್ಭದಲ್ಲಿ ಪವಿತ್ರ ಅಲೂಔ, ಆಂಜನೇಯ S/N, ಹನುಮಂತಿ ಆಶಾ ಕಾರ್ಯಕರ್ತೆ, ಮಗ್ಗೆಮ್ಮ ಅಂಗನವಾಡಿ ಕಾರ್ಯಕರ್ತೆ, ಮೈಬುಬ್ ಸಾಬ್, ಗರ್ಭಿಣಿ ತಾಯಂದಿರು, ಹಿರಿಯನಾಗರಿಕರು ಉಪಸ್ಥಿತರಿದ್ದರು.

## ಅಂತಃಕರಣದ ಗುರುಗಳು ಸಿದ್ಧರಾಮಾನಂದರು

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಇತ್ತೀಚೆಗೆ ಅಗಲಿದ ಕಾಗಿನೆಲೆ ಮಹಾಸಂಸ್ಥಾನ ಮಠದ ಪೀಠಾಧಿಪತಿ ಸಿದ್ಧರಾಮಾನಂದ ಮಹಾಸ್ವಾಮಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂತಃಕರಣ ಹೊಂದಿದ್ದರು ಎಂದು ಬಸವ ಮಹಾಮನೆಯ ಸತ್ಯಕ್ಕಾ ತಾಯಿಯವರು ಹೇಳಿದರು.

ನಗರದಲ್ಲಿ ಜಿಲ್ಲಾ ಗೊಂಡ ಕುರುಬ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಕಾಗಿನೆಲೆ ಮಹಾಸಂಸ್ಥಾನದ ತಿಂಥಣಿ ಬ್ರಿಜ್ ಶಾಖಾಮಠದ ಪೀಠಾಧಿಪತಿ ಪೂಜ್ಯ ಬ್ರಹ್ಮಲೀನ ಶ್ರೀ ಸಿದ್ದರಾಮನಂದಪುರಿ ಮಹಾಸ್ವಾಮಿಗಳ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾಮೀಜಿಯವರ ಸಾಮಾಜಿಕ ಕಾರ್ಯಗಳು ಶ್ಲಾಘನೀಯ ಎಂದರು.

ಶ್ರೀಮಠ ಜಾತ್ಯತೀತ ನಿಲುವು ಹೊಂದಿದ್ದು, ಸಮಾಜದ ಬಡ ಮಕ್ಕಳ ಶಿಕ್ಷಣಕ್ಕಾಗಿ ಶಾಲಾ ಕಾಲೇಜು ವಸತಿ ನಿಲಯಗಳನ್ನು ಸ್ಥಾಪಿಸಿದರು. ಕ್ರೈಸ್ತ, ಜೈನ, ಲಿಂಗಾಯತ ಧರ್ಮದ ತತ್ವಗಳಿಂದ ಪ್ರಭಾವಿತರಾದ ಶ್ರೀಗಳ ಸಾಮಾಜಿಕ ಕೆಲಸಗಳು



ಅನನ್ಯ ಎಂದರು. ಬೆಳಗಾವಿ ವಿಭಾಗದ ಆರಕ್ಷಕ ಉಪ ಮಹಾ ನಿರೀಕ್ಷಕ ಬಸವರಾಜ ಜಿಳ್ಳೆ ಮಾತನಾಡಿ, ಕಲ್ಯಾಣ ಕರ್ನಾಟಕದ ಕುರುಬ ಸಮುದಾಯಕ್ಕೆ ಹಾಲುಮತ ಸಾಂಸ್ಕೃತಿಕ ವೈಭವ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಸಾಹಿತ್ಯ ಕಲೆಗಳು ಪರಿಚಸುವ ಕೆಲಸ ಶ್ರೀಗಳು ಮಾಡಿದ್ದಾರೆ. ಕಂಬಳಿ ನೆಯ್ಗೆ, ಡೊಳ್ಳು ಕುಣಿತ, ಕಂಸಾಳೆ ಕುಣಿತದಂಥ ಗ್ರಾಮೀಣ ಕಲೆಗಳನ್ನು ಬೆಳೆಸುವ ಕಾರ್ಯ ಅವರು ಮಾಡಿದ್ದಾರೆ. ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವಂತಹ ಪ್ರಯತ್ನ ನಿರಂತರವಾಗಿ ಮಾಡುತ್ತಾ ಬಂದಿದ್ದರು ಎಂದರು.

## ಡಿವಿಜಿ ಹಾಕಿಕೊಟ್ಟ ಮಾರ್ಗವೇ ಸಂಘಟನೆಗೆ ದಾರಿದೀಪ: ತಗಡೂರು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು




ಆಧುನಿಕ ಕನ್ನಡ ಸಾಹಿತ್ಯದ ಸರ್ವಜ್ಞ, ಸಾಹಿತ್ಯ ದಿಗ್ಗಜ ಡಿ.ವಿ.ಗುಂಡಪ್ಪನವರು ಕೇವಲ ಸಾಹಿತಿಯಷ್ಟೇ ಅಲ್ಲದೆ, ಪತ್ರಕರ್ತರ ಹಿತರಕ್ಷಣೆಗಾಗಿ 95 ವರ್ಷಗಳ ಹಿಂದೆಯೇ ಸಂಘಟನೆಯನ್ನು ಕಟ್ಟಿದ ದೂರದರ್ಶಿ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (KUWJ)ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಬಣ್ಣಿಸಿದರು.

ನಗರದಲ್ಲಿ ಬೆಂಗಳೂರು ಜಿಲ್ಲಾ ಘಟಕದ ನೂತನ ಕಚೇರಿ ಪೂಜೆ ಹಾಗೂ ಡಿ.ವಿ.ಜಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

**ಅಂದು ಮೈಸೂರು ರಾಜ್ಯ ಪತ್ರಕರ್ತರ ಸಂಘ, ಇಂದು ಕೆ.ಯು.ಡಬ್ಲ್ಯು.ಜೆ:** ಡಿ.ವಿ.ಜಿ ಅವರು ಅಂದು ಹಾಕಿಕೊಟ್ಟ ಅಡಿಪಾಯದ ಮೇಲೆ ಇಂದು 'ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ' ಹೆಮ್ಮರವಾಗಿ ಬೆಳೆದಿದೆ. ಸುಮಾರು 10,000 ಸದಸ್ಯರನ್ನು ಹೊಂದಿರುವ ಇದು ದೇಶದ ಅತಿದೊಡ್ಡ ಸಂಘಟನೆಗಳಲ್ಲಿ ಒಂದಾಗಿದೆ. ಹಿರಿಯ ಪತ್ರಕರ್ತ ಖಾದ್ರಿ ಶಾಮಣ್ಣ ಸಮಿತಿಯ ಶಿಫಾರಸಿನ ಮೇರೆಗೆ ಹುಬ್ಬಳ್ಳಿಯಲ್ಲಿ ನಡೆದ ಸಮ್ಮೇಳನದಲ್ಲಿ ಈ ಸಂಘಕ್ಕೆ ಮರುನಾಮಕರಣ ಮಾಡಲಾದ ಇತಿಹಾಸವನ್ನು ತಗಡೂರು ಸ್ಮರಿಸಿದರು.

**ಬಹುಮುಖ ಪ್ರತಿಭೆಯ ಮೇರು ವ್ಯಕ್ತಿತ್ವ:** ಕರ್ನಾಟಕ ಭೂ ಕಬಳಿಕೆ ನಿಷೇಧ ನ್ಯಾಯಾಲಯದ (ಕಂದಾಯ)ಸದಸ್ಯ ಕೆ.ಎಚ್. ಅಶ್ವತ್ಥನಾರಾಯಣ ಮಾತನಾಡಿ, ಡಿ.ವಿ.ಜಿ ಅವರು ಪ್ರೌಢಶಾಲೆವರೆಗೆ ಓದಿದ್ದರೂ, ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯಲ್ಲಿ ಅವರು ಹೊಂದಿದ್ದ ಪಾಂಡಿತ್ಯ ಅಪ್ರತಿಮವಾದುದು. ಅವರ "ಮಂಕುತಿಮ್ಮನ ಕಗ್ಗ" ಅಪ್ರತಿಮ ಕೃತಿಯು ಸಮಾಜದ ಪ್ರತಿಯೊಂದು ಸಮಸ್ಯೆಗೆ ಪರಿಹಾರ ನೀಡುವ ಶಕ್ತಿ ಹೊಂದಿವೆ ಎಂದರು.

**ಮಂಕುತಿಮ್ಮನ ಕಗ್ಗವೇ ಸಂವಿಧಾನ:** ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಮಾತನಾಡಿ, "ದೇಶಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಹೇಗೋ, ಪತ್ರಕರ್ತರು ಮತ್ತು ಸಾಮಾನ್ಯ ಜನರ ಬದುಕಿಗೆ ಡಿ.ವಿ.ಜಿ ಅವರ 'ಮಂಕುತಿಮ್ಮನ ಕಗ್ಗ' ಸಂವಿಧಾನದಂತಿದೆ. ಡಿ.ವಿ.ಜಿ ಅವರು ಎಷ್ಟೇ ಬಡತನವಿದ್ದರೂ ಸರ್ಕಾರದ ಚೆಕ್‌ಗಳನ್ನು ನಗದೀಕರಿಸದೆ ಸ್ವಾಭಿಮಾನಿಯಾಗಿ ಬದುಕಿದ ಆದರ್ಶ ವ್ಯಕ್ತಿತ್ವದವರು," ಎಂದು ಕೊಂಡಾಡಿದರು.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಮಾತನಾಡಿದ, ಹಿರಿಯ ಪತ್ರಕರ್ತ ಭೋಪಯ್ಯ ಅವರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಂಸ್ಥಾಪಕರಾದ ಡಿ.ವಿ.ಗುಂಡಪ್ಪನವರ ಹುಟ್ಟುಹಬ್ಬದ ದಿನದಂದೇ ಬೆಂಗಳೂರು ಜಿಲ್ಲಾ ಘಟಕ ಇಂದಿನಿಂದಲೇ ತಮ್ಮ ಕಚೇರಿ ಪೂಜೆ ಮಾಡುವುದರೊಂದಿಗೆ ಅವರ ಜನ್ಮದಿನಾಚರಣೆ ಕಾರ್ಯಕ್ರಮದೊಂದಿಗೆ ಕಾರ್ಯಾರಂಭ ಮಾಡಿದೆ. ಇದೊಂದು ಶುಭ ಸೂಚನೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಜೆ.ಸಿ.ಲೋಕೇಶ್, ಹಾಗೂ ಬೆಂಗಳೂರು ನಗರ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ನಂಬಿಕೆ: ಬದುಕಿನ ಭದ್ರ ಬುನಾದಿ



ಭೋಗ–ಐಭೋಗ

• ವೀರಣ್ಣ ಕಲಕೇರಿ
ಕೆಂಭಾವಿ

"ನಂಬಿಕೆ ಎನ್ನುವುದು ಗಾಜಿನಂತೆ, ಒಮ್ಮೆ ಒಡೆದರೆ ಮತ್ತೆ ಎಂದಿಗೂ ಮೊದಲಿನಂತಾಗದು" ಎನ್ನುವ ಮಾತಿನಂತೆ, ನಂಬಿಕೆಯಲ್ಲಿ ಬಿರುಕು ಮೂಡಲು ಹಲವು ಕಾರಣಗಳಿರಬಹುದು. ಆದರೆ ಈ ಎಲ್ಲ ಕಾರಣಗಳ ಮೂಲ ಪ್ರೇರಣೆ ಎಂದರೆ ಅದು ಮನುಷ್ಯನ ಅತಿಯಾದ ಸ್ವಾರ್ಥ ಮತ್ತು ವಿಶಾಲ ಮನೋಭಾವದ ಕೊರತೆ.

**ನಂಬಿಕೆಯನ್ನು ನಾವು ಎರಡು ನೆಲೆಗಳಲ್ಲಿ ಗುರುತಿಸಬಹುದು:** ಆಂತರಿಕ ನಂಬಿಕೆ ಮತ್ತು ಬಾಹ್ಯ ನಂಬಿಕೆ. ಕೌಟುಂಬಿಕ ಸಂಬಂಧಗಳ ನಡುವಿನ ನಂಬಿಕೆ ಆಂತರಿಕ ನಂಬಿಕೆಯಾದರೆ, ಸ್ನೇಹ ಹಾಗೂ ಸಾಮಾಜಿಕ ಸಂಬಂಧಗಳ ನಂಬಿಕೆ ಬಾಹ್ಯವಾದುದು. ಕುಟುಂಬದಲ್ಲಿ ತಂದೆ–ತಾಯಿ, ಹೆಂಡತಿ, ಮಕ್ಕಳು, ಸಹೋದರರು, ಸಹೋದರಿಯರು ಹೀಗೆ ರಕ್ತಸಂಬಂಧಗಳಿಗೆ ನಂಬಿಕೆ ಭದ್ರ ಅಡಿಪಾಯವಾದರೆ, ಮಿತ್ರತ್ವವು ನಾವು ಅನ್ವೇಷಿಸಿ ಕಂಡುಕೊಂಡ ಆತ್ಮೀಯತೆಯ ಮೇಲೆ ವಿಶ್ವಾಸವನ್ನು ಮೂಡಿಸುತ್ತದೆ. ಕುಟುಂಬದ ನಂಬಿಕೆ ಬದುಕಿಗೆ ಶಕ್ತಿಯಾದರೆ, ಕಷ್ಟಕಾಲದಲ್ಲಿ ನೆರಳಾಗಿ ನಿಲ್ಲುವ ಸ್ನೇಹದ ನಂಬಿಕೆ ಬದುಕಿಗೆ ಧೈರ್ಯ ನೀಡುತ್ತದೆ. ಈ ಎರಡೂ ಸಂಬಂಧಗಳಲ್ಲಿ 'ನಂಬಿಕೆ' ಎನ್ನುವುದು ಬದುಕನ್ನು ಮುನ್ನಡೆಸುವ ಅತ್ಯಂತ ಶಕ್ತಿಶಾಲಿ ಸೂತ್ರವಾಗಿದೆ.

ಕುಟುಂಬ ಎನ್ನುವುದು ಕೇವಲ ನಾಲ್ಕು ಗೋಡೆಗಳ ಮನೆಯಲ್ಲ; ಅದು ನಂಬಿಕೆಯ ಮೇಲೆ ನಿಂತಿರುವ ಒಂದು ಆಡಳಿತ ವ್ಯವಸ್ಥೆ, ಅದೊಂದು ಸಾಮ್ರಾಜ್ಯ. ಇಲ್ಲಿ 'ನಂಬಿಕೆ' ರಕ್ತ ಸಂಬಂಧದೊಂದಿಗೆ ಹುಟ್ಟಿನಿಂದಲೇ ಬೆಸೆದುಕೊಂಡಿರುತ್ತದೆ. ತಂದೆ–ತಾಯಿಯ ಮೇಲಿರುವ ನಂಬಿಕೆ ಮಗುವಿಗೆ ಆತ್ಮಸ್ಥೈರ್ಯ ನೀಡಿದರೆ, ಮಕ್ಕಳ ಮೇಲಿನ ನಂಬಿಕೆ ಹೆತ್ತವರಿಗೆ ನೆಮ್ಮದಿ ತರಬೇಕು. ಹೀಗೆ ಜೀವನದಲ್ಲಿ ಎಷ್ಟೇ ಕಷ್ಟ–ನಷ್ಟಗಳು ಬಂದರೂ, "ನಮ್ಮವರು ನಮ್ಮ ಜೊತೆಗಿದ್ದಾರೆ" ಎಂಬ ಗಾಢವಾದ ನಂಬಿಕೆಯೇ ಪ್ರತಿಯೊಬ್ಬ ವ್ಯಕ್ತಿಯ ಮುನ್ನಡೆಗೆ ಪ್ರೇರಣೆಯಾಗುತ್ತದೆ.

ಕುಟುಂಬ ನಮಗೆ ಜನ್ಮದತ್ತವಾಗಿ ಬಂದ–ರೆ, ಮಿತ್ರತ್ವ ಎನ್ನುವುದು ನಾವೇ ಅರಸಿಕೊಂಡ ಸಂಬಂಧ. ಇಲ್ಲಿ ರಕ್ತಸಂಬಂಧ ಇಲ್ಲದಿದ್ದರೂ, "ಅವ್ಯಕ್ತ ಭಾವಗಳು ಬೆಸೆದ ಮಿತ್ರತ್ವದ ಅನುಬಂಧ, ವ್ಯಕ್ತ ರಕ್ತ ಸಹೋದರತ್ವಕ್ಕೂ ಮಿಗಿಲಾದ ಸಂಬಂಧ ನೋಡಾ ಸೃಷ್ಟಿಬಲೇಶ" ಎನ್ನುವಂತೆ ಅಲ್ಲಿರುವ ನಂಬಿಕೆ ಅಪಾರವಾದುದು. ಮನದ ನೋವು–ನಲಿವುಗಳನ್ನು ಹಂಚಿಕೊಳ್ಳುವಾಗ, ಸೋತಾಗ ಹೆಗಲು ಕೊಡುವಾಗ ಕೆಲಸ ಮಾಡುವುದು ಪರಸ್ಪರರ ಮೇಲಿರುವ ಅಚಲ ವಿಶ್ವಾಸ. ಒಬ್ಬ ನಿಜವಾದ ಸ್ನೇಹಿತ ನಮ್ಮ ತಪ್ಪುಗಳನ್ನು ತಿದ್ದಿ ನಡೆಸುವಾಗ, ಆ ಸ್ನೇಹದ ನಂಬಿಕೆ ಬದುಕಿನ ದಾರಿದೀಪವಾಗುವುದರಲ್ಲಿ ಸಂದೇಹವಿಲ್ಲ.

**ಕ್ಷಣಿಕ ಸ್ವಾರ್ಥಕ್ಕಾಗಿ ನಂಬಿಕೆ ದ್ರೋಹ ಮಾಡುವುದು ಕೇವಲ ಸಂಬಂಧಕ್ಕೆ ಮಾಡುವ ಅನ್ಯಾಯವಲ್ಲ, ಅದು ನಮ್ಮ ಸ್ವಂತ ವ್ಯಕ್ತಿತ್ವಕ್ಕೆ ಮಾಡಿಕೊಳ್ಳುವ ಅವಮಾನ. ಕುಟುಂಬದ ಪ್ರೀತಿ ಮತ್ತು ಗೆಳೆತನದ ವಿಶ್ವಾಸವಿಲ್ಲದ ಜೀವನವು ಸ್ಮಶಾನಕ್ಕೆ ಸಮಾನ. ಆದ್ದರಿಂದ, ಗಳಿಸಿದ ನಂಬಿಕೆಯನ್ನು ಪ್ರಾಣಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳೋಣ.**

ಆದರೆ, ಈ ಅಮೂಲ್ಯವಾದ ನಂಬಿಕೆಯನ್ನು ಉಳಿಸಿಕೊಳ್ಳುವುದು ಅಷ್ಟೇ ಮುಖ್ಯ. ಒಮ್ಮೆ ನಂಬಿಕೆ ಮುರಿದರೆ ಆ ಸಂಬಂಧ ಮೊದಲಿನಂತಾಗುವುದು ಬಹಳ ಕಷ್ಟ. ದುರಂತವೆಂದರೆ, ಎಷ್ಟೋ ಜನರು ಸ್ನೇಹದ ಅನುಬಂಧವನ್ನು ಅರಿಯದೆ, ಆ ಸ್ನೇಹ ಭವಿಷ್ಯದಲ್ಲಿ ಎಷ್ಟು ಮುಖ್ಯವಾಗಬಹುದು ಎಂಬ ದೂರದೃಷ್ಟಿಯಿಲ್ಲದೆ ವರ್ತಿಸುತ್ತಾರೆ. ಆ ಕ್ಷಣದ ಸಣ್ಣ ಅನುಕೂಲಕ್ಕಾಗಿ, ವರ್ಷಗಳ ಕಾಲ ಜೊತೆ–ಗಿದ್ದ ಸ್ನೇಹಿತನ ನಂಬಿಕೆಯನ್ನು ಕಳೆದುಕೊಳ್ಳಲು ಅವರು ಹೇಸುವುದಿಲ್ಲ. "ಮಾಡಿದ ಉಪಕಾರವನ್ನು ಮರೆಯುವುದು ಮನುಷ್ಯತ್ವವನ್ನೇ ಮರೆತಂತೆ." ದ್ರೋಹ ಮಾಡುವವನಿಗೆ ಕನಿಷ್ಠ ಕೃತಜ್ಞತಾ ಭಾವವಾದರೂ ಇರಬೇಕು.

ಸ್ವಾರ್ಥಿಗಳಾಗಿ, ಸಂಕುಚಿತ ಮನೋಭಾವ ತಳೆದು, ಇತರರು ತಮಗಾಗಿ ಮಾಡಿದ ಸಹಕಾರ ಮತ್ತು ತ್ಯಾಗಗಳನ್ನು ಗೌಣವಾಗಿ ಕಂಡು ತಮ್ಮ ಬೇಳೆ ಬೇಯಿಸಿಕೊಳ್ಳುವವರ ಮಧ್ಯೆ ಸ್ನೇಹದ ಹೆಸರಲ್ಲಿ ನಂಬಿಕೆ ಇಡುವುದಾದರೂ ಹೇಗೆ? ಎಂಬ ಪ್ರಶ್ನೆ ಇಂದು ಹಲವರನ್ನು ಕಾಡದೆ ಇರದು. ಆಪತ್ಕಾಲದಲ್ಲಿ ಸಹಾಯ ಮಾಡಿದ ಕೈಗಳನ್ನು ಮರೆಯುವುದು ಕೇವಲ ಸ್ನೇಹಕ್ಕೆ ಮಾಡುವ ದ್ರೋಹವಲ್ಲ, ಅದು ನಮ್ಮ ವ್ಯಕ್ತಿತ್ವಕ್ಕೆ ನಾವೇ ಮಾಡಿಕೊಳ್ಳುವ ಅವಮಾನ.

ಸ್ವಾರ್ಥದಿಂದ ಸಾಧಿಸುವುದಾರೂ ಏನು? ನಾವು ಕ್ಷಣಿಕವಾಗಿ ಏನನ್ನೋ ಪಡೆಯಬಹುದು, ಆದರೆ ಒಮ್ಮೆ ಕಳೆದುಕೊಂಡ ನಂಬಿಕೆಯನ್ನು ಮತ್ತು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಮತ್ತೆ ಪಡೆಯಲು ಸಾಧ್ಯವೇ ಇಲ್ಲ. ಹಿರಿಯರು ಹೇಳುವಂತೆ, "ಸ್ವಾರ್ಥದಿಂದ ನಾವು ಸಾಮ್ರಾಜ್ಯವನ್ನೇ ಗೆದ್ದರೂ, ಪ್ರೀತಿ ಮತ್ತು ವಿಶ್ವಾಸವಿಲ್ಲದ ಆ ಸಾಮ್ರಾಜ್ಯ ಒಂದು ಸ್ಮಶಾನಕ್ಕೆ ಸಮಾನ." ಆದ್ದರಿಂದ ತಂದಿರುವುದು ಏನೂ ಇಲ್ಲ, ಒಯ್ಯುವುದೂ ಏನೂ ಇಲ್ಲ. ಹಾಗಾಗಿ ಇಲ್ಲಿಯೇ ಕಟ್ಟಿಕೊಂಡ ನಂಬಿಕೆಯನ್ನು ಕಳೆದುಕೊಳ್ಳುವುದಕ್ಕಿಂತ ಉಳಿಸಿಕೊಂಡು ಸಾಗೋಣ.

ನಂಬಿಕೆ ಎನ್ನುವುದು ಉಸಿರಿದ್ದಂತೆ, ಒಮ್ಮೆ ಹೋದರೆ ಮತ್ತೆ ಬರುವುದಿಲ್ಲ, ನಂಬಿಕೆ ಗಳಿಸಲು ವರ್ಷಗಳು ಬೇಕು, ಕಳೆದುಕೊಳ್ಳಲು ಒಂದು ಕ್ಷಣ ಸಾಕು".

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)